ರಂಜನೆ ಬೋಧನೆ ಪ್ರಚೋದನೆ


ಲಂಕೇಶ್


ಅಕ್ಟೋಬರ್ 28. 2009 ರೂ. 12/-

ಹೊಳೆಗೆ
ಹೊಸನೀರು
ವಿನಯಾ




ಂದಿರಾ ಗಾಂಧಿ ತಮ್ಮ ಬೆಂಗಳೂರಿನಲ್ಲಿ?





ನೆಹರೂ ಮಗನಿಗೆ ಜನ್ಮ ನೀಡಿದ್ದ ಸನ್ಯಾಸಿನಿ

ಇನ್ನೊಂದು 420 ಕೇಸ್!




ಮಂತ್ರಿ ಸುಧಾಕರನ ಮತ್ತೊಂದು ವಂಚನೆ



ಸೇವಾಭಾರತಿ ಪರಿಹಾರ ನಿಧಿ ಆರೆಸ್ಸೆಸ್ ಜೇಬಿಗೆ



ಅಶಾಂತಿ ಧೂತನಿಗೆ 'ಶಾಂತಿ' ನೊಬೆಲ್



ಡಾ. ಬಾಲಗೋಪಾಲ್

ಅಪ್ರತಿಮ ಬುದ್ಧಿಜೀವಿ, ಅವಿಶ್ರಾಂತ ಹೋರಾಟಗಾರ, ದಮನಿತ ಜನರ ಗಟ್ಟಿದನಿ!

ಡಾ. ಕೆ. ಬಾಲಗೋಪಾಲ್ ಒಬ್ಬ ಪ್ರಸಿದ್ಧ ರಾಜಕಾರಣಿಯೂ ಅಲ್ಲ, ಪ್ರಸಿದ್ಧ ಚಿತ್ರ ನಟರೂ ಅಲ್ಲ. ಆದರೂ ಕಳೆದ ಅಕ್ಟೋಬರ್ 8ರ ರಾತ್ರಿ ಹೃದಯಾಘಾತದಿಂದ ಅವರು ನಿಧನರಾದಾಗಿನಿಂದ ಇಡೀ ಆಂಧ್ರಪ್ರದೇಶ ಕಣ್ಣೀರಿಡುತ್ತಿದೆ. ಭಾರತದ ಬಹುಪಾಲು ಪ್ರಗತಿಪರ ಬುದ್ಧಿಜೀವಿಗಳು, ಎಲ್ಲಾ ಮಾನ ಹಕ್ಕು ಹೋರಾಟಗಾರರು ಈ ಅನಿರೀಕ್ಷಿತ ಆಘಾತಕ್ಕೆ ಒಳಗಾಗಿ ತತ್ತರಿಸಿದ್ದಾರೆ. ಒಂದು ಬಗೆಯ ತಬ್ಬಲಿತನವನ್ನು ಅನುಭವಿಸುತ್ತಿದ್ದಾರೆ.


ಡಾ. ಬಾಲಗೋಪಾಲರ ನಿಧನದ ಬಗ್ಗೆ ಕಾಶ್ಮೀರದಿಂದ ಕನ್ಯಾಕುಮಾರಿಯ ತನಕ, ಮಣಿಪುರದಿಂದ ಹಿಡಿದು ಗುಜರಾತಿನ ತನಕ ದೇಶದೆಲ್ಲೆಡೆಯ ಮಾನವ ಹಕ್ಕು ಹೋರಾಟಗಾರರು, ಪ್ರಭುತ್ವದಿಂದಲೋ ಅಥವಾ ಸಮಾಜದ ಪ್ರಭಾವಿಗಳಿಂದಲೋ ದಮನಕ್ಕೊಳಗಾದವರು ತಮ್ಮ ಸಂತಾಪವನ್ನು ಸೂಚಿಸುತ್ತಾ ಸಭೆಗಳನ್ನು ನಡೆಸುತ್ತಿದ್ದಾರೆ. ಕಾಶ್ಮೀರದಲ್ಲಿ "ಫ್ರೆಂಡ್ ಆಫ್ ಕಾಶ್ಮೀರ್ ಡೆಡ್" (ಕಾಶ್ಮೀರದ ಸ್ನೇಹಿತನೊಬ್ಬನ ಸಾವು) ಎಂಬ ಶೀರ್ಷಿಕೆಯಡಿ ಲೇಖನಗಳು ಪ್ರಕಟವಾಗುತ್ತಿದ್ದರೆ, ಮತ್ತು ದಮನಿತ ಜನತೆಯ ಮಾನವ ಹಕ್ಕುಗಳಿಗಾಗಿ, ಅವರ ಹೋರಾಟದ ಹಕ್ಕುಗಳಿಗಾಗಿ ಶ್ರಮಿಸಿದವರು ಮತ್ತು ಅದಕ್ಕಾಗಿ ತಮ್ಮ ಜೀವವನ್ನು ಮತ್ತು ಜೀವನವನ್ನು ಅಕ್ಷರಶಃ ಪಣವಾಗಿಟ್ಟವರು. ಮಾನವ ಹಕ್ಕುಗಳೆಂಬ ಪರಿಕಲ್ಪನೆಯನ್ನು ಅಂತರರಾಷ್ಟ್ರೀಯ ಸೆಮಿನಾರುಗಳಿಂದ ಮತ್ತು ಎನ್‌ಜಿಒಗಳ ಕಂಫರ್ಟ್ ಜೋನುಗಳಿಂದ ಬಿಡುಗಡೆ ಮಾಡಿ ಶೋಷಿತ ಜನತೆಯ ನಿತ್ಯ ಬದುಕಿನ ಅಗತ್ಯಗಳಿಗೆ ಅನ್ವಯಿಸಿದವರು. ಮಾನವ ಹಕ್ಕುಗಳ ಅತ್ಯಗತ್ಯವಿರುವುದು ದೊಡ್ಡದೊಡ್ಡ ಭೂಮಾಲೀಕರ ಶೋಷಣೆಗೆ ಗುರಿಯಾಗಿರುವ ಜೀತದಾಳುಗಳಿಗೆ, ಸ್ಲಂ ಎತ್ತಂಗಡಿಯಿಂದ ಬದುಕಿನ ಭದ್ರತೆಯನ್ನೇ ಕಳೆದುಕೊಳ್ಳುತ್ತಿರುವ ನಗರದ ಬಡವರಿಗೆ, "ಅಭಿವೃದ್ಧಿ ಯೋಜನೆ"ಗಳಿಂದ ನೆಲೆ ಕಳೆದುಕೊಳ್ಳುತ್ತಿರುವ ಆದಿವಾಸಿಗಳಿಗೆ, ಅನಾಗರಿಕ ಜಾತಿ ಶೋಷಣೆಗೆ ಬಲಿಯಾಗಿರುವ ದಲಿತರಿಗೆ, ಪುರುಷಾಧಿಪತ್ಯದಿಂದ ನಲುಗುತ್ತಿರುವ ಮಹಿಳೆಯರಿಗೆ, ಹಿಂದೂತ್ವ ಆಕ್ರಮಣಕ್ಕೆ ಸಿಲುಕಿ ಬದುಕುವ ಹಕ್ಕನ್ನೇ ಕಳೆದುಕೊಳ್ಳುತ್ತಿರುವ ಅಲ್ಪಸಂಖ್ಯಾತರಿಗೆ, ಭಾರತ ಪ್ರಭುತ್ವದಿಂದ ವಂಚನೆಗೆ ಗುರಿಯಾಗಿ ಸ್ವ ನಿರ್ಣಯಾಧಿಕಾರಕ್ಕೆ

ಅಂದಿನಿಂದ ಅವರು ನಿಧನರಾಗುವ ತನಕ ಹೋರಾಟಗಾರರನ್ನು ಸುಳ್ಳು ಎನ್‌ಕೌಂಟರ್‌ನಲ್ಲಿ ಕೊಲ್ಲುವ ಅಮಾನುಷ ಪೊಲೀಸ್ ಕೃತ್ಯಗಳನ್ನು ಬಯಲುಗೊಳಿಸುವ ಅವರ ಹೋರಾಟ ನಿರಂತರವಾಗಿ ಮುಂದುವರೆಯಿತು. ಆಂಧ್ರದಲ್ಲಿರಲಿ, ಕರ್ನಾಟಕದಲ್ಲಿರಲಿ, ಕಾಶ್ಮೀರ-ಈಶಾನ್ಯ ಭಾರತದಲ್ಲಿರಲಿ, ಛತ್ತೀಸ್‌ಘಡ್‌ನಲ್ಲಿರಲಿ ಎಲ್ಲೇ ಭದ್ರತಾ ಪಡೆಗಳ ದಮನ ನಡೆದರೂ, ಪೊಲೀಸರು ಎಷ್ಟೇ ಭಯಾನಕ ವಾತಾವರಣ ಸೃಷ್ಟಿಸಿದ್ದರೂ ಬಾಲಗೋಪಾಲ್ ನೇತೃತ್ವದ ತಂಡ ಅಲ್ಲಿಗೆ ಭೇಟಿ ಕೊಟ್ಟು ಸಂದರ್ಭದ ಅಧ್ಯಯನ ನಡೆಸಿ ಸತ್ಯಶೋಧನಾ ವರದಿಗಳನ್ನು ಹೊರತರುತ್ತಿದ್ದರು. ಇದರಿಂದಾಗಿ ಕ್ರಮೇಣ ವಾತಾವರಣ ತಿಳಿಗೊಳ್ಳುತ್ತಿತ್ತು. ಒಂದು ಭೇಟಿಗೆ ಅವರ ಪ್ರಯತ್ನ ನಿಲ್ಲುತ್ತಲೂ ಇರಲಿಲ್ಲ. ಪ್ರತಿಬಾರಿಯೂ ಸಂದರ್ಭ ಸುಧಾರಿಸಿದೆಯೋ ಇಲ್ಲವೋ ಎಂಬ ಫಾಲೋ ಅಪ್ ಕೂಡಾ ನಡೆಸುತ್ತಿದ್ದರು. ಈ ಕಾರಣದಿಂದಲೇ ಕಳೆದ ಒಂದು ದಶಕದಲ್ಲಿ ಏನಿಲ್ಲವೆಂದರೂ ಏಳು ಬಾರಿ ಕಾಶ್ಮೀರಕ್ಕೂ, ಐದಾರು ಬಾರಿ ಛತ್ತೀಸ್‌ಗಡ್‌ಗೂ ಮಾನವ ಹಕ್ಕುಗಳ ತಂಡ ಭೇಟಿ ಕೊಟ್ಟಿದೆ. ಈ ತಂಡದ ಸದಸ್ಯರು

ಉಳಿದ ಜೀವನವನ್ನು ಕಳೆದುಬಿಡುತ್ತಾರೆ ಅಥವಾ ಸಮ
ಬಂದರೆ ಅದನ್ನೇ ಬಂಡವಾಳವನ್ನಾಗಿಯ
ಮಾಡಿಕೊಳ್ಳುತ್ತಾರೆ. ಅಂಥ ಹಲವು ಜೀವ
ನಿದರ್ಶನಗಳು ಕರ್ನಾಟಕದಲ್ಲೂ ಇವೆ.

ಆದರೆ ಡಾ. ಬಾಲಗೋಪಾಲ್ ಸೆರೆಯಿಂ
ಹೊರಬಂದನಂತರ ಮಾಡಿದ ಮೊದಲ ಕೆಲಸ ತಮ
ಪ್ರೊಫೆಸರ್‌ಗಿರಿಗೆ ರಾಜೀನಾಮೆ ನೀಡಿದ್ದು! ಮತ
ಪೂರ್ಣಾವಧಿ ಕಾರ್ಯಕರ್ತನಾಗಿ ಮಾನವ ಹಕ್ಕುಗ
ಹೋರಾಟಗಾರನಾಗಿ ತಮ್ಮನ್ನು ತೊಡಗಿಸಿಕೊಂಡಿದ
ಆ ಸಂದರ್ಭದಲ್ಲಿ ಜಸ್ಟೀಸ್ ತಾರ್ಕುಂಡೆ ಮತ್ತು ಇನ್ನಿತರ
ನೇತೃತ್ವದಲ್ಲಿದ್ದ ದೇಶದ ಮತ್ತೊಂದು ಮಾನವ ಹಕ
ಸಂಘಟನೆಯಾದ ಪಿ.ಯು.ಸಿ.ಎಲ್ ಅವರ ಬಗ್ಗೆ ಹೀ
ಬರೆದಿತ್ತು: "ಗಣಿತ ಕ್ಷೇತ್ರದಲ್ಲೇ ಮುಂದುವರೆದಿದ್ದರೆ ಡ
ಬಾಲಗೋಪಾಲರಿಗೆ ನೊಬೆಲ್ ಕೂಡ ದೊರೆಯುತ್ತಿತ್ತೋ
ಏನೋ? ಅದೇನೇ ಇರಲಿ ಗಣಿತ ಕ್ಷೇತ್ರಕ್ಕೆ ನಷ್ಟವುಂಟಾದರ
ಮಾನವ ಹಕ್ಕುಗಳ ಕ್ಷೇತ್ರಕ್ಕೆ ದೊಡ್ಡ ಲಾಭವೇ ಆಗಿದ

ಬಾಲಗೋಪಾಲರು ಪೂರ್ಣಾವಧಿಯಾಗಿ ಮಾನ
ಹಕ್ಕುಗಳ ಉಲ್ಲಂಘನೆಯ ಬಗ್ಗೆ ದನಿ ಎತ್ತಲು ಪ್ರಾರಂಭಿ



ಡಾ. ಕೆ. ಬಾಲಗೋಪಾಲರು ಬಾಳಿಬದುಕಿದ 57 ವರ್ಷಗಳಲ್ಲಿ ಹೆಚ್ಚೂ ಕಡಿಮೆ 30 ವರ್ಷಗಳಷ್ಟು ಕಾಲ ಈ ದೇಶದಲ್ಲಿ ಶೋಷಿತ ಮತ್ತು ದಮನಿತ ಜನತೆಯ ಮಾನವ ಹಕ್ಕುಗಳಿಗಾಗಿ, ಅವರ ಹೋರಾಟದ ಹಕ್ಕುಗಳಿಗಾಗಿ ಶ್ರಮಿಸಿದವರು ಮತ್ತು ಅದಕ್ಕಾಗಿ ತಮ್ಮ ಜೀವವನ್ನು ಮತ್ತು ಜೀವನವನ್ನು ಅಕ್ಷರಶಃ ಪಣವಾಗಿಟ್ಟವರು. ಕೇವಲ ಅನುಕಂಪ ಅಥವಾ ಅಪರಾಧಿ ಪ್ರಜ್ಞೆ ಇವೆರಡರಲ್ಲೇ ಬಳಲುವ ಮಧ್ಯಮ ವರ್ಗದ ಪ್ರಜ್ಞಾವಂತರು ಮತ್ತು ಬುದ್ಧಿಜೀವಿಗಳು ತಮ್ಮ ದ್ವಂದ್ವಗಳನ್ನು ಮೀರಿ ದಮನಿತ ಜನರಿಗಾಗಿ ಅವರ ಮಾನವ ಹಕ್ಕುಗಳಿಗಾಗಿ ತಮ್ಮನ್ನು ತಾವೇ ಅರ್ಪಿಸಿಕೊಂಡರೆ ಸಮಾಜದಲ್ಲಿ ನ್ಯಾಯಪ್ರಜ್ಞೆಯನ್ನೂ, ಮಾನವೀಯತೆಯನ್ನು ಉಳಿಸಲು ಎಂಥಾ ದೊಡ್ಡ ಕೊಡುಗೆಗಳನ್ನು ನೀಡಬಹುದೆಂಬುದಕ್ಕೆ ಡಾ. ಬಾಲಗೋಪಾಲ್ ಉದಾಹರಣೆ. ಬಾಲಗೋಪಾಲರ ಅಕಾಲಿಕ ಸಾವು ಅವರು ನೀಡಿದ ಪ್ರಜ್ಞೆಯ ಕಾವನ್ನು ಕಡಿಮೆ ಮಾಡದಂತೆ ನೋಡಿಕೊಳ್ಳುವುದೇ ಅವರಿಗೆ ನಾವು ನೀಡಬಹುದಾದ ಅತಿ ದೊಡ್ಡ ಶ್ರದ್ಧಾಂಜಲಿ.

ಕರ್ನಾಟಕದಲ್ಲಿ "ಫ್ರೆಂಡ್ಸ್ ಆಫ್ ಬಾಲಗೋಪಾಲ್" ಹೆಸರಿನಲ್ಲಿ ನಾಡಿನ ಎಲ್ಲಾ ಮಾನವ ಹಕ್ಕು ಸಂಘಟನೆಗಳು ಅವರಿಗೆ ಅಂತಿಮ ನಮನ ಸಲ್ಲಿಸುವ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾವೆ.

ಆಂಧ್ರದಲ್ಲಂತೂ ಅವರ ಅಂತಿಮ ಪಯಣದ ದಿನ ದಲಿತರು, ಆದಿವಾಸಿಗಳು, ಬೀಡಿ ಕಾರ್ಮಿಕರು, ಎಸ್‌ಇಜೆಡ್‌ನಂಥ ತಥಾಕಥಿತ "ಅಭಿವೃದ್ಧಿ" ಯೋಜನೆಗಳಿಂದ ಸಂತ್ರಸ್ತರಾದವರು, ದೇಶದ ಪ್ರಖ್ಯಾತ ಬುದ್ಧಿಜೀವಿಗಳು, ಸಾಮಾಜಿಕ ಕಾರ್ಯಕರ್ತರು ಹಾಗೂ ಹಲವು ರಾಜಕಾರಣಿಗಳು ಅಲ್ಲಿನ ಮಾನವ ಹಕ್ಕು ಹೋರಾಟಗಾರರೊಂದಿಗೆ ಬೆರೆತು ಡಾ. ಕೆ. ಬಾಲಗೋಪಾಲ್ ಅವರಿಗೆ ಅಂತಿಮ ನಮನ ಸಲ್ಲಿಸಿದರು. ಆಂಧ್ರದ ಎಲ್ಲಾ ಪತ್ರಿಕೆಗಳು ಬಾಲಗೋಪಾಲರ ಬಗ್ಗೆ ಏನಿಲ್ಲವೆಂದರೂ ಒಂದೆರಡು ಪೂರ್ತಿ ಪುಟದ ವರದಿಗಳನ್ನು ಮತ್ತು ಲೇಖನಗಳನ್ನು ಪ್ರಕಟಿಸಿ ತಮ್ಮ ಶ್ರದ್ಧಾಂಜಲಿಯನ್ನು ವ್ಯಕ್ತಪಡಿಸಿದವು. "ಆಂಧ್ರಪ್ರಭ" ಪತ್ರಿಕೆಯಂತೂ ಅವರು ಬರೆದ ಅಂಕಣ ಬರಹಗಳ ಒಂದು ವೆಬ್‌ಸೈಟನ್ನೇ ಪ್ರಾರಂಭಿಸಿದೆ. ದೇಶದ ಗಣ್ಯಾತಿಗಣ್ಯ ಬುದ್ಧಿಜೀವಿಗಳು ಒಟ್ಟು ಸೇರಿ ಬಾಲಗೋಪಾಲರ ನೆನಪಿಗೆ http//balagopal.org ಎಂಬ ಬಾಲಗೋಪಾಲ್ ಸ್ಮರಣ ವೆಬ್‌ಸೈಟೊಂದನ್ನೂ ಪ್ರಾರಂಭಿಸಿದ್ದಾರೆ.

ಅಧಿಕಾರಸ್ಥರನ್ನು ಹೊರತುಪಡಿಸಿ ಎಲ್ಲಾ ಬಗೆಯ ಜನರಿಂದ ಇಂಥಾ ಅಭೂತಪೂರ್ವ ಮನ್ನಣೆ ಪಡೆದ ಡಾ. ಕೆ. ಬಾಲಗೋಪಾಲರಂಥ ಅಪರೂಪದ ಮತ್ತು ಅದ್ಭುತ ಮಾನವ ಹಕ್ಕು ಹೋರಾಟಗಾರನ ನಿಧನದ ವಾರ್ತೆ ಕನ್ನಡದ ಪತ್ರಿಕೆಗಳಲ್ಲಿ ಸಣ್ಣ ಸುದ್ದಿಯೂ ಆಗಲಿಲ್ಲ! ಇದು ವಿಷಾದಕರ ಮಾತ್ರವಲ್ಲ. ಕರ್ನಾಟಕದಲ್ಲಿ ಮಾನವ ಹಕ್ಕುಗಳ ಕುರಿತು ಸಾರ್ವಜನಿಕ ಪ್ರಜ್ಞೆ ಎಷ್ಟಿದೆ ಎಂಬುದಕ್ಕೆ ಸಂಕೇತವಾಗಿದೆ.


ಏಕೆಂದರೆ ಡಾ. ಕೆ. ಬಾಲಗೋಪಾಲರು ಬಾಳಿಬದುಕಿದ 57 ವರ್ಷಗಳಲ್ಲಿ ಹೆಚ್ಚೂ ಕಡಿಮೆ 30 ವರ್ಷಗಳಷ್ಟು ಕಾಲ ಈ ದೇಶದಲ್ಲಿ ಶೋಷಿತ ಹೋರಾಡುತ್ತಿರುವ ಕಾಶ್ಮೀರಿ ಮತ್ತು ಈಶಾನ್ಯ ಭಾರತದ ರಾಷ್ಟ್ರೀಯತೆಗಳಿಗೆ ಎಂಬುದೇ ಬಾಲಗೋಪಾಲರ ಪ್ರತಿಪಾದನೆಯಾಗಿತ್ತು. ಸ್ವಾತಂತ್ರ್ಯ ಸ್ವಾಭಿಮಾನ ಮತ್ತು ಸಮಾನತೆಗಾಗಿ ಹೋರಾಡುತ್ತಿರುವ ಈ ಎಲ್ಲಾ ಜನವರ್ಗಗಳ ಹೋರಾಡುವ ಹಕ್ಕನ್ನು ಕಾಪಾಡುವುದು ಮಾನವ ಹಕ್ಕುಗಳ ಕಾರ್ಯಕರ್ತರ ಅತಿದೊಡ್ಡ ಕರ್ತವ್ಯವೆಂದು ಅವರು ಭಾವಿಸಿದ್ದರು.

ಹೀಗೆ ಮಾನವ ಹಕ್ಕುಗಳ ಪರಿಕಲ್ಪನೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ದವರು ಡಾ. ಬಾಲಗೋಪಾಲ್. ಅಪಾರ ಮೇಧಾವಿಯಾಗಿದ್ದ ಬಾಲಗೋಪಾಲರು ಮಾನವ ಹಕ್ಕುಗಳ ಕಾರ್ಯಕ್ಷೇತ್ರಕ್ಕೆ ಧುಮುಕುವ ಮೊದಲು ಆಂಧ್ರಪ್ರದೇಶದ ವಾರಂಗಲ್‌ನಲ್ಲಿ ಗಣಿತದ ಪ್ರೊಫೆಸರ್ ಆಗಿದ್ದರು. ಅದಕ್ಕೂ ಮುನ್ನ ಗಣಿತ ಕ್ಷೇತ್ರದಲ್ಲಿ ಪೋಸ್ಟ್ ಡಾಕ್ಟೋರಲ್ ಪದವಿ ಪಡೆದಿದ್ದ ಬಾಲಗೋಪಾಲರು ಇಂಡಿಯನ್ ಸ್ಟಾಟಿಸ್ಟಿಕಲ್ ಇನ್‌ಸ್ಟಿಟ್ಯೂಟ್ ಅನ್ನು ಸೇರಿದ್ದರು. ಆದರೆ ಅಲ್ಲಿ ತಮ್ಮ ಪ್ರಬಂಧವನ್ನು ಉಪನ್ಯಾಸಕರೊಬ್ಬರು ತಮ್ಮ ಹೆಸರಲ್ಲಿ ಪ್ರಕಟಿಸಿಕೊಂಡಿದ್ದನ್ನು ಕಂಡು ಬೇಸತ್ತು ಸದ್ದಿಲ್ಲದೆ ರಾಜೀನಾಮೆ ನೀಡಿ ವಾರಂಗಲ್‌ಗೆ ಹಿಂತಿರುಗಿದ್ದರು.

ಸಾಮಾನ್ಯವಾಗಿ ಗಣಿತದಂಥ ಅಮೂರ್ತ ವಿಜ್ಞಾನಕ್ಕೂ ಮಾನವ ಹಕ್ಕುಗಳಂಥ ಜನತೆಯ ಮೂರ್ತ ಬದುಕಿನ ವಾಸ್ತವತೆಗಳಿಗೂ ಯಾವುದೇ ನೇರ ಸಂಬಂಧವಿಲ್ಲ. ಆದರೆ ಆಂಧ್ರದ ವಾರಂಗಲ್ ಆಗ ಹೋರಾಟದ ಕುಲುಮೆಯಲ್ಲಿ ಕುದಿಯುತ್ತಿತ್ತು. ವಿದ್ಯಾರ್ಥಿಗಳು, ರೈತಾಪಿಗಳು ತಮ್ಮ ಬದುಕುವ ಹಕ್ಕಿಗಾಗಿ ಹೋರಾಡುತ್ತಿದ್ದರು. ಪೊಲೀಸರು ಅವರನ್ನು ಹಾದುಹಗಲಲ್ಲೇ ಕೊಂದುಹಾಕುತ್ತಿದ್ದರು. ಇಂಥ ವಿದ್ಯಮಾನಗಳು ಕಣ್ಣೆದುರಿಗೇ ನಡೆಯುತ್ತಿರುವಾಗ ಬಾಲಗೋಪಾಲರಂಥ ಸಂವೇದನಾಶೀಲ ಬುದ್ಧಿಜೀವಿ ಗಣಿತದ ಪ್ರಾಧ್ಯಾಪಕರೇ ಆಗಿದ್ದರೂ ಸುಮ್ಮನಿರಲು ಸಾಧ್ಯವೇ ಇರಲಿಲ್ಲ. ಹೀಗಾಗಿ ಈಗಾಗಲೇ ಪೊಲೀಸರ ಕುಕೃತ್ಯಗಳನ್ನು ಬಯಲುಗೆಳೆಯಲು ಶ್ರಮಿಸುತ್ತಿದ್ದ "ಆಂಧ್ರಪ್ರದೇಶ ನಾಗರಿಕ ಹಕ್ಕುಗಳ ಸಮಿತಿ"ಯ (ಎಪಿಸಿಎಲ್‌ಸಿ) ಗೆ 1983ರಲ್ಲಿ ಕಾರ್ಯದರ್ಶಿಯಾದರು.

ಬೇರೆಬೇರೆಯಾಗಿರುತ್ತಿದ್ದರಾದರೂ ಅದರ ನಾಯಕ ಮಾತ್ರ ಯಾವಾಗಲೂ ಡಾ. ಬಾಲಗೋಪಾಲ್ ಅವರೇ ಆಗಿರುತ್ತಿದ್ದರು. ಪ್ರಾಯಶಃ ಭಾರತದಲ್ಲಿ ಕಳೆದ ಎರಡು-ಮೂರು ದಶಕಗಳಲ್ಲಿ ನಡೆದಿರುವ ಪೊಲೀಸ್ ಎನ್‌ಕೌಂಟರ್‌ಗಳ ಬಗ್ಗೆ ಬಾಲಗೋಪಾಲ್ ನೇತೃತ್ವದ ಮಾನವ ಹಕ್ಕು ತಂಡಗಳು ಹೊರತಂದಷ್ಟು ಸತ್ಯಶೋಧನಾ ವರದಿಗಳನ್ನು ಬೇರೆ ಯಾರೂ ತಂದಿರಲಿಕ್ಕಿಲ್ಲ. ಆದ್ದರಿಂದಲೇ ಇಂದು ಆಂಧ್ರದಲ್ಲಿ ಮಾತ್ರವಲ್ಲ, ಇಡಿ ಭಾರತದಲ್ಲಿ ಪೊಲೀಸರ ಎನ್‌ಕೌಂಟರ್‌ಗಳ ಕಟ್ಟುಕಥೆಗಳನ್ನು ಯಾರೂ





ನಂಬದಂತಾಗಿದೆ. ನಾಗರಿಕ ಸಮಾಜದಲ್ಲಿ ಇಂಥಾ ಮಾನವ ಹಕ್ಕು ಮತ್ತು ನ್ಯಾಯಪ್ರಜ್ಞೆ ಬೆಳೆಸುವಲ್ಲಿ ಬಾಲಗೋಪಾಲರ ಪಾತ್ರ ಅತ್ಯಂತ ಹಿರಿದಾದದ್ದು.

ಇದರಿಂದಾಗಿಯೇ ಪೊಲೀಸರಿಗೆ ಮತ್ತು ಪ್ರಭುತ್ವಕ್ಕೆ ಅವರು ದೊಡ್ಡ ಸವಾಲಾಗಿದ್ದರು. ಅವರು ಹಾಕುತ್ತಿದ್ದ ಎಫ್‌ಐಆರ್‌ಗಳನ್ನು ಬಾಲಗೋಪಾಲರ ಸತ್ಯಶೋಧನಾ ವರದಿಗಳೇ ಬಯಲುಗೊಳಿಸಿ ಸೋಲಿಸುತ್ತಿದ್ದವು. ಆದ್ದರಿಂದಲೇ ಬಾಲಗೋಪಾಲರನ್ನು ಆಂಧ್ರ ಪೊಲೀಸರು ಹಲವು ಬಾರಿ ದೈಹಿಕವಾಗಿ ಮುಗಿಸಲೂ ಪ್ರಯತ್ನಿಸಿದ್ದುಂಟು. 1985ರಲ್ಲಿ ಒಮ್ಮೆ ವಿನಾಕಾರಣ ಬಂಧಿಸಿದ್ದು ಮಾತ್ರವಲ್ಲದೆ 1985ರ ನವೆಂಬರ್‌ನಲ್ಲಿ "ಭಯೋತ್ಪಾದನಾ ವಿರೋಧಿ ಕಾಯ್ದೆ-ಟಾಡಾ" ಅಡಿಯಲ್ಲೂ ಬಂಧಿಸಿ ಅವರನ್ನು ವರ್ಷಗಳ ಕಾಲ ಜೈಲಿಗೆ ದೂಡಿದ್ದರು. ಸಾಮಾನ್ಯವಾಗಿ ಇಂಥಾ ದಮನಕ್ಕೆ ಗುರಿಯಾದ ಮೇಲೆ ಒಬ್ಬ ಮಧ್ಯಮ ವರ್ಗದ ಬುದ್ಧಿಜೀವಿ ಇನ್ನೆಂದೂ ಜನಹೋರಾಟಗಳ ಕಡೆ ತಿರುಗಿಯೂ ನೋಡುವುದಿಲ್ಲ. ಬದಲಿಗೆ ಹಳೆಯ ಗಾಯಗಳನ್ನು ನೆಕ್ಕಿಕೊಳ್ಳುತ್ತಾ ತಮ್ಮ

ಸಂದರ್ಭ ಮಾನವ ಹಕ್ಕುಗಳ ಹೋರಾಟಗಾರರಿಗೆ ಅತ್ಯಂ
ಅಪಾಯಕಾರಿಯಾದ ಸಂದರ್ಭವಾಗಿತ್ತು. ಆಂಧ್ರದ
ನಕ್ಸಲ್ ದಮನದ ಹೆಸರಲ್ಲಿ ಮಾನವ ಹಕ್ಕು ಕಾರ್ಯಕರ್ತ
ಇತರ ಹೋರಾಟಗಾರರ ಕಗ್ಗೊಲೆಗಳು ನಡೆಯುತ್ತಿದ್ದವ
ಗ್ರೀನ್ ಟೈಗರ್, ಪ್ರಜಾಬಂಧು ಇನ್ನಿತರ ಹೆಸರಲ್ಲಿ ಪೊಲೀಸ
ಮಾರುವೇಷದಲ್ಲಿ ಇಂಥಾ ಕಗ್ಗೊಲೆಗಳನ್ನು ಮಾಡುತ್ತಿದ್ದರ
ಇಂಥಾ ಒಂದು ಗುಂಪೇ 1993ರ
ಬಾಲಗೋಪಾಲರ್‌ನ್ನು ಖಮ್ಮಂನಲ್ಲಿ ಕಿಡ್ನಾಪ್ ಮಾ
ಅವರ ಮೇಲೆ ಮಾರಣಾಂತಿಕ ಹಲ್ಲೆಯನ್ನೂ ನಡೆಸಿತ

ಆದರೆ ಇವು ಯಾವುವ
ಬಾಲಗೋಪಾಲರನ್ನು ತಮ್ಮ ಬದ್ಧತೆಯಿಂ
ಹಿಮ್ಮೆಟ್ಟಿಸಲಿಲ್ಲ. 1997ರಲ್ಲಿ ರಾಷ್ಟ್ರೀಯ
ಮಾನವ ಹಕ್ಕುಗಳ ಆಯೋಗ
(NHRC) ಎದಿರು ಅವರು ಮತ
ಪ್ರಖ್ಯಾತ ವಕೀಲ ಕನ್ನಾಭೀರನ್ ಮಂಡಿಸಿ
ವಾದದಿಂದಾಗಿಯೇ ಪೊಲೀಸ
ಎನ್‌ಕೌಂಟರ್‌ಗಳ ಮೇಲೆ ನಿಯಂತ್ರಣ ಹೇರುವಂ
ನಿರ್ದೇಶನವನ್ನು (NHRC)ಯಿಂದ ಪಡೆದುಕೊಂಡರ
ಅದರ ಪ್ರಕಾರ ಪೊಲೀಸರು ನಡೆಸುವ ಎನ್‌ಕೌಂಟರ್‌ಗ
ಸಂದರ್ಭದಲ್ಲಿ ಎದುರಾಳಿಗಳ ಸಾವು ಸಂಭವಿಸಿದ
ಅದರಲ್ಲಿ ಪಾಲ್ಗೊಂಡ ಪೊಲೀಸರ ಮೇಲೆ ಕೊ
ಮೊಕದ್ದಮೆ ದಾಖಲಿಸ ಬೇಕು; ಅದು ಸ್ವರಕ್ಷಣೆಗಾ
ತಾವು ಮಾಡಿದ ದಾಳಿ ಎಂದು ರುಜುವಾತಾದ ನಂತರವ
ಅವರಿಗೆ ಮತ್ತೆ ಪೊಲೀಸ್ ಅಧಿಕಾರ ಮರಳಿ ದಕ್ಕಬೇಕ
ಇಂದು ಈ ನಿರ್ದೇಶನಕ್ಕೆ ಸುಪ್ರೀಂಕೋರ್ಟ್ ತಡೆಯಾ
ನೀಡಿದೆಯಾದರೂ ಅದು ಜಾರಿಯಲ್ಲಿದ್ದಷ್ಟು ಕಾ
ಅಮಾಯಕರ ಪ್ರಾಣಹರಣ ಮಾಡದಂತೆ ಪೊಲೀಸರನ
ಸ್ವಲ್ಪವಾದರೂ ಹದ್ದುಬಸ್ತಿನಲ್ಲಿಟ್ಟಿತ್ತು ಎಂಬುದೂ ನಿಜವ

ತಮ್ಮ ಈ ಹೋರಾಟದ ಪ್ರಯಾಣದ
ಬಾಲಗೋಪಾಲರು ಹತ್ತು ಹಲವು ಬಾರಿ ಕರ್ನಾಟಕಕ
ಭೇಟಿ ನೀಡಿದ್ದರು. 2003ರಲ್ಲಿ ಮಲೆನಾಡಿನಲ್ಲಿ ಪಾರ್ವ
-ಹಾಜಿಮಾ ಎನ್‌ಕೌಂಟರ್ ನಡೆದಾಗ, ದೀನ್‌ದಾ

▶▶▶14

ಪರಿಸರ ರಕ್ಷಣೆ ಮತ್ತು ಬಾನ್‌ಬಿಬಿಯ ಕತೆ



ಕಂಡಹಾಗೆ

■ ಗೌರಿ ಲಂಕೇಶ್

ಮನುಷ್ಯ ಸ್ವಾರ್ಥಿಯಾದಷ್ಟು, ಭೋಗದ ಬದುಕನ್ನು ...ಸಿದಷ್ಟು ಅದಕ್ಕನುಗುಣವಾಗಿ ಹಾನಿಯಾಗುವುದು ...ಕ್ಕೆ. ಇತ್ತೀಚೆಗೆ ಕರ್ನಾಟಕದ ಲಕ್ಷಾಂತರ ಜನರ ...ನ್ನೇ ನಾಶ ಮಾಡಿದ ನೆರೆ ಪ್ರವಾಹಕ್ಕೆ ಮುಖ್ಯ ... ಜಗತ್ತಿನಾದ್ಯಂತ ಮನುಷ್ಯ ಪರಿಸರದ ಮೇಲೆ ...ತ್ತಿರುವ ದಾಳಿ ಮತ್ತು ಅದರಿಂದ ಉಂಟಾಗಿರುವ ... ತಾಪಮಾನದ ಏರಿಕೆ ...ಹಲವಾರು ತಜ್ಞರು ವಿಶ್ಲೇಷಿ...



...ದ ಹಲವಾರು ...ಂದ ಕಾರ್ಖಾನೆಗಳು, ...ಕತೆ, ತಂತ್ರಜ್ಞಾನ ...ಂತೆಲ್ಲ ಪ್ರಾಕೃತಿಕ ...ತೆ ನಾಶವಾಗುತ್ತಿರುವುದು ...ಲ್ಲರೂ ಬಲ್ಲ ಸಂಗತಿ. ...ಹಿಂದಿನ ಕಾಲದಲ್ಲಿ ...ತ್ತಿರಲಿಲ್ಲ. ಈಗಿನ 'ಜ್ಞಾನ' ...ವಿಜ್ಞಾನ'ಗಳು ಅಂದು ಇರಲಿಲ್ಲವಾದರೂ ತಮ್ಮ ... ಪರಿಸರಕ್ಕೆ ಹಾನಿಯಾಗದಂತೆ, ಆದರೆ ಅದೇ ...ತಾವೂ ಹೊಟ್ಟೆಗಿಲ್ಲದೆ ನರಳದಂತೆ ಜನ ...ಕೊಳ್ಳುತ್ತಿದ್ದರು. ಅವರ 'ಸೀಮಿತ' ತಿಳಿವಳಿಕೆಯಲ್ಲೇ ...ದ ರಕ್ಷಣೆಯ ಅಗತ್ಯತೆಯನ್ನು ಕಂಡುಕೊಂಡಿದ್ದ ...ಮ್ಮ ಮತ್ತು ತಮ್ಮ ಪರಿಸರದ ರಕ್ಷಣೆಗೆ ಕತೆಗಳನ್ನು ... ಆ ಕತೆಗಳಲ್ಲಿ ದೇವಾನುದೇವ, ರಾಕ್ಷಸ, ವರ್ಗ, ...ಎಲ್ಲವೂ ಇರುತ್ತಿದ್ದವು. ಅಂತಹ ಒಂದು ಅದ್ಭುತ ...ನ್ನ ಇಲ್ಲಿ ಹೇಳಬೇಕೆಂದುಕೊಂಡಿದ್ದೇನೆ.

... ಕತೆ ಭಾರತದ ಪಶ್ಚಿಮ ಬಂಗಾಳದ ಮತ್ತು ... ದೇಶಗಳ ನಡುವೆ ಹರಡಿಕೊಂಡಿರುವ ಸುಂದರ ... (ಸುಂದರ ವನ) ಎಂಬ ದ್ವೀಪ ಸಮೂಹಕ್ಕೆ ...ಸಿದ್ದು. ಹಿಂದೊಮ್ಮೆ ಸಾವಿರಾರು ಚದುರ ...ಮೀಟರ್‌ಗಳಲ್ಲಿ ಹರಡಿಕೊಂಡಿದ್ದ ಈ ಸುಂದರವನ ...ದೀಣ ಕರಗುತ್ತಾ ಬಂದು ಇದೀಗ 10,000 ... ಕಿಲೋಮೀಟರ್‌ಗಳಿಗೆ ಸೀಮಿತವಾಗಿದೆ.

... ಅರಣ್ಯ ಪ್ರದೇಶವಾದ ಸುಂದರವನದಲ್ಲಿ ಅಪಾರ ... ಮರಗಳು, ವಿವಿಧ ಜಾತಿಯ ಪ್ರಾಣಿಪಕ್ಷಿಗಳೂ ... ತನ್ನ ಲಾಭಕ್ಕಾಗಿ ಮಾನವ ಈ ಅರಣ್ಯವನ್ನು ...ಕೋ ಇಚ್ಛೆ ನಾಶ ಮಾಡಲಾರಂಭಿಸಿದಾಗ ...ಗಿಯೇ ಮನುಷ್ಯರ ಮತ್ತು ಕಾಡುಪ್ರಾಣಿಗಳ ...ಸಂಘರ್ಷ ಏರ್ಪಟ್ಟಿತು. ಅದರಲ್ಲೂ ಈಗ ವಿನಾಶದ ...ಲ್ಲಿರುವ ಬಂಗಾಳಿ ಹುಲಿಗಳು ನರಭಕ್ಷಕರಾಗಿ ...ಕಾಲಿಟ್ಟವರನ್ನು ಕೊಂದು ಹಾಕಲು ಪ್ರಾರಂಭಿಸಿದವು. ...ಸಂದರ್ಭದಲ್ಲಿ ಅಂದರೆ - ನೂರಾರು ವರ್ಷಗಳ ...ಹುಟ್ಟಿಕೊಂಡ ಈ ಕತೆ ಆ ಪ್ರದೇಶದಲ್ಲಿದ್ದ ಜನರ ...ರಕ್ಷಣೆಯ ಕಲ್ಪನೆ, ಸಾಮಾಜಿಕ ಮತ್ತು ಆರ್ಥಿಕ ...ನ್ನೂ ಬಿಂಬಿಸುತ್ತದೆ....

...ಕತೆಯ ಪ್ರಕಾರ ಸುಂದರವನದಲ್ಲಿರುವ ಜನರನ್ನು ... ಅಲ್ಲಾಹು ಬಾನ್‌ಬಿಬಿ ಎಂಬ ಅರಣ್ಯವಾಸಿ ...ಯನ್ನು ನೇಮಿಸಿದ್ದಾನೆ. ಅದು ಆದದ್ದು ಹೀಗೆ.....

...ವಾನೊಂದು ಕಾಲದಲ್ಲಿ ಈ ಸುಂದರವನದ ದಕ್ಷಿಣ ... ಓರ್ವ ಬ್ರಾಹ್ಮಣ ಮುನಿ ವಾಸಿಸುತ್ತಿದ್ದ. ಆದರೆ ...ದಿನ ಆತನ ಹಸಿವು ಹೆಚ್ಚಾಗಿ ನರಭಕ್ಷಕನಾಗಿ ಆತ ...ತೆಗೊಂಡ. ಆತನಿಗೆ ತಪಸ್ಸಿನ ಶಕ್ತಿ ಇದ್ದುದರಿಂದ ...ಾಡುದಿಂದ ಹುಲಿಯ ರೂಪವನ್ನು ತಳೆದು ... ಕೊಂದು ಹಾಕುತ್ತಿದ್ದ. ಅರ್ಧ ಮಾನವನೂ, ...ಹುಲಿಯೂ ಆಗಿದ್ದ ಆ ಬ್ರಾಹ್ಮಣ ಮುನಿಯು ಸುಂದರವನದ ದಕ್ಷಿಣ ಭಾಗದಲ್ಲಿ ವಾಸಿಸುತ್ತಿದ್ದರಿಂದ ಅವನನ್ನು ದಕ್ಷಿಣದ ರಾಜ ಎಂದೇ ಕರೆಯಲಾಗುತ್ತಿತ್ತು. ಕಾಲ ಉರುಳಿದಂತೆ ಈ ದಕ್ಷಿಣದ ರಾಜನ ದುರಾಶೆ ಹೆಚ್ಚಾಗಿ ಆತ ಅರಣ್ಯ ಸಂಪತ್ತನ್ನು ಮನುಷ್ಯರೊಂದಿಗೆ ಹಂಚಿಕೊಳ್ಳಲು ನಿರಾಕರಿಸಿದ. ಅಷ್ಟೇ ಅಲ್ಲ, 'ತನ್ನ' ಕಾಡಿಗೆ ಕಾಲಿಟ್ಟವರು ಅರಣ್ಯ ಸಂಪತ್ತನ್ನು ಕಿತ್ತುಕೊಂಡು ಹೋಗುತ್ತಿದ್ದರಿಂದ ಅವರನ್ನು ಕೊಲ್ಲುವ ಮೂಲಕ ತಾನು ಅವರ ಮೇಲೆ 'ತೆರಿಗೆ' ವಿಧಿಸುತ್ತಿದ್ದೇನೆಂದು ತನ್ನ ನರಭಕ್ಷತನವನ್ನು ಸಮರ್ಥಿಸಿಕೊಳ್ಳಲಾರಂಭಿಸಿದ. ಬರುಬರುತ್ತಾ ಆತನ ಅತ್ಯಾಶೆಗೆ ಮತ್ತು ದುರಹಂಕಾರಕ್ಕೆ ಮಿತಿಯೇ ಇಲ್ಲದಂತಾಗಿ ತಾನೇ ಸುಂದರವನಗಳ ರಾಜನೆಂದೂ, ಅರಣ್ಯದಲ್ಲಿದ್ದ ಸಾವಿರಾರು ಪ್ರಾಣಿ, ಪಕ್ಷಿ, ಗಿಡಮರಗಳಿಗೆ, ಹುಲಿಗಳಿಗೆ ತಾನೇ ಸರ್ವಾಧಿಕಾರಿ ಎಂದೂ ಘೋಷಿಸಿಕೊಂಡ. ಅಕ್ಷರಶಃ ರಾಕ್ಷಸನಂತಾಗಿದ್ದ ದಕ್ಷಿಣದ ರಾಜನ ಅಚ್ಚುಮೆಚ್ಚಿನ ಪ್ರಜೆಗಳೇ ಹುಲಿಗಳಾಗಿದ್ದರಿಂದ ಅವು ಕೂಡ ಜನರನ್ನು ಕೊಲ್ಲಲಾರಂಭಿಸಿದವು.

ಹೀಗೆ ಮಾನವ ಮತ್ತು ಹುಲಿಗಳ ನಡುವಿನ ಸಂಬಂಧ ಕಳಚಿಬಿದ್ದು ಅಪಾಯಕಾರಿಯಾಗಿ ಪರಿವರ್ತಿತವಾಗಿದ್ದನ್ನು ಕಂಡು ಅಲ್ಲಾಹು ಕ್ರಮಕೈಗೊಳ್ಳಲು ನಿರ್ಧರಿಸಿದ. ಹದಿನೆಂಟು ಪ್ರವಾಹಗಳ ಪ್ರದೇಶದ (ಸುಂದರವನದ ಮತ್ತೊಂದು ಹೆಸರು) ಜನರ ಪರಿಸ್ಥಿತಿಯನ್ನು ನೋಡಿ ಮರುಗಿದ ಅಲ್ಲಾಹು ದಕ್ಷಿಣದ ರಾಜನ ಭಯೋತ್ಪಾದನೆಗೂ, ಅತಿಯಾಶೆಗೂ ಅಂತ್ಯ ಹಾಡಲು ನಿರ್ಧರಿಸಿದ. ಈ ಕೆಲಸಕ್ಕಾಗಿ ಅಲ್ಲಾಹು ಆಯ್ಕೆ ಮಾಡಿಕೊಂಡಿದ್ದು ಅದೇ ಅರಣ್ಯದಲ್ಲಿ ವಾಸಿಸುತ್ತಿದ್ದ ಬಾನ್‌ಬಿಬಿ ಎಂಬ ಹುಡುಗಿಯನ್ನು.




ಬಾನ್‌ಬಿಬಿ ತಂದೆ ಇಬ್ರಾಹಿಮ್ ತನ್ನ ಎರಡನೇ ಹೆಂಡತಿಯ ಮಾತು ಕೇಳಿ ಗರ್ಭವತಿಯಾಗಿದ್ದ ತನ್ನ ಮೊದಲನೇ ಹೆಂಡತಿ ಗುಲಾಲ್‌ಬಿಬಿಯನ್ನು ಕಾಡಿನಲ್ಲಿ ತೊರೆದು ಹೊರಟುಹೋಗಿದ್ದ. ಗುಲಾಲ್‌ಬಿಬಿ ಅವಳಿ ಮಕ್ಕಳಿಗೆ ಜನ್ಮ ನೀಡಿದಳಾದರೂ ಅವರಿಬ್ಬರನ್ನು ಸಾಕುವುದು ಕಷ್ಟ ಎಂದು ಮಗನಾದ ಜಂಗ್ಲಿಯನ್ನು ತನ್ನೊಂದಿಗೆ ಕರೆದೊಯ್ದು ಮಗಳಾದ ಬಾನ್‌ಬಿಬಿಯನ್ನು ಕಾಡಿನಲ್ಲೇ ಬಿಟ್ಟಳು. ಹೀಗೆ ತಾಯಿಯಿಂದ ತ್ಯಜಿಸಲ್ಪಟ್ಟ ಬಾನ್‌ಬಿಬಿ ಬಗ್ಗೆ ಜಿಂಕೆಯೊಂದರಲ್ಲಿ ಮಮತೆ ಹುಟ್ಟಿ ಅದುವೇ ಆಕೆಯ ಪರ್ಯಾಯ ತಾಯಿಯಾಗಿ ಅವಳನ್ನು ಸಾಕಿ ಬೆಳೆಸಿತು.

ಹೀಗೆ ಕಾಡಿನಲ್ಲಿ ಬೆಳೆದ ಬಾನ್‌ಬಿಬಿಗೆ ಒಂದು ದಿನ ಜನರನ್ನು ಶೋಷಿಸುತ್ತಿದ್ದ ನರಭಕ್ಷಕ ಬ್ರಾಹ್ಮಣ ಮುನಿ ದಕ್ಷಿಣದ ರಾಜನಿಂದ ಸುಂದರವನವನ್ನು ರಕ್ಷಿಸು ಎಂಬ ಅಲ್ಲಾಹುವಿನ ಆದೇಶ ಕೇಳಿಸಿತು. ಅದೇ ಹೊತ್ತಿಗೆ ಕಾಡಿನಿಂದ ತನ್ನ ಹೆಂಡತಿ ಮತ್ತು ಮಕ್ಕಳನ್ನು ಕರೆದುಕೊಂಡು ಹೋಗಲು ಬಾನ್‌ಬಿಬಿಯ ತಂದೆ ಇಬ್ರಾಹಿಮ್ ಬಂದ. ಆತನೊಂದಿಗೆ ಹೊರಡಲು ತಾಯಿ ಗುಲಾಲ್ ಮತ್ತು ಸಹೋದರ ಜಂಗ್ಲಿ ಸಜ್ಜಾಗುತ್ತಿದ್ದಂತೆ ಬಿಬಿ ತನ್ನ ಸಹೋದರನನ್ನು ಕರೆದು ತನ್ನೊಂದಿಗೆ ಮುಖ್ಯ ಕೆಲಸಕ್ಕೆ ಬರಬೇಕೆಂದು ಅವನಿಗೆ ಹೇಳಿದರು. ಬಿಬಿ ಆದೇಶಿಸಿದಂತೆ ಅವಳೊಂದಿಗೆ ಜಂಗ್ಲಿ ಮೊದಲು ಮೆದಿನಾಗೆ ಹೋಗಿ ಅಲ್ಲಿ ಫಾತೀಮಾಳ ಆಶೀರ್ವಾದ ಪಡೆದು, ಅಲ್ಲಿಂದ ಮೆಕ್ಕಾಗೆ ಹೋಗಿ ಅಲ್ಲಿನ ಒಂದಿಷ್ಟು ಮಣ್ಣನ್ನು ಹಿಡಿದು ಸುಂದರವನಕ್ಕೆ ವಾಪಸ್ ಬಂದರು. ಸುಂದರವನದ ಮಣ್ಣಿನೊಂದಿಗೆ ಮೆಕ್ಕಾದ ಮಣ್ಣನ್ನು ಬೆರೆಸಿ ಅವರಿಬ್ಬರು ಅಲ್ಲಾಹುವಿಗೆ ಪ್ರಾರ್ಥಿಸಲಾರಂಭಿಸಿದರು.

ದಕ್ಷಿಣದ ರಾಜನಿಗೆ ಅವರ ಪ್ರಾರ್ಥನೆಯ ಸದ್ದು ಕೇಳಿಸಿತಲ್ಲದೆ, ಅವರು ಅಲ್ಲಾಹುವಿಗೆ ಮೊರೆ ಇಟ್ಟಿದ್ದನ್ನು ಕೇಳಿ ರೇಗಿ ಹೋಯಿತು. ಅವರಿಬ್ಬರನ್ನು ಅಲ್ಲಿಂದ ಒದ್ದೋಡಿಸಲು ಆತ ನಿರ್ಧರಿಸಿದ. ಆದರೆ ದಕ್ಷಿಣದ ರಾಜನ ತಾಯಿ ನಾರಾಯಣಿ ಬಂದು ಮಹಿಳೆಯೋರ್ವಳೊಂದಿಗೆ ಮಹಿಳೆಯೋರ್ವಳೇ ಯುದ್ಧ ಮಾಡಬೇಕೆಂದು ಹೇಳಿ ತಾನೇ ಬಾನ್‌ಬಬಿ ವಿರುದ್ಧ ಯುದ್ಧಕ್ಕೆ ನಿಂತಳು. ಆದರೆ ಆ ಯುದ್ಧದಲ್ಲಿ ನಾರಾಯಣಿ ಸೋಲಲಾರಂಭಿಸಿದಾಗ ತನ್ನ ರಕ್ಷಣೆಗೆ ಬಾನ್‌ಬಿಬಿಯನ್ನು 'ಗೆಳತಿ' ಎಂದು ಕರೆದಳು. ಬಾನ್‌ಬಬಿಗೆ ಅದರಿಂದ ಆನಂದವಾಗಿ ನಾರಾಯಣಿಯ ಸ್ನೇಹವನ್ನು ಒಪ್ಪಿಕೊಂಡು ಯುದ್ಧವನ್ನು ಅಂತ್ಯಗೊಳಿಸಿದಳು.

ಹೀಗೆ ಬಾನ್‌ಬಿಬಿಯ ಕತೆ ಕೊನೆಯಾಗುತ್ತಾದರೂ ಅದರ ಬೆನ್ನಿಗೆ ದುಃಖಿಯ ಕತೆ ಪ್ರಾರಂಭವಾಗುತ್ತದೆ. ದುಃಖಿ ಎಂಬ ಬಾಲಕ ತನ್ನ ವಿಧವಾ ತಾಯಿಯೊಂದಿಗೆ ಜೀವಿಸುತ್ತಿದ್ದು ಜೀವನೋಪಾಯಕ್ಕಾಗಿ ಇತರರ ಜಾನುವಾರುಗಳನ್ನು ಮೇಯಿಸುತ್ತಿದ್ದ. ಒಂದು ದಿನ ದುಃಖಿಯ ಮಾವ ಸಿರಿವಂತ ಬಂದು ಕಾಡಿನಿಂದ ಜೇನುತುಪ್ಪ ತರುವ ತನ್ನ ತಂಡದೊಂದಿಗೆ ಬರಬೇಕೆಂದು ಹೇಳಿದ. ಆದರೆ ದುಃಖಿಯ ತಾಯಿಗೆ ತನ್ನ ಮಗನನ್ನು ಕಾಡಿಗೆ ಕಳುಹಿಸುವುದು ಒಂದಿಷ್ಟೂ ಇಷ್ಟವಿರಲಿಲ್ಲ. ಸಿರಿವಂತ ಒತ್ತಾಯ ಮಾಡಿದ್ದರಿಂದ ಆಕೆ ಕೊನೆಗೂ ಒಪ್ಪಿ "ಕಾಡಿನಲ್ಲಿ ಅಪಾಯ ಎದುರಾದರೆ ಬಾನ್‌ಬಿಬಿಯನ್ನು ಸ್ಮರಿಸು" ಎಂದು ತನ್ನ ಮಗನಿಗೆ ಹೇಳಿ ದುಃಖಿಯನ್ನು ಕಳುಹಿಸಿದಳು. ಸಿರಿವಂತನ ತಂಡ ಕಾಡಿನಲ್ಲಿ ಎಷ್ಟೇ ಅಲೆದರೂ ಅವರಿಗೆ ಜೇನುಗೂಡುಗಳು ಕಾಣಿಸಲಿಲ್ಲ. ಆಗ ಸಿರಿವಂತನ ಮುಂದೆ ಪ್ರತ್ಯಕ್ಷನಾದ ದಕ್ಷಿಣದ ರಾಜ "ನೀನು ದುಃಖಿಯನ್ನು ನನಗೆ ಒಪ್ಪಿಸಿದರೆ ನಾನು ನಿನಗೆ ಏಳು ದೋಣಿಗಳಷ್ಟು ಜೇನುತುಪ್ಪ ಮತ್ತು ಜೇನುಮೇಣವನ್ನು ಕೊಡುತ್ತೇನೆ" ಎಂಬ ಆಮಿಷ ಒಡ್ಡಿದ. ಅದಕ್ಕೆ ಸಿರಿವಂತ ಒಪ್ಪಿ ದುಃಖಿಯನ್ನು ಕಾಡಿನಲ್ಲೇ ಬಿಟ್ಟು ಹೊರಟುಹೋದ. ಇನ್ನೇನು ಅವನನ್ನು ದಕ್ಷಿಣದ ರಾಜ ತಿಂದುಹಾಕಬೇಕು ಆಗ ದುಃಖಿ ಬಾನ್‌ಬಿಬಿಯ ಹೆಸರನ್ನು ಕೂಗಿದ. ಆಗ ಬಾನ್‌ಬಿಬಿ ತನ್ನ ಸಹೋದರ ಜಂಗ್ಲಿಯನ್ನು ಕಳುಹಿಸಿ ದಕ್ಷಿಣದ ರಾಜನಿಗೆ ಹೊಡೆಯಲು ಆದೇಶಿಸಿ ದಳು. ತನ್ನ ಪ್ರಾಣಕ್ಕೆ ಹೆದರಿದ ರಾಜ ತನ್ನ ಸ್ನೇಹಿತನಾಗಿದ್ದ ಘಾಜಿ ಎಂಬ ಫಕೀರನನ್ನು ಸಂಪರ್ಕಿಸಿದ. ಬಾನ್‌ಬಿಬಿ ಮತ್ತು ದಕ್ಷಿಣದ ರಾಜನ ನಡುವೆ ಮಾತುಕತೆ ನಡೆಯುವಂತೆ ನೋಡಿಕೊಂಡ ಫಕೀರ, ಬಾನ್‌ಬಿಬಿಯ ಕ್ಷಮೆ ಕೇಳು ಮತೆಯೂ, ಆಕೆಯನ್ನು "ತಾಯಿ" ಎಂದು ಕರೆಯು ಮತೆಯೂ ದಕ್ಷಿಣದ ರಾಜನಿಗೆ ಹೇಳಿದ. ಅದರಂತೆ ಆತ ನಡೆದುಕೊಂಡಾಗ ಅವನನ್ನು ತನ್ನ ಮಗ ಎಂದು ಬಾನ್‌ಬಿಬಿ ಒಪ್ಪಿಕೊಂಡಳು.




ಆದರೆ ದಕ್ಷಿಣದ ರಾಜ ಅಲ್ಲಿಗೇ ಸುಮ್ಮನಾಗಲಿಲ್ಲ. ಮಾನವರಿಗೆ ಸಂಪೂರ್ಣ ಸ್ವಾತಂತ್ಯ ಕೊಟ್ಟರೆ ಅವರು ಕಾಡನ್ನು ಸಂಪೂರ್ಣವಾಗಿ ನಾಶ ಮಾಡುತ್ತಾರೆ ಎಂದು ವಾದಿಸಿದ. ಆತ ಹೇಳಿದ್ದರಲ್ಲಿ ಸತ್ಯ ಇದ್ದುದರಿಂದ ಬಾನ್‌ಬಿಬಿ ದುಃಖಿ ಮತ್ತು ರಾಜನ ನಡುವೆ ಒಂದು ಒಪ್ಪಂದವನ್ನು ಏರ್ಪಡಿಸಿದಳು. ಅದರಂತೆ ಮಾನವರು ಮತ್ತು ಹುಲಿಗಳು ಪರಸ್ಪರರನ್ನು ಸಹೋದರರು ಎಂದು ಒಪ್ಪಿಕೊಳ್ಳಬೇಕು. ಅಷ್ಟೇ ಅಲ್ಲ, ಮಾನವರಿಗೆ ಹಾನಿ ಮಾಡದಂತೆ ದಕ್ಷಿಣದ ರಾಜನಿಂದಲೂ, ವನವನ್ನು ನಾಶ ಮಾಡದಂತೆ ದುಃಖಿಯಿಂದಲೂ ಪ್ರಮಾಣ ಮಾಡಿಸಿದಳು. ಈ ಒಪ್ಪಂದದ ಇನ್ನೊಂದು ಅಂಶ ಮಾನವರು ಶುದ್ಧ ಹೃದಯದಿಂದ ಮತ್ತು ಬರಿಗೈಯಲ್ಲಿ ಮಾತ್ರ ಅರಣ್ಯವನ್ನು ಪ್ರವೇಶಿಸಬೇಕು ಎಂಬುದಾಗಿತ್ತು. ಅದರರ್ಥ ಮಾನವರು ಅತಿಆಶೆಯಿಂದ ಅರಣ್ಯವನ್ನು ನಾಶ ಮಾಡಬಾರದೆಂದೂ ಮತ್ತು ಬರಿಗೈಯಾಗಿದ್ದವನು ಮಾತ್ರ ತನ್ನ ಜೀವನೋಪಾಯಕ್ಕೆ ಅರಣ್ಯವನ್ನು ಪ್ರವೇಶಿಸಿ ತನಗೆ ಅಗತ್ಯವಾಗಿ ಬೇಕಿರುವಷ್ಟನ್ನು ಮಾತ್ರ ತೆಗೆದುಕೊಳ್ಳಬೇಕೆಂಬುದೂ ಆಗಿತ್ತು. ಹಾಗೆಯೇ ಅರಣ್ಯವು ಪ್ರಾಣಿಗಳಿಗೂ ಮತ್ತು ಮನುಷ್ಯರಿಗೂ ಅಗತ್ಯವಾಗಿ ಬೇಕಿದೆ ಎಂಬುದನ್ನು ಮತ್ತು ಪರಸ್ಪರ ರಕ್ಷಣೆಗಾಗಿ ಅದನ್ನು ನಾಶಪಡಿಸಬಾರದೆಂಬುದನ್ನು ಎಲ್ಲರೂ ಗುರುತಿಸುವುದಾಗಿತ್ತು.

ಇವತ್ತಿಗೂ ಸುಂದರವನದಲ್ಲಿ ವಾಸಿಸುವ ಜನ ತಮ್ಮನ್ನು ದುಃಖಿಯೊಂದಿಗೆ ಗುರುತಿಸಿ ಕೊಳ್ಳುತ್ತಾರಲ್ಲದೆ, ಬಾನ್‌ಬಿಬಿ ತಮ್ಮನ್ನು ರಕ್ಷಿಸುತ್ತಾಳೆ ಎಂದೇ ನಂಬಿದ್ದಾರೆ. ಆ ಕಾರಣಕ್ಕಾಗಿಯೇ ಅವರು ಅರಣ್ಯವನ್ನು ಪ್ರವೇಶಿಸುವ ಮುನ್ನ ಅವರು ಯಾವ ಧರ್ಮಕ್ಕೆ ಸೇರಿದ್ದರೂ ಬಾಬ್‌ಬಿಬಿಗೆ ಪೂಜೆ ಸಲ್ಲಿಸುತ್ತಾರೆ. ಅಷ್ಟೇ ಅಲ್ಲ, ಎಲ್ಲ ಜನರೂ ಸಮಾನರೆಂದೂ, ಹುಲಿಗಳೂ ಮನುಷ್ಯರಷ್ಟೇ ಮುಖ್ಯವೆಂದೂ, ಪ್ರಕೃತಿಯಂತೆ ಮನುಷ್ಯರಲ್ಲೂ ಧರ್ಮ, ಜಾತಿ, ವರ್ಗಗಳಂತಹ ಭೇದಭಾವಗಳಿರಬಾರದೆಂದೂ ನಂಬುತ್ತಾರೆ.

ಬಾನ್‌ಬಿಬಿ ಮತ್ತು ದುಃಖಿಯ ಕತೆ ಎಷ್ಟು ಅರ್ಥಪೂರ್ಣವಾಗಿದೆಯಲ್ಲವೆ? ಇದರಲ್ಲಿ ಜನರನ್ನು ಶೋಷಿಸುವ ವರ್ಗ, ಅಮಾಯಕರ ಅಸಹಾಯಕತೆ, ನಿಸರ್ಗ ಸಹಜ ಭಾವನೆ, ಲಿಂಗ, ಜಾತಿ, ಧರ್ಮವನ್ನು ಮೀರಿದ ನಂಬಿಕೆ, ಪರಿಸರ ರಕ್ಷಣೆ ಬಗೆಗಿನ ಕಾಳಜಿ, ಎಲ್ಲವೂ ಎಷ್ಟು ಚೆನ್ನಾಗಿ ವ್ಯಕ್ತವಾಗಿದೆ.

ಈ ಕತೆ ನನ್ನನ್ನು ಕಾಡಿದ್ದರಿಂದ ನಿಮ್ಮೊಂದಿಗೆ ಇಲ್ಲಿ ಹಂಚಿಕೊಂಡಿದ್ದೇನೆ.



ಅಶಾಂತಿ ಧೂತನಿಗೆ ನೊಬೆಲ್ 'ಶಾಂತಿ' ಪುರಸ್ಕಾರ

ಪ್ರಾಯಶಃ ನೊಬೆಲ್ ಪ್ರಶಸ್ತಿ ಪ್ರಾರಂಭವಾದಾಗಿನಿಂದಲೂ ಇಂತಹದ್ದೊಂದು ಅವಘಡ ನಡೆದಿರಲಿಲ್ಲವೇನೋ? ಆದರೆ ಈ ಬಾರಿ ನಡೆದುಹೋಗಿದೆ. ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾಗೆ ನೊಬೆಲ್ ಶಾಂತಿ ಪುರಸ್ಕಾರ ದೊರೆತಿದೆ. ಇದರೊಂದಿಗೆ 'ನೊಬೆಲ್ ಪ್ರಶಸ್ತಿ'ಗೆ ಇದ್ದ ಪ್ರತಿಷ್ಠೆ ಗೌರವಗಳೂ ಮಣ್ಣುಪಾಲಾಗಿದೆ. 'ನೊಬೆಲ್ ಪ್ರಶಸ್ತಿ' ಎಂದರೆ ಮಾರುಕಟ್ಟೆಯಲ್ಲಿ ದುಡ್ಡು ಕೊಟ್ಟು ಕೊಂಡುಕೊಳ್ಳಬಹುದಾದ ಅಥವಾ ಅಧಿಕಾರ ವಿದ್ದವರು ಆಜ್ಞೆ ಮಾಡಿ ಪಡೆದುಕೊಳ್ಳಬಹುದಾದ ವಸ್ತುವಾಗುವ ದಿನ ದೂರವಿಲ್ಲ ಎಂಬುದಕ್ಕೆ ಒಬಾಮಾರಿಗೆ ನೊಬೆಲ್ ಪ್ರಶಸ್ತಿ ಸಿಕ್ಕಿರುವುದೇ ಸಾಕ್ಷಿ.

ಎಲ್ಲದನ್ನೂ ನಕಾರಾತ್ಮಕ ಕಣ್ಣಿನಿಂದಲೇ ನೋಡುವ 'ಸಿನಿಕತನ' ಪ್ರವೃತ್ತಿಯನ್ನು ಬದಿಗೊತ್ತಿ ವಾಸ್ತವದ ನೆಲೆಗಟ್ಟಿನಲ್ಲೇ ಈ ವಿಚಾರವನ್ನು ವಸ್ತುನಿಷ್ಠವಾಗಿಯೇ ವಿಶ್ಲೇಷಿಸೋಣ. ಒಬಾಮಾ ಅಮೆರಿಕದ ಅಧ್ಯಕ್ಷ ಗಾದಿಗೇರಿ ಇನ್ನೂ ಒಂಭತ್ತು ತಿಂಗಳು ತುಂಬಿಲ್ಲ, ಅಷ್ಟರಲ್ಲೇ ಅವರಿಗೆ ಅತ್ಯುನ್ನತ ನೊಬೆಲ್ ಶಾಂತಿ ಪುರಸ್ಕಾರ ದೊರೆತಿದೆ ಎಂದರೆ ಈ ಒಂಭತ್ತು ತಿಂಗಳಲ್ಲಿ ವಿಶ್ವದಲ್ಲಿ ಶಾಂತಿ ಸ್ಥಾಪನೆಗಾಗಿ ಅವರು ಮಾಡಿದ ಘನಂದಾರಿ ಕೆಲಸವಾದರೂ ಏನಿದೆ ಎಂಬುದನ್ನು ಕೆದಕಿ ನೋಡೋಣ. ಅವರನ್ನು ಪ್ರಶಸ್ತಿಗಾಗಿ ಆಯ್ಕೆ ಮಾಡಿರುವ ನಾರ್ವೆಯ ಅತ್ಯುನ್ನತ ನೊಬೆಲ್ ಶಾಂತಿ ಪುರಸ್ಕಾರ ಸಮಿತಿಯು *"ಅಣ್ವಸ್ತ್ರ ಮುಕ್ತ ವಿಶ್ವದ ನಿರ್ಮಾಣಕ್ಕಾಗಿನ ಒಬಾಮಾ ಅವರ ದೂರದೃಷ್ಟಿಯನ್ನು ಪರಿಗಣಿಸಿ"* ನೊಬೆಲ್ ಪ್ರಶಸ್ತಿಗಾಗಿ ಅವರನ್ನು ಆಯ್ಕೆ ಮಾಡಿರುವುದಾಗಿ ಹೇಳಿದೆ. ಇದೊಂಥರಾ ಹೇಗಿದೆಯೆಂದರೆ ನಾನು ನೂರೈವತ್ತು ಸೆಂಚೂರಿ ಹೊಡೆಯುತ್ತೇನೆಂದು ಹೇಳಿದ ಕ್ರಿಕೆ ಟ್ ಆಟಗಾರನೊಬ್ಬನಿಗೆ ಅತ್ಯಮೂಲ್ಯ ಪ್ರಶಸ್ತಿ ಕೊಟ್ಟಂತಾಗಿದೆ. ಆತ ಕನಿಷ್ಠ ಒಂದು ಸೆಂಚುರಿ ಹೊಡೆಯುತ್ತಾನೋ ಅಥವಾ ಆಡಿದ ಎಲ್ಲಾ ಆಟಗಳಲ್ಲೂ ಸೊನ್ನೆ ರನ್ ಗಳಿಸಿ ಪೆವಿಲಿಯನ್‌ಗೆ ಮರಳುತ್ತಾನೋ ಎಂಬುದು ಭವಿಷ್ಯದ ವಿಚಾರ.

ಒಬಾಮಾ ಅವರು ಮನುಕುಲವನ್ನೇ ಸರ್ವನಾಶ ಮಾಡಬಲ್ಲ ಅಣ್ವಸ್ತ್ರಗಳು ಇರದಂತಹ ವಿಶ್ವವನ್ನು ನಿರ್ಮಾಣ ಮಾಡಬೇಕೆಂದು ಹೇಳಿದ್ದು ನಿಜ. ಹೋದಲ್ಲೆಲ್ಲಾ, ಬಂದಲ್ಲೆಲ್ಲಾ ಅಣ್ವಸ್ತ್ರ ಹೊಂದಿರುವ ದೇಶಗಳು ತಮ್ಮಲ್ಲಿರುವ ಈ ಅಪಾಯಕಾರಿ ಅಸ್ತ್ರಗಳನ್ನು ನಾಶಗೊಳಿಸಬೇಕೆಂದು ಒತ್ತಾಯಿಸುತ್ತಿರುವುದು ನಿಜ. ಆದರೆ, ಇಡೀ ಪ್ರಪಂಚವನ್ನೇ ಸುಟ್ಟು ಹಾಕುವಷ್ಟು ಅಣ್ವಸ್ತ್ರಗಳು ಅಮೆರಿಕದ ಬಳಿಯಲ್ಲೇ ಇವೆಯಲ್ಲ? ನಿಜ ಹೇಳಬೇಕೆಂದರೆ, ವಿಶ್ವದಲ್ಲಿ ಅತೀ ಹೆಚ್ಚು ಅಣ್ವಸ್ತ್ರಗಳಿರುವುದು ಅಮೆರಿಕ ಮತ್ತು ರಷ್ಯಾದ ಬಳಿಯೆ. ಅಮೆರಿಕದಲ್ಲಿ ಏನಿಲ್ಲವೆಂದರೂ **10,000** ನ್ಯೂಕ್ಲಿಯರ್ ವಾರ್‌ಹೆಡ್‌ಗಳಿವೆ ಎಂದು ವಿಶ್ವದ ಪ್ರಖ್ಯಾತ ರಕ್ಷಣಾ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ರಷ್ಯಾದ ಬಳಿ **16,000** ಇವೆ. ಉಳಿದಂತೆ ಫ್ರಾನ್ಸ್ ಬಳಿ **350**, ಇಂಗ್ಲೆಂಡ್, ಇಸ್ರೇಲ್ ಮತ್ತು ಚೀನ ಬಳಿ ತಲಾ **200** ವಾರ್‌ಹೆಡ್‌ಗಳಿವೆ. ಹೀಗೆ ಪ್ರಪಂಚದಲ್ಲಿ ಒಟ್ಟು ಸುಮಾರು **27,000** ನ್ಯೂಕ್ಲಿಯರ್ ವಾರ್‌ಹೆಡ್‌ಗಳಿವೆ. ಇವುಗಳಲ್ಲಿ ಅಮೆರಿಕದಲ್ಲಿರುವ ನ್ಯೂಕ್ಲಿಯರ್ ವಾರ್‌ಹೆಡ್‌ಗಳಷ್ಟೇ ಸಿಡಿದರೂ ಸಾಕು ಇಡೀ ಭೂಮಂಡಲ ಕ್ಷಣಾರ್ಧದಲ್ಲಿ ಸುಟ್ಟು ಕರಕಲಾಗುತ್ತದೆ.

'ನಿಮ್ಮಲ್ಲಿರುವ ಅಣ್ವಸ್ತ್ರಗಳನ್ನು ನಾಶ ಮಾಡಿ' ಎಂದು ಒಬಾಮಾ ಬೇರೆ ದೇಶಗಳನ್ನು ಒತ್ತಾಯಿಸುತ್ತಿದ್ದಾರೆಯೇ ಹೊರತು ತನ್ನ ಮಡಿಲಲ್ಲೇ ಇರುವ ಅಣ್ವಸ್ತ್ರಗಳ ಬಗ್ಗೆ ಚಕಾರವೆತ್ತುತ್ತಿಲ್ಲ. ಅವರು ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣಕ್ಕಾಗಿ ರೋಡ್ ಮ್ಯಾಪ್ ಮಂಡಿಸಿದ ಮೊದಲ ಭಾಷಣದಲ್ಲೇ ಎಲ್ಲಿಯತನಕ ಇರಾನ್ ಅಣ್ವಸ್ತ್ರಗಳನ್ನು ನಿರ್ಮಿಸುತ್ತಿರುತ್ತೋ ಅಲ್ಲಿಯತನಕ ಅಮೆರಿಕ ಅಣ್ವಸ್ತ್ರ ರಕ್ಷಕ ಕ್ರಮಗಳನ್ನು ಕೈಗೊಳ್ಳುತ್ತಲೇ ಇರುತ್ತೆ ಎಂದಿದ್ದರು. ಅದರಂತೆ ತನ್ನ ದೇಶದ ಮೇಲೆ ಬೇರೊಂದು ದೇಶವು ಕ್ಷಿಪಣಿಗಳ ಮೂಲಕ ಅಣ್ವಸ್ತ್ರ ಪ್ರಯೋಗ ಮಾಡಲು ಮುಂದಾದರೆ ಆ ಅಸ್ತ್ರಗಳು ಅಮೆರಿಕದ ನೆಲದಲ್ಲಿ ಬೀಳುವ ಮೊದಲೇ ಆಕಾಶದಲ್ಲೇ ಅವುಗಳನ್ನು ಧ್ವಂಸಗೊಳಿಸುವ ಕ್ಷಿಪಣಿ ರಕ್ಷಾ ಕವಚಗಳನ್ನು **(Missile Defense Shield)** ಒಬಾಮಾ ಸರ್ಕಾರ ನಿರ್ಮಿಸಿಕೊಳ್ಳುತ್ತಿದೆ. ನಾಳೆ ಇರಾನ್ ಕೂಡ ಎಲ್ಲಿಯತನಕ ಅಮೆರಿಕದ ಬಳಿ ಅಣ್ವಸ್ತ್ರಗಳಿರುತ್ತವೆಯೋ ಅಲ್ಲಿಯತನಕ ತನ್ನನ್ನು ರಕ್ಷಿಸಿಕೊಳ್ಳುವುದಕ್ಕೆ ತಾನೂ ಅಣ್ವಸ್ತ್ರ ಹೊಂದುತ್ತೇನೆಂದು ಇದೇ ರೀತಿಯ ವಾದವನ್ನು ಮುಂದಿಡಬಹುದು. ಅಣ್ವಸ್ತ್ರ ಹೊಂದಿದ ಪ್ರತಿಯೊಂದು ದೇಶವೂ ಮತ್ತೊಂದು ಅಣ್ವಸ್ತ್ರ ಹೊಂದಿದ ದೇಶದಿಂದ ತನ್ನನ್ನು ರಕ್ಷಿಸಿಕೊಳ್ಳುವುದಕ್ಕೆ ತಾನೂ ಅಣ್ವಸ್ತ್ರ ಹೊಂದಿದೆ ಎಂಬ ಸಮರ್ಥನೆ ಯಾವಾಗಲೂ ಇದ್ದೇ ಇರುತ್ತದೆ. ಅಲ್ಲಿಗೆ ಒಬಾಮಾ ಅವರ ಅಣ್ವಸ್ತ್ರ ಮುಕ್ತ ನಿರ್ಮಾಣದ ಮಾತು ಭಾರತದ ರಾಜಕಾರಣಿಗಳ ಆಶ್ವಾಸನೆಗಳಂತೆ ಕೇವಲ ಮಾತಾಗಿಯೇ ಉಳಿಯುತ್ತದೆ. ಹೀಗೆ, ಬೇರೆಯವರಿಗೆ ಅಣ್ವಸ್ತ್ರ ಹೊಂದಬೇಡಿ, ಇದ್ದ ಅಣ್ವಸ್ತ್ರಗಳನ್ನು ನಾಶ ಮಾಡಿ ಎಂದು ಉಪದೇಶ ಮಾಡುತ್ತಾ ತಾನು ಮಾತ್ರ ಎಷ್ಟು ಬೇಕೋ ಅಷ್ಟು ಅಣ್ವಸ್ತ್ರಗಳನ್ನು ಇಟ್ಟುಕೊಳ್ಳುತ್ತಾ, ಹೊಸ ಹೊಸ ಅಣ್ವಸ್ತ್ರ ನಿರೋಧ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಾ 'ಅಣ್ವಸ್ತ್ರ ಮುಕ್ತ ವಿಶ್ವ' ಎಂದು ಕೇವಲ ತುಟಿಸೇವೆ ಮಾಡಿದ್ದಕ್ಕಾಗಿ ಒಬಾಮಾ ಅವರಿಗೆ ನೊಬೆಲ್ ಶಾಂತಿ ಪುರಸ್ಕಾರ ಕೊಡಲಾಯಿತೆ?



ಒಬಾಮಾಗೆ ಸಿಕ್ಕಿದ್ದು ನೊಬೆಲ್ 'ಶಾಂತಿ' ಪುರಸ್ಕಾರ. ಆದರೆ, ಅವರು ತೊಡಗಿರುವುದು ಯುದ್ಧ ಮತ್ತು ಹಿಂಸೆಯ ಮೂಲಕ ವಿಶ್ವದಾದ್ಯಂತ 'ಅಶಾಂತಿ' ಸೃಷ್ಟಿಸುವ ಕೆಲಸದಲ್ಲಿ. ಅವರಿಗಿಂತಲೂ ಹಿಂದಿದ್ದ ಅಧ್ಯಕ್ಷ ಬುಷ್ ನೇರವಾಗಿ ಹಿಂಸಾಚಾರ ಅನಿವಾರ್ಯ ಎಂಬಂತೆ ಮಾತನಾಡುತ್ತಿದ್ದರು. ಇಡೀ ಜಗತ್ತಿಗೆ ಜಗತ್ತೇ ಒಕ್ಕೊರಲಿನಿಂದ ವಿರೋಧಿಸಿದರೂ, ತಿಂಗಳುಗಟ್ಟಲೇ ಬೀದಿಗಿಳಿದು ಪ್ರತಿಭಟನೆ ಮಾಡಿದರೂ ಅಫಘಾನಿಸ್ತಾನ ಮತ್ತು ಇರಾಕ್ ಮೇಲೆ ನಿರ್ದಯವಾಗಿ ದಾಳಿ ಮಾಡಿ ಆ ಎರಡು ದೇಶಗಳನ್ನು ನರಕ ಮಾಡಿಟ್ಟರು. ಇಂಥ ಫ್ಯಾಸಿಸ್ಟ್, ಕ್ರೂರಿ ಮತ್ತು ನಿರ್ದಯಿ ಬುಷ್‌ನನ್ನು ಜನ ತಮ್ಮ ಶತ್ರು ಎಂದು ಗುರುತಿಸುವುದು ಬಹಳ ಸುಲಭವಾಗುತ್ತಿತ್ತು.


ಒಬಾಮಾ ಮೇಲ್ನೋಟಕ್ಕೆ ಇಷ್ಟೊಂದು ಕ್ರೂರಿಯಾಗಿ ಕಾಣಿಸಿಕೊಳ್ಳದಂತೆ ಬೆಣ್ಣೆಯಂಥ ಮಾತುಗಳನ್ನಾಡುತ್ತಾರೆ. ಆದರೆ, ಅಂತರ್ಯದಲ್ಲಿ ಕ್ರೂರತನದಲ್ಲಿ ಬುಷ್‌ಗಿಂತ ಏನೇನೂ ಕಡಿಮೆಯಿಲ್ಲ, ಒಂದು ಕಡೆ ಶಾಂತಿಧೂತನಂತೆ ಮಾತನಾಡುತ್ತಲೇ ಇನ್ನೊಂದೆಡೆ ಬುಷ್ ಸರ್ಕಾರ ಪ್ರಾರಂಭಿಸಿದ ಎಲ್ಲಾ ಯುದ್ಧಗಳನ್ನು ಚಾಚೂತಪ್ಪದೇ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಆದರೆ, ಬೆಣ್ಣೆಯಂಥ ಅವರ ಮಾತುಗಳ ಕಾರಣದಿಂದಾಗಿ ಅವರನ್ನು ಜನ ತಮ್ಮ 'ಶತ್ರು' ಎಂದು ಪರಿಗಣಿಸುವುದು ತುಸು ಕಷ್ಟವಾಗುತ್ತದೆ. ಯಾವಾಗಲೂ ಸ್ಪಷ್ಟವಾಗಿ ಕಾಣುವ ಶತ್ರುವಿಗಿಂತ, ಮಿತ್ರನ ವೇಶದಲ್ಲಿರುವ ಶತ್ರು ಬಹಳ ಅಪಾಯಕಾರಿಯಾಗಿರುತ್ತಾನೆ. ಒಬಾಮಾ ಮಿತ್ರನ ವೇಶದಲ್ಲಿರುವ ಶತ್ರು.

ಕೆಲವು ಉದಾಹರಣೆಗಳನ್ನೇ ನೋಡಿ. ಒಂದೆಡೆ ಇರಾಕ್‌ನಿಂದ ಅಮೆರಿಕದ ಪಡೆಗಳನ್ನು ನಿಧಾನವಾಗಿ ವಾಪಸ್ ಕರೆಸಿಕೊಳ್ಳುತ್ತೇನೆಂದು ಹೇಳುತ್ತಲೇ ಇನ್ನೊಂದೆಡೆ ಭಾರಿ ಪ್ರಮಾಣದಲ್ಲಿ ಅಫಘಾನಿಸ್ತಾನಕ್ಕೆ ತಮ್ಮ ಸೈನ್ಯವನ್ನು ಕಳಿಸುತ್ತಿದ್ದಾರೆ. ಬುಷ್ ಅಫಘಾನಿಸ್ತಾನಕ್ಕೆ **34,000** ಅಮೆರಿಕನ್ ಸೈನಿಕರನ್ನು ಕಳಿಸಿದ್ದರು. **2002**ರಲ್ಲಿ ಹೋದ ಈ ಪಡೆ ಇಲ್ಲಿಯ ತನಕ ಹಿಂತಿರುಗಿಲ್ಲ. ಈ ಸುದೀರ್ಘ ಅವಧಿಯಲ್ಲಿ ಅದು ಅಫಘಾನಿಸ್ತಾನದ ಸಾಮಾನ್ಯ ಜನತೆಯ ಮೇಲೆ ಮಾಡಿರುವ ದೌರ್ಜನ್ಯಗಳನ್ನು, ದೇಶವನ್ನು ಹಾಳು ಮಾಡಿದ ರೀತಿಯನ್ನು ಬರೆಯುತ್ತಾ ಹೋದರೆ ಅದೇ ಒಂದು ಉದ್ಗ್ರಂಥವಾದೀತು. ಈಗ ಒಬಾಮಾ ಈ **34,000** ಸೈನಿಕರಲ್ಲದೇ ಹೆಚ್ಚುವರಿಯಾಗಿ ಇನ್ನೂ **34,000** ಸೈನಿಕರನ್ನು ಕಳಿಸುತ್ತಿದ್ದಾರೆ. ಈಗಾಗಲೇ ಅಲ್ಲಿದ್ದ ಸೈನ್ಯವೇ ಹೇಳತೀರದಷ್ಟು ದೌರ್ಜನ್ಯಗಳನ್ನೆಸಗಿರುವಾಗ ಈಗ ಒಟ್ಟು **68,000** ಸೈನಿಕರನ್ನೊಳಗೊಂಡ, ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನೊಳಗೊಂಡ ಬೃಹತ್ ಪಡೆ ಇನ್ನೆಂಥ ನರಕ ಸೃಷ್ಟಿಸಬಹುದು ಎಂಬುದನ್ನು ಊಹಿಸುವುದು ಕಷ್ಟವಲ್ಲ. ಬುಷ್ ಕೂಡ 'ಶಾಂತಿ ಸ್ಥಾಪನೆ' ಮತ್ತು 'ಪ್ರಜಾಪ್ರಭುತ್ವ ಸ್ಥಾಪನೆ' ಹೆಸರಿನಲ್ಲೇ ಸೈನ್ಯ ಕಳಿಸಿ 'ಅಶಾಂತಿ' ಮತ್ತು 'ಸರ್ವಾಧಿಕಾರ' ಸ್ಥಾಪಿಸಿದ್ದರು. ಈಗ ಒಬಾಮಾ ಕೂಡ ಅದನ್ನೇ ಇನ್ನಷ್ಟು ಜೋರಾಗಿ ಮಾಡುತ್ತಿದ್ದಾರೆ. ಹೀಗೆ, ಅಫಘಾನಿಸ್ತಾನವನ್ನು ಶಾಶ್ವತ ನರಕ ಮಾಡುವ ಘನಂದಾರಿ ಕೆಲಸಕ್ಕೆ ಕೈಹಾಕಿದ್ದರಿಂದ ಅವರಿಗೆ ನೊಬೆಲ್ 'ಶಾಂತಿ' ಪ್ರಶಸ್ತಿ ಕೊಡಲಾಗಿದೆಯೆ? ನೊಬೆಲ್ ಶಾಂತಿ ಪುರಸ್ಕಾರ ಸಮಿತಿಯವರಿಗೆ ಈ 'ಯುದ್ಧ' ಶಾಂತಿಯಂತೆ ಕಾಣಿಸುತ್ತಿದೆಯೆ?

ಅಮೆರಿಕದ ಚರಿತ್ರೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಆ ದೇಶ ಯಾವಾಗಲೂ ಒಂದಲ್ಲಾ ಒಂದು ಕಡೆ ಯುದ್ಧ ಮಾಡುತ್ತಾ ರಕ್ತದೋಕುಳಿ ಆಡುವ ರಾಕ್ಷಸನಂತೆ ಕಾಣುತ್ತದೆ. ಕಳೆದ ಒಂದು ನೂರು ವರ್ಷಗಳಲ್ಲಿ ಒಂದು ನೂರಕ್ಕೂ ಹೆಚ್ಚು ಬಾರಿ ವಿದೇಶಗಳ ಆಂತರಿಕ ವಿಚಾರಗಳಲ್ಲಿ ತನ್ನ ಮಿಲಿಟರಿ ಶಕ್ತಿಯ ಮೂಲಕ ಹಸ್ತಕ್ಷೇಪ ಮಾಡಿದ ಕುಖ್ಯಾತಿಯ ಗರಿಯನ್ನು ತನ್ನ ಕಿರೀಟಕ್ಕೆ ಸಿಕ್ಕಿಸಿಕೊಂಡಿದೆ. ತನ್ನ ಎದುರು ಎದೆಸೆಟೆಸಿ ನಿಲ್ಲುವವರನ್ನು, ತನ್ನ ಆಜ್ಞೆಗಳನ್ನು ಪಾಲಿಸದವರನ್ನು ಪರಮ ಶತ್ರುಗಳೆಂದೇ ಪರಿಗಣಿಸುವ ಅಮೆರಿಕ ಅಂಥ ದೇಶಗಳನ್ನು ಮಿಲಿಟರಿ ಮೂಲಕವೇ ಮಟ್ಟ ಹಾಕುವ ಸರ್ವಾಧಿಕಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಅಫಘಾನಿಸ್ತಾನ ಮತ್ತು ಇರಾಕ್ ಮೇಲೆ ನಿರಂತರ ಯುದ್ಧ ಮಾಡುತ್ತಿದೆ.

ಈಗ ಇರಾನ್, ಸಿರಿಯ, ಕ್ಯೂಬಾ, ವೆನುಜುಯೆಲಾ, ರಶಿಯ, ಚೀನ ಮುಂತಾದ ದೇಶಗಳನ್ನು ಮಟ್ಟ ಹಾಕುವುದಕ್ಕೆ ವಿಶ್ವದಾದ್ಯಂತ ಅನೇಕ ಮಿಲಿಟರಿ ನೆಲೆಗಳನ್ನು ಸ್ಥಾಪಿಸಿದೆ. ಶಾಂತಿಧೂತನಂತೆ ಪೋಜು ಕೊಟ್ಟ ಒಬಾಮಾ ಅಧಿಕಾರಕ್ಕೆ ಬಂದ ಮೇಲಾದರೂ ಅಮೆರಿಕದ ಈ ಯುದ್ಧಕೋರ ಸಂಸ್ಕೃತಿ ಕೊನೆಗೊಳ್ಳಬಹುದೆಂದು ಜನ ಆಶಿಸಿದ್ದು ನಿಜ. ದುರಂತ ಎಂದರೆ, ಅಮೆರಿಕದ ಯುದ್ಧ ಸಿದ್ಧತೆಗಳು ಎಂದಿನಂತೆಯೇ ಯಾವುದೇ ಅಡೆತಡೆಯಿಲ್ಲದೇ ಸಾಗಿವೆ. ಅವರು ಅಧಿಕಾರಕ್ಕೆ ಬಂದ ಮೇಲೆ ಚೀನ, ರಶಿಯ, ಇರಾನ್, ಉತ್ತರ ಕೋರಿಯ ಮತ್ತು ವೆನುಜುಯೆಲಾ ದೇಶಗಳ ಆಜುಬಾಜಿನಲ್ಲಿ ಹೊಸ ಹೊಸ ಮಿಲಿಟರಿ ನೆಲೆಗಳನ್ನು ಸ್ಥಾಪಿಸುವ ಯೋಜನೆ ಸಿದ್ಧಗೊಂಡಿದೆ. ಈಗಾಗಲೇ ವೆನುಜುಯೆಲಾವನ್ನು ಯಾವಾಗ ಬೇಕಾದರೂ ಆಕ್ರಮಿಸಿ ವಶಪಡಿಸಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಕಾಂಬೋಡಿಯದಲ್ಲಿ ಹೊಸ ಮಿಲಿಟರಿ ನೆಲೆಯನ್ನು ಒಬಾಮ ಸ್ಥಾಪಿಸುತ್ತಿದ್ದಾರೆ. ಅವರಿಗೆ ನೊಬೆಲ್ ಶಾಂತಿ ಪುರಸ್ಕಾರ ಘೋಷಣೆಯಾಗುವ ಹಿಂದಿನ ದಿನವಷ್ಟೇ (ಅಕ್ಟೋಬರ್ **8, 2009**) **680** ಬಿಲಿಯನ್ ಡಾಲರ್‌ನಷ್ಟು ಬೃಹತ್ ಮೊತ್ತವನ್ನು ಮಿಲಿಟರಿ ಉದ್ದೇಶಗಳಿಗಾಗಿ ಬಳಸಿಕೊಳ್ಳುವ ಅಧಿಕಾರವನ್ನು ಒಬಾಮ ಅವರಿಗೆ ಅಮೆರಿಕದ ಕಾಂಗ್ರೆಸ್ ಕೊಟ್ಟಿದೆ. ಅಂದರೆ, ಈ ಹಿಂದಿನ ಸರ್ಕಾರಗಳಿಗಿಂತ ಭಿನ್ನವಾಗಿ, ಆದರೆ ಅದಕ್ಕಿಂತಲೂ ಭಯಾನಕವಾದ 'ಸುದೀರ್ಘ ಯುದ್ಧ'ಕ್ಕೆ ಒಬಾಮಾ ಸಿದ್ಧಗೊಳ್ಳುತ್ತಿದ್ದಾರೆ. ಈ ಮಹತ್ಸಾಧನೆಗಾಗಿ ಅವ... ನೊಬೆಲ್ ಶಾಂತಿ ಪುರಸ್ಕಾರ ಕೊಡಲಾಯಿತೆ?

ಇನ್ನು ಇಸ್ರೇಲ್-ಪ್ಯಾಲಿಸ್ಟೀನ್ ವಿಚಾರದಲ್ಲಿ ಹಿಂದಿದ್ದ ಅಮೆರಿಕದ ಆಡಳಿತಕ್ಕೂ, ಈಗಿನ ಒಬಾ... ಆಡಳಿತಕ್ಕೂ ಯಾವುದೇ ವ್ಯತ್ಯಾಸವಿಲ್ಲ. ಮಧ್ಯಪ್ರಾಚ್ಯ... ತನ್ನ ಹಿಡಿತವನ್ನು ಗಟ್ಟಿಗೊಳಿಸಿಕೊಳ್ಳುವ ಉದ್ದೇಶದಿ... ಇಸ್ರೇಲ್ ಎಂಬ ಗೂಂಡಾ ದೇಶವನ್ನು ಅಮೆರಿ... ಸೃಷ್ಟಿಸಿದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ತಮ್ಮ... ಸ್ವಂತ ನೆಲಕ್ಕಾಗಿ ದಶಕಗಳಿಂದ ರಕ್ತಹರಿಸುತ್ತಾ ಹೋರಾ...ತ್ತಿರುವ ಸ್ವಾಭಿಮಾನಿ ಪ್ಯಾಲಿಸ್ಟೀನ್ ಹೋರಾಟಗಾರರ... ಇದೇ ಇಸ್ರೇಲ್ ಎಷ್ಟೊಂದು ಕ್ರೂರವಾಗಿ ಸದೆಬಡಿಯು... ಎಂಬುದೂ ಜಗತ್ತಿಗೆ ಗೊತ್ತಿರುವ ವಿಚಾರ. ಇಸ್ರೇಲ... ಯಥೇಚ್ಛ ಹಣಕಾಸು ಮತ್ತು ಶಸ್ತ್ರಾಸ್ತ್ರ ಮದ್ದುಗುಂಡುಗಳ... ಒಳಗೊಂಡಂತೆ ಭಾರಿ ಪ್ರಮಾಣದ ಯುದ್ಧ ಪರಿಕರಗಳ... ಕೊಟ್ಟು, ಪ್ಯಾಲೆಸ್ತೇನಿಯರ ನರಮೇಧ ಮಾಡುವುದ... ಇದೇ ಅಮೆರಿಕ ಕುಮ್ಮಕ್ಕು ಕೊಡುತ್ತಿರುವುದು ಕ... ಬಳಿ ಹಾಳೆಯಷ್ಟೇ ಸ್ಪಷ್ಟವಾಗಿರುವ ವಿಚಾರ. ಅಲ್ಲ... ವಿಶ್ವಸಂಸ್ಥೆಯಲ್ಲಿ ಇಸ್ರೇಲ್ ವಿರುದ್ಧ ಏನೇ ಆಕ್ಷೇಪಗ... ಬಂದರೂ ತನಗಿರುವ ವಿಟೋ ಅಧಿಕಾರವನ್ನು ಬ... ಅದನ್ನು ರಕ್ಷಿಸುತ್ತಿರುವುದೂ ಇದೇ ಅಮೆರಿಕ.




ಸುತ್ತ ಮುತ್ತ


▸ ಕುಮಾರ್ ಬುರಡಿಕಟ್ಟಿ

ಒಬಾಮಾ ಅಮೆರಿಕದ ಅಧ್ಯಕ್ಷನಾದ ಮೇಲೆ ... ದುಷ್ಕೃತ್ಯವನ್ನಾದರೂ ನಿಲ್ಲಿಸುತ್ತಾನೆಂದು ಪ್ಯಾಲೆಸ್ತೇನಿಯನ್ನ... ಮಾತ್ರವಲ್ಲ ಇಡೀ ಪ್ರಪಂಚದ ಶಾಂತಿಪ್ರಿಯ ಜನ ಬಯಸಿದ್ದರು. ಆದರೆ, ಅವರು ಬಾಯಲ್ಲಿ ಬೆಣ್ಣೆಯಿಟ್ಟು... ಕೊಂಡಿರುವಾಗಲೇ ಬಗಲಲ್ಲಿ ದೊಣ್ಣೆಯನ್ನೂ ಇಟ್ಟುಕೊಂ...ದ್ದಾರೆಂಬುದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಬಹ... ದಿನ ಬೇಕಾಗಲಿಲ್ಲ. ಈ ಹಿಂದಿನ ಅಮೆರಿಕ ಸರ್ಕಾರಗಳ... ಎಷ್ಟರಮಟ್ಟಿಗೆ ಗೂಂಡಾ ಇಸ್ರೇಲ್‌ನ ಬೆಂಬಲಕ್ಕೆ ನಿಂತಿದ್ದವೋ... ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಒಬಾಮ ಇಸ್ರೇಲ್... ಬೆನ್ನುತಟ್ಟುತ್ತಿದ್ದಾರೆ. ಇಸ್ರೇಲ್‌ಗೆ ಅಮೆರಿಕ ಇಲ್ಲಿಯತನ... ಕೊಡುತ್ತಿದ್ದ ಹಣಕಾಸು ಮತ್ತು ಮಿಲಿಟರಿ ನೆರವಿ... ಪ್ರಮಾಣವನ್ನು ಹೆಚ್ಚಿಸುವುದಾಗಿ ಇದೇ 'ಶಾಂತಿಧೂತ... ಒಬಾಮಾ ಘೋಷಿಸಿದ್ದಾರೆ.

ಪುರಸ್ಕಾರಕ್ಕಾಗಿ ಒಬಾಮ ಅವರನ್ನು ಆಯ... ಮಾಡಿರುವ ನಾರ್ವೇಜಿಯನ್ ಸಮಿತಿಗೆ ಇದೇ... ಗೊತ್ತಿಲ್ಲವೆಂದೇನಲ್ಲ. ಆದರೆ, ಒಬಾಮಾ ಅವ... 'ಗಡಿಗಳಿಲ್ಲದ ಸುದೀರ್ಘ ಯುದ್ಧ'ದ ಬರ್ಬರತೆಯನ... ಮರೆ ಮಾಚುವುದಕ್ಕಾಗಿ ಅವರ ಕ್ರೂರ ಮುಖಕ್ಕೆ ಶಾಂತಿಯ... ಮುಸುಕನ್ನು ತೊಡಿಸುವುದು ಅಮೆರಿಕಕ್ಕೆ ಅಗತ್ಯವಾಗಿದ... ಹಾಗಾಗಿಯೇ ಅಮೆರಿಕದ ಉನ್ನತ ಅಧಿಕಾರಿಗಳು ಮತ್ತು... ನೊಬೆಲ್ ಶಾಂತಿ ಪುರಸ್ಕಾರ ಸಮಿತಿಯ ನಡುವೆ ಅತ್ಯುನ್ನ... ಹಂತದಲ್ಲಿ ನಡೆದ ಮಾತುಕತೆಗಳ ಭಾಗವಾಗಿಯೆ... ಒಬಾಮ ಅವರಿಗೆ ಈ ಪ್ರಶಸ್ತಿ ಸಿಕ್ಕಿರುವುದು ಸುಳ್ಳಲ್ಲ...



ಸಾರಾಂಶದಲ್ಲಿ ಹೇಳುವುದಾದರೆ, ಯುದ್ಧವನ್ನೇ ಶಾಂತಿ ಎಂದು ಪರಿಗಣಿಸಿ, ಕಲ್ಪನೆಯನ್ನೇ ವಾಸ್ತವ ಅಂದುಕೊಂಡು ಜಾಗತಿಕ ಅಧಿಪತ್ಯಕ್ಕಾಗಿನ ಯುದ್ಧವನ್ನು 'ಪ್ರಜಾಪ್ರಭುತ್ವಕ್ಕಾಗಿನ ಯುದ್ಧ' ಎಂದು ಅರ್ಥೈಸಿಕೊಂಡು, 'ಅಮೆರಿ... ವಿರೋಧಿ ದನಿಯನ್ನೆಲ್ಲಾ ಮಿಲಿಟರಿ ಶಕ್ತಿಯ ಮೂಲ... ಅಡಗಿಸುವುದನ್ನೇ 'ಭಯೋತ್ಪಾದನೆ ವಿರುದ್ಧದ ಜಾಗತಿ... ಸಮರ' ಎಂದು ಬಿಂಬಿಸಿ, ನಾಗರಿಕರ ಸಾಮೂಹಿ... ಬರ್ಬರ ಹತ್ಯೆಯನ್ನೇ 'ಅನಿವಾರ್ಯ ನಷ್ಟ' **(collatera... damage)** ಎಂದು ಗೌಣಗೊಳಿಸಿ, ಸೈನ್ಯದ ಚಿತ್ರಹಿಂಸೆ... ಮತ್ತು 'ವಿಚಾರಣೆ'ಗಳನ್ನು 'ಶಾಂತಿಪಾಲನಾ ಕಾರ್ಯಾಚರಣೆಯ ಭಾಗ' ಎಂದು ಎತ್ತಿಹಿಡಿದ... ಭೂಮಿಯ ಮೇಲಿನ ಅತ್ಯಂತ ಕ್ರೂರ ಮತ್ತು ಬಲಿಷ್ಠ ಸೇನೆಯೊಂದರ ಅಗ್ರಮಾನ್ಯ ಕಮಾಂಡರ್ ಆಗಿರುವ ಒಬಾಮಾ ಅವರಿಗೆ ಶಾಂತಿಧೂತನ ಪಟ್ಟಕಟ್ಟಿ ನೊಬೆಲ್ ಶಾಂತಿ ಪುರಸ್ಕಾರ ಕೊಡಲಾಗಿದೆ.



ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ 420 ಕೇಸ್!

ಮಂತ್ರಿ ಸುಧಾಕರನ ಮತ್ತೊಂದು ವಂಚನೆ

ಈಗಾಗಲೇ ಫೋರ್ಜರಿ ಮಾಡಿ ಸಿಬಿಐ ಬೋನಿಗೆ ...ಒದ್ದಾಡುತ್ತಿರುವ ಸಮಾಜ ಕಲ್ಯಾಣ ಮಂತ್ರಿ ಸುಧಾಕರ್ ...ದ್ಧ ಈಗ ಮತ್ತೊಂದು ಕೇಸು ದಾಖಲಾಗಿದೆ!

...ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸ್ ...ಯಲ್ಲಿ ಅಕ್ಟೋಬರ್ ನಾಲ್ಕರಂದು ಐಪಿಸಿ ಸೆಕ್ಷನ್ ...ರ್ ಟ್ವೆಂಟಿ (420)ಯ ಪ್ರಕಾರ ದಾಖಲಾದ ...ಐಆರ್‌ನಲ್ಲಿ ಮಂತ್ರಿ ಸುಧಾಕರ್ ಹೆಸರಾಗಲಿ, ...ರ ಧರ್ಮಪತ್ನಿ ಹರ್ಷಿಣಿ ಸುಧಾಕರ್ ಹೆಸರಾಗಲಿ ...ಳದಂತೆ ಏನೆಲ್ಲಾ ಕಸರತ್ತು ನಡೆದರೂ ಕೂಡಾ ...ಕರ್ ಬಚಾವಾಗುವುದು ಕಷ್ಟ.

...ಏಕೆಂದರೆ ಮೆ. ಮೀರಾಮ್ಸ್ ಓವರ್‌ಸೀಸ್ ಪ್ರೈ.ಲಿ. ...ಚಳ್ಳಕೆರೆಯ ವಂಚಕ ಕಂಪೆನಿಗೆ ಮಂತ್ರಿ ಸುಧಾಕರ್ ...ವರ ಪತ್ನಿಯೇ ತಾಯಿ-ತಂದೆ.

...ಸಹಕಾರಿ ಮಹಾಮಂಡಳಕ್ಕೆ 1.37 ಕೋಟಿ ...ಪಾಯಿಗಳಷ್ಟನ್ನು ವಂಚಿಸಿದ್ದು, ಗ್ಯಾರಂಟಿಗೆಂದು ...ನಿಯನ್ ಬ್ಯಾಂಕ್ ಆಫ್ ಇಂಡಿಯಾದ ಹೆಸರಲ್ಲಿ ... ದಾಖಲೆಗಳನ್ನು ಸೃಷ್ಟಿಸಿದ್ದು, ಬ್ಯಾಂಕ್ ಮ್ಯಾನೇಜರ್ ...ಮತ್ತು ಸೀಲುಗಳನ್ನು ಫೋರ್ಜರಿ ಮಾಡಿದ್ದು ಮತ್ತು ...ಚೆಕ್ಕುಗಳನ್ನು ಕೊಟ್ಟು ಮುಂಡಾಮೋಚಿದ್ದು ಇತ್ಯಾದಿ ...ಡಜನ್ ಕ್ರಿಮಿನಲ್ ಪ್ರಕರಣಗಳಲ್ಲಿ ಮಂತ್ರಿ ಸುಧಾಕರ್ ...ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ.

...ಯಾರ್ಯಾರೋ ಕೇಂದ್ರ ಸರ್ಕಾರಿ ನೌಕರರ ಹೆಸರಲ್ಲಿ ...ದಾಖಲೆಗಳನ್ನು ಸೃಷ್ಟಿಸಿ ಗಾಂಧಿನಗರದ ...ಬ್ಯಾಂಕ್ ಆಫ್ ...ಊರು ಶಾಖೆಗೆ ...ಟಿಗಟ್ಟಲೇ ವಂಚಿಸಿದ ...ತ್ರಿ ಸುಧಾಕರ್ ಬುದ್ಧಿ ...ಪ್ರಕರಣದಲ್ಲೂ ...ನಾವರ್ತನೆಗೊಂಡಿದೆ.

...ಈ ಬಾರಿ ...ಲಿಯಾದಿಂದ ಹಸಿರು ...ಣಿಯನ್ನು ಆಮದು ...ಕೊಳ್ಳುವ ನೆಪದಲ್ಲಿ ...ಟಕ ಸಹಕಾರಿ ...ಮಂಡಳಕ್ಕೆ 1.37 ...ಟಿ ರೂಪಾಯಿಗಳ ...ಪಿ ಹಾಕಿದೆ ಸುಧಾಕರ್ ...ಕ್. ಮಂತ್ರಿ ಸುಧಾಕರ್ ಹೆಸರಲ್ಲೇ ಹೈಗ್ರೌಂಡ್ಸ್ ...ಲೀಸ್ ಠಾಣೆಗೆ ಮಹಾಮಂಡಳದ ಅಧಿಕಾರಿಗಳು ...ಕೊಟ್ಟಿದ್ದಾರಾದರೂ ಎಫ್‌ಐಆರ್ ಅಂದರೆ ಪ್ರಥಮ ...ಮಾನ ವರದಿಯಲ್ಲಿ ಮಾತ್ರ ಸುಧಾಕರ್ ಹೆಸರಾಗಲಿ ... ಪತ್ನಿ ಹರ್ಷಿಣಿಯ ಹೆಸರಾಗಲಿ ಇಲ್ಲವೇ ಇಲ್ಲ. ...ಗೃಹಮಂತ್ರಿ ವಿ.ಎಸ್.ಆಚಾರ್ಯರೇ ಮುತುವರ್ಜಿ ... ಸುಧಾಕರ್ ಹೆಸರನ್ನು ಎಫ್‌ಐಆರ್‌ನಿಂದ ...ದ್ದಾರಂತೆ.

...ಹಾಗಂತ ಈ ವಂಚನೆಗೂ ಸುಧಾಕರ್‌ಗೂ ಏನೇನು ...ಬಂಧವಿಲ್ಲವೆಂದು ಯಾರೂ ಭಾವಿಸಬೇಕಿಲ್ಲ. ಬಿಜೆಪಿ ...ರುವಿದ್ದ ಮಾತ್ರಕ್ಕೆ ತಾನು ಬಚಾವಾದೆನೆಂದು ಸುಧಾಕರ್ ... ನಿಟ್ಟುಸಿರಿಡುವಂತಿಲ್ಲ. ಇಷ್ಟರಲ್ಲೇ ಇದರ ವಿರುದ್ಧ ...ರ್ಟ್ ಕಟಕಟೆ ಹತ್ತಲು ಮಹಾಮಂಡಳ ಅಧಿಕಾರಿಗಳು ...ಸಿದ್ಧತೆಯಲ್ಲಿದ್ದಾರೆ. ಇದೀ ವಂಚನೆಗೆ ಮಂತ್ರಿ ಸುಧಾಕರ್ ...ಲ್ಲೇ ಮತ್ತಾರೂ ರೂವಾರಿಯಲ್ಲ ಎಂಬುದು ...ಮೇಲ್ನೋಟಕ್ಕೇ ಸಾಬೀತಾಗುತ್ತದೆ.


...ಮಿ. ಮಿರಾಮ್ಸ್ ಓವರ್‌ಸೀಸ್ ಪ್ರೈ.ಲಿ ಎಂಬುದು ...ಕರ್ ಒಡೆತನದ ಬೋಗಸ್ ಕಂಪೆನಿ. ಈಗಾಗಲೇ ...ಂಗ್ ಎಕ್ಸ್‌ಪೋರ್ಟ್ ದಂಧೆಯ ನೆಪದಲ್ಲಿ ...ಳೂರಿನ ಆಕ್ಸಿಸ್ ಬ್ಯಾಂಕಿಗೆ ಐದು ಕೋಟಿಗೂ ...ಮೊತ್ತದ ಟೋಪಿ ಹಾಕಿದ ಕುಖ್ಯಾತಿ ಈ ಕಂಪೆನಿಗಿದೆ. ... ರಿಜಿಸ್ಟರ್ಡ್ ವಿಳಾಸ ಚಳ್ಳಕೆರೆಯಾದರೂ ...ಳೂರಿನಲ್ಲಿ ಇದರ ಕಾರ್ಪೊರೇಟ್ ಕಚೇರಿಯಿದೆ ...ಸು ಸುಧಾಕರ್ ರೈಲು ಬಿಡುತ್ತಾರೆ. ಹಾಗಂತ ...ರಿಯಲ್ಲಿ ಇಂಥ ಹೆಸರಿನದೊಂದು ಬೋರ್ಡು ಕೂಡ ... ಕಾಣುವುದಿಲ್ಲ.


...ಂಥಾ ದಗಲುಬಾಜಿ ಕಂಪೆನಿಗೆ ಅದ್ಯಾವ ಗ್ಯಾರಂಟಿಯ ... ಕರ್ನಾಟಕ ಸಹಕಾರಿ ಮಹಾ ಮಂಡಳವು ಮೂರು ... ರೂಪಾಯಿಗಳಿಗೂ ಹೆಚ್ಚಿನ ಸಾಲ ಕೊಡುತ್ತದೆ? ...ರಿ ಮಹಾಮಂಡಳ ಹೇಳಿಕೇಳಿ ಬ್ಯಾಂಕಲ್ಲ,

ಯಾವುದೇ ದಾಸ್ತಾನಿನ ಮೇಲೆ ಸಾಲ ಕೊಡುವ ಅಧಿಕಾರವೂ ಅದಕ್ಕಿಲ್ಲ. ಆದರೆ ಮಂತ್ರಿ ಸುಧಾಕರ್ 2007 ರ ಆಗಸ್ಟ್‌ನಲ್ಲಿ ಆಸ್ಟ್ರೇಲಿಯಾದಿಂದ ಬಟಾಣಿ ಬರುತ್ತಿದೆಯೆಂದೂ, ಅದನ್ನು ಮಹಾಮಂಡಳದ ಉಗ್ರಾಣದಲ್ಲೇ ದಾಸ್ತಾನು ಮಾಡುತ್ತೇನೆಂದೂ ನಂಬಿಸಿ ಒಟ್ಟು ಮೂರುಕೋಟಿ ಹತ್ತು ಲಕ್ಷ ರೂಪಾಯಿಗಳಷ್ಟು ಸಾಲ ಪಡೆಯುತ್ತಾರೆ.

ಒಂದು ಮೂಲದ ಪ್ರಕಾರ ಇಂಥದೊಂದು ಡೀಲಿಗೆ ಕೈಮಿಲಾಯಿಸಿದ್ದು ಮಹಾಮಂಡಲದ ಎಂ.ಡಿ. ಶಿವಣ್ಣ. ಆಸ್ಟ್ರೇಲಿಯಾದಿಂದ ಆಮದಾದ ಹಸಿರು ಬಟಾಣಿ ಮಹಾಮಂಡಲದ ಉಗ್ರಾಣಕ್ಕೆ ಬಂದಂತೆ ದಾಖಲೆಗಳನ್ನು ಸೃಷ್ಟಿಸುತ್ತಾರೆ. ಎಲ್ಲಾ ಕಳೆದು ಕೊನೆಗೆ ಒಂದು ಕೋಟಿ ಹತ್ತು ಲಕ್ಷ ರೂಪಾಯಿ ಮೌಲ್ಯದ 398 ಮೆಟ್ರಿಕ್ ಟನ್ನುಗಳಷ್ಟು ಬಟಾಣಿ ಉಗ್ರಾಣದಲ್ಲೇ ಉಳಿಯುವಂತೆ ಇನ್ನೊಂದು ದಾಖಲೆ ಸೃಷ್ಟಿಸಿದ್ದಾರೆ. ಇದನ್ನು ಬಿಡಿಸಿಕೊಳ್ಳಬೇಕಲ್ಲ; ಅದಕ್ಕೆ ಹತ್ತು ಲಕ್ಷದ ನಗದನ್ನೂ ಉಳಿಕೆ 1 ಕೋಟಿಗೆ ಗುಜರಾತಿನ ಆನಂದ್ ಜಿಲ್ಲೆಯ ಪೇಟ್‌ಲಾಡ್ ಎಂಬ ಊರಿನ ಸಮೀಪದ ನಾರ್ ಎಂಬ ಹಳ್ಳಿಯಲ್ಲಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯು ಒಂದು ಕೋಟಿಯ ಗ್ಯಾರಂಟಿ ಕೊಟ್ಟಂತೆ ಮತ್ತೊಂದು ದಾಖಲೆ ಸೃಷ್ಟಿಸುತ್ತಾರೆ.

ಎಲ್ಲಿಯ ಗುಜರಾತ್? ಯಾವ ಬ್ಯಾಂಕು? ಎಂಥಾ ಗ್ಯಾರಂಟಿ? ಯಾವುದನ್ನೂ ಪರಿಶೀಲಿಸದೇ ಮಹಾಮಂಡಳದ ಅಧಿಕಾರಿಗಳು ಬಟಾಣಿಯ ದಾಸ್ತಾನನ್ನು ಬಿಡುಗಡೆ ಗೊಳಿಸಿದರಂತೆ!





ನಕಲಿ ಬ್ಯಾಂಕ್ ಗ್ಯಾರಂಟಿ ಪತ್ರ.....

ಮೇಲೆಯೇ ಹೇಳುವುದಾದರೆ ಇದೊಂದು **import** ವಹಿವಾಟಿನ ಲೆಕ್ಕಾಚಾರವೇ ಹೊರತು ಇಡಿಇಡಿಯಾದ ಗೋಲ್‌ಮಾಲ್ ಎಂಬುದು ಯಾರ ಗಮನಕ್ಕೂ ಬರುವುದಿಲ್ಲ.

ಬೋರ್ಡೇ ಇಲ್ಲದ, ನೆಟ್ಟಗೊಂದು ಕಚೇರಿ ಕೂಡ ಇಲ್ಲದ, ಆಸ್ಟ್ರೇಲಿಯಾದಿಂದ ಬಟಾಣಿ ತರಿಸುವುದಿರಲಿ ಮಣ್ಣು ಕೂಡ ತರಿಸಲಾಗದ ಮಿರಾಮ್ಸ್ ಕಂಪನಿಗೆ ಯಾವ ಆಧಾರದ ಮೇಲೆ ಸಹಕಾರಿ ಮಹಾಮಂಡಲ ಮೂರು ಕೋಟಿ ಯಷ್ಟು ಸಾಲ ಕೊಡುತ್ತದೆ? ಉಳಿಕೆ 1 ಕೋಟಿಗೆ ಕೊಟ್ಟ ಬ್ಯಾಂಕ್ ಗ್ಯಾರಂಟಿಯ ಸಾಚಾತನವನ್ನಾದರೂ ಪರಿಶೀಲಿಸಬೇಕಿತ್ತಲ್ಲವೆ? ಹೇಗೆ ಎಸ್‌ವಿಎಂ ಬ್ಯಾಂಕಿನ ಮ್ಯಾನೇಜರ್‌ನನ್ನೇ ಬುಟ್ಟಿಗೆ ಹಾಕಿಕೊಂಡು ಸುಧಾಕರ್ ನಕಲಿ ಸರ್ಕಾರಿ ನೌಕರರ ಹೆಸರಲ್ಲಿ ಎಂಟು ಕೋಟಿಯಷ್ಟನ್ನು ಲಪಟಾಯಿಸಿದ್ದನೋ ಅದಕ್ಕೂ ಇದಕ್ಕೂ ಏನೇನೂ ವ್ಯತ್ಯಾಸವಿಲ್ಲ.

ಅಸಲಿಗೆ ಆಸ್ಟ್ರೇಲಿಯಾದಿಂದ ಬಟಾಣಿಯೇ ಬಂದಿಲ್ಲ. ಯಾವುದೋ ನಕಲಿ ಆಸ್ಟ್ರೇಲಿಯಾ ಕಂಪೆನಿಯೊಂದರ ಲೆಟರ್‌ಹೆಡ್ ಸೃಷ್ಟಿಸಲಾಗಿದೆ. ನಕಲಿ ಇಮೇಲ್, ನಕಲಿ ಫ್ಯಾಕ್ಸ್‌ಗಳ ಮೂಲಕ ಬಟಾಣಿ ಕಳಿಸಿದಂತೆ ಮಾಡಿ, ಹಾಗೇ ಬಂದ ಬಟಾಣಿ ದಾಸ್ತಾನನ್ನು ಮಹಾಮಂಡಲದ ಉಗ್ರಾಣದಲ್ಲಿ ಅಡವಿಟ್ಟಂತೆ ದಾಖಲೆ ಸೃಷ್ಟಿಸಿ, ಅದಕ್ಕೊಂದು ಮೂರು ಕೋಟಿ ಮೂವತ್ತು ಲಕ್ಷ ರೂ.ಗಳ ಸಾಲವನ್ನು ಮಹಾಮಂಡಳ ಕೊಟ್ಟಂತೆಯೂ, ಆ ಪೈಕಿ 2.20 ಕೋಟಿಯನ್ನು ಮಿರಾಮ್ಸ್ ಕಂಪೆನಿ ತೀರಿಸಿದಂತೆಯೂ, ಉಳಿಕೆ 1.10 ಕೋಟಿಯಲ್ಲಿ ಹತ್ತು ಲಕ್ಷ ಕೊಟ್ಟು ಒಂದು ಕೋಟಿಗೆ ಬ್ಯಾಂಕ್ ಗ್ಯಾರಂಟಿ ಕೊಟ್ಟಂತೆ ಎಲ್ಲವೂ ನಕಲಿ ದಾಖಲೆಗಳಲ್ಲೇ ನಡೆದಿದೆ.

ಅಂತಿಮವಾಗಿ 1 ಕೋಟಿಯ ಬ್ಯಾಂಕ್ ಗ್ಯಾರಂಟಿ ಮಾತ್ರ ನಕಲಿ ಎಂದು ಮಹಾಮಂಡಳದ ಅಧಿಕಾರಿಗಳು ತಿಪ್ಪೆ ಸಾರಿಸುತ್ತಿದ್ದಾರಾದರೂ ಪರಸ್ಪರ ಮಾತಾಡಿಕೊಂಡೇ ಸುಧಾಕರ್ ಮತ್ತು ಎಂ.ಡಿ. ಶಿವಣ್ಣ ನಾಟಕ ಆಡುತ್ತಿದ್ದಾರೆ. ಬಹುಶಃ ಎತ್ತಿದ ಸಾಲವನ್ನು ತೀರಿಸುತ್ತೇನೆಂದ ಸುಧಾಕರ್ ಕೊನೇ ಗಳಿಗೆಯಲ್ಲಿ ಮಹಾ ಮಂಡಳದ ಅಧಿಕಾರಿಗಳಿಗೆ ಕೈಕೊಟ್ಟಿರಬೇಕು. ಎಲ್ಲಿ ತಮ್ಮ ತಲೆಗೆ ಬರುತ್ತೋ ಎಂಬ ಭೀತಿಗೆ ಬಿದ್ದ ಮಹಾಮಂಡಳದ ಜನರಲ್ ಮ್ಯಾನೇಜರ್ ವಿಧಿಯಿಲ್ಲದೇ ಹೈಗ್ರೌಂಡ್ಸ್ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದಾನೆ.

ಕೊಟ್ಟ ದೂರಿನಲ್ಲಿ ಡಿ. ಸುಧಾಕರ್ ಮತ್ತು ಪತ್ನಿ ಹರ್ಷಿಣಿ ಸುಧಾಕರ್ ಅಲ್ಲದೇ ಮಿರಾಮ್ಸ್ ಕಂಪೆನಿಯ ಇತರೇ ಡೈರೆಕ್ಟರುಗಳಾದ ಜಿ.ಎಂ. ರಮೇಶ್, ಆತನ ಪತ್ನಿ ಮೀನಾ ರಮೇಶ್ ಹಾಗೂ ಸುಧಾಕರ್ ಸಂಬಂಧಿ ಬದ್ರಿನಾರಾಯಣ್ ಎಂಬವವರ ಹೆಸರನ್ನು ಸ್ಪಷ್ಟವಾಗೇ ನಮೂದಿಸಲಾಗಿದೆ. ಮೊನ್ನೆ ಅಂದರೆ ಅಕ್ಟೋಬರ್ 3 ರಂದು ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಮರುದಿನವೇ ಇನ್ಸ್‌ಪೆಕ್ಟರ್ ವಿರೂಪಾಕ್ಷಪ್ಪ ಎಫ್‌ಐಆರ್ ಹಾಕಿದ್ದಾರೆ. ಆರೋಪಿಗಳ ಪಟ್ಟಿಯಲ್ಲಿ ಮಿರಾಮ್ಸ್ ಓವರ್‌ಸೀಸ್ ಪ್ರೈ. ಲಿ. ಕಂಪೆನಿಯ ಜಿ.ಎಂ. ರಮೇಶ್, ಮೀನಾ ರಮೇಶ್, ಭದ್ರಿ ನಾರಾಯಣ್ ಎಂಬ ಮೂವರ ಡೈರೆಕ್ಟರುಗಳ ಹೆಸರಷ್ಟೇ ಇದೆಯೇ ಹೊರತು ಉಳಿದಿಬ್ಬರು ನಿರ್ದೇಶಕರಾದ ಡಿ. ಸುಧಾಕರ್ ಮತ್ತು ಅವರ ಪತ್ನಿ ಹರ್ಷಿಣಿ ಸುಧಾಕರ್ ಹೆಸರು ಮಾತ್ರ ನಾಪತ್ತೆ!

ಮಿರಾಮ್ಸ್ ಕಂಪೆನಿಯ ಡೈರೆಕ್ಟರುಗಳ ಪೈಕಿ ಮಂತ್ರಿ ಸುಧಾಕರ್ ಒಬ್ಬನೇ ಶೇ. 60 ರಷ್ಟು ಷೇರುಗಳನ್ನು ಹೊಂದಿದ್ದಾರೆ. ಆದರರ್ಥ ಅವರೇ ಕಂಪೆನಿಯ ಸಂಸ್ಥಾಪಕರು. ಮಹಾಮಂಡಳದಿಂದ ಪಡೆದ ಅಷ್ಟೂ ಸಾಲ ಮಂತ್ರಿ ಸುಧಾಕರ್ ಖಾತೆಗೇ ಜಮೆಯಾಗಿದೆ. ಹೀಗಿದ್ದೂ ವಂಚನೆಯ ಕೇಸಿಗೆ ಮಂತ್ರಿ ಸುಧಾಕರ್ ಮತ್ತವರ ಪತ್ನಿಯ ಹೆಸರನ್ನು ಪೊಲೀಸರು ಕೈಬಿಡುತ್ತಾರೆಂದರೆ ಏನರ್ಥ?

ಅದೂ ಮಂತ್ರಿ ಸುಧಾಕರ್‌ರನ್ನೇ ಮೊದಲು ಆರೋಪಿಯನ್ನಾಗಿ ಮಾಡಿ ಮಹಾಮಂಡಳದ ಅಧಿಕಾರಿ ಗಳು ದೂರು ಕೊಟ್ಟಾಗಲೂ ಪೊಲೀಸರಿಗದು ಲೆಕ್ಕಕ್ಕಿಲ್ಲವೆಂದರೆ ಏನರ್ಥ?

ವಂಚಕ ಮಂತ್ರಿಯೊಬ್ಬನ ರಕ್ಷಣೆಗೆ ಯಡ್ಡಿ ಸರ್ಕಾರ ಇಷ್ಟೊಂದು ಲಜ್ಜೆಗೆಟ್ಟು ನಿಲ್ಲಬೇಕಾ?

● ರಾ. ಸೋಮನಾಥ್


ಹೀಗೆ ಉಗ್ರಾಣದಿಂದ ಬಟಾಣಿ ಹೊರಬಿದ್ದ ನಂತರವೇ ಮಹಾಮಂಡಳದ ಅಧಿಕಾರಿಗಳಿಗೆ ಜ್ಞಾನೋದಯ ವಾಯಿತಂತೆ!

ಕೊಟ್ಟ 1 ಕೋಟಿಯ ಗ್ಯಾರಂಟಿ ಮೊತ್ತವನ್ನು ಪಾವತಿ ಮಾಡುವಂತೆ ಗುಜರಾತ್‌ನ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ನಾರ್ ಶಾಖೆಗೆ ಮಹಾಮಂಡಳ ಪತ್ರ ಬರೆದರೆ; ಸದರಿ ಬ್ಯಾಂಕಿನ ಮ್ಯಾನೇಜರ್ ತಾವು ಇಂಥ ಯಾವುದೇ ಗ್ಯಾರಂಟಿಯನ್ನು ಕೊಟ್ಟೇ ಇಲ್ಲ ಎಂದು ವಾಪಸ್ಸು ಪತ್ರ ಬರೆದಿದ್ದ!


ಇದರರ್ಥ ಮಂತ್ರಿ ಸುಧಾಕರ್ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ನಕಲಿ ಲೆಟರ್‌ಹೆಡ್, ನಕಲಿ ಬಾಂಡು, ಮ್ಯಾನೇಜರ್‌ನ ಸಹಿ ಮತ್ತು ಸೀಲು ಎಲ್ಲವನ್ನೂ ಫೋರ್ಜರಿ ಮಾಡಿದ್ದ. ವಿಚಿತ್ರವೆಂದರೆ ಇಂಥ ನಕಲಿ ಬ್ಯಾಂಕ್ ಗ್ಯಾರಂಟಿಯನ್ನು ಇಟ್ಟುಕೊಂಡೇ ಮಹಾಮಂಡಲ 1.10 ಕೋಟಿಯಷ್ಟು ಸಾಲ ಮಂಜೂರು ಮಾಡಿತ್ತು. ಆಸ್ಟ್ರೇಲಿಯಾದಿಂದ 3.67 ಕೋಟಿ ರೂಪಾಯಿಗಳ ಮೊತ್ತದ ಹಸಿರು ಬಟಾಣಿ ಆಮದಾದಂತೆ, ಅದು ಮಹಾಮಂಡಲದ ಉಗ್ರಾಣಕ್ಕೆ ಬಂದು ಅಲ್ಲಿಂದಲೇ ಗುಜರಾತಿಗೆ ಹೋದಂತೆ ಮತ್ತು ಕೊನೆಯ ಕಂತಾದ 398 ಮೆಟ್ರಿಕ್ ಟನ್ನುಗಳಷ್ಟು ಬಟಾಣಿಯನ್ನು 1 ಕೋಟಿ ಮೊತ್ತದ ಬ್ಯಾಂಕ್ ಗ್ಯಾರಂಟಿಯ ಆಧಾರದ ಮೇಲೆ ಬಿಡುಗಡೆಗೊಳಿಸಿದಂತೆ ದಾಖಲೆಗಳನ್ನು ಸೃಷ್ಟಿಸಲಾಗಿತ್ತು.

ಮೇಲುನೋಟಕ್ಕೆ ಇದೊಂದು ವ್ಯವಹಾರದಂತೆ ಕಾಣುತ್ತದೆ. ಪ್ರಾರಂಭದಲ್ಲಿ 3.30 ಕೋಟಿಯ ಬೃಹತ್ ಸಾಲ ಪಡೆದು ಆ ಪೈಕಿ 2.20 ಕೋಟಿಯನ್ನು ತೀರಿಸಿದಂತೆ ದಾಖಲೆ ಸೃಷ್ಟಿಸುತ್ತಾರೆ. ಉಳಿಕೆ 1.10 ಕೋಟಿಯ ಪೈಕಿ 10 ಲಕ್ಷ ರೂ.ಗಳನ್ನು ಮಿರಾಮ್ಸ್ ಕಂಪೆನಿ ಪಾವತಿಸುತ್ತದೆ. ಉಳಿಕೆ 1 ಕೋಟಿಯ ಬ್ಯಾಂಕ್ ಗ್ಯಾರಂಟಿ ಮಾತ್ರ ಬೋಗಸ್ ಎಂದಾಗುತ್ತದೆ. ದಾಖಲೆಗಳ ಆಧಾರದ

ಕಾರ್ಟೂನ್ ಕಾರ್ನರ್



ಸೇವಾಭಾರತಿ ಎಂಟ್ರಿ ಪರಿಹಾರ ನಿಧಿ ಆರೆಸ್ಸೆಸ್ ಜೇಬಿಗೆ


ಆರೆಸ್ಸೆಸ್ ಜಯದೇವನೊಂದಿಗೆ ಆಚಾರ್ಯ....

ಬಂದೇ ಬಿಟ್ಟಿದೆ ಸೇವಾಭಾರತಿ ಎಂಬ ಖದೀಮ, ಕ್ರೂರ ಸಂಸ್ಥೆ ಪರಿಹಾರಧನ ಕೊಳ್ಳೆ ಹೊಡೆಯಲು, ಕೋಮುದ್ವೇಷ ಹರಡಲು ತಯಾರಾಗಿ ನಿಂತೇ ಬಿಟ್ಟಿದೆ. ಯಡಿಯೂರಪ್ಪನ ಮೂಢ, ಮೂರ್ಖ ಸರ್ಕಾರದ ಬೆಂಬಲವನ್ನು ಪಡೆದೂ ಬಿಟ್ಟಿದೆ.

ಹೌದು ಕಳೆದವಾರ ನಾವು 'ಪರಿಹಾರ ನಿಧಿ ದೋಚುವ ಆರೆಸ್ಸೆಸ್‌ಗಳು' ಎಂಬ ಬರಹದಲ್ಲಿ ಸಂಘಪರಿವಾರದ ತುಂಡು 'ಸೇವಾಭಾರತಿ' ಎಂಬ ಚಾರಿಟಿ ಸಂಸ್ಥೆ ಒರಿಸ್ಸಾದ ನೆರೆ ಪ್ರವಾಹ, ಗುಜರಾತ್ ಭೂಕಂಪ ಪರಿಹಾರ ನಿಧಿಗಳನ್ನು ಹೇಗೆ ಲೂಟಿ ಮಾಡಿತ್ತು, ಮುಂದೆ ಒರಿಸ್ಸಾದಲ್ಲಿ ನಡೆದ ಕ್ರಿಶ್ಚಿಯನ್ನರ ಮೇಲಿನ ದಾಳಿ, ಗುಜರಾತ್ ಹತ್ಯಾಕಾಂಡಗಳಲ್ಲಿ ಅದರ ಪಾತ್ರವೇನಿತ್ತು ಎಂಬುದನ್ನು ವಿವರಿಸಿದ್ದೆವು. ಈಗದು ಕರ್ನಾಟಕಕ್ಕೂ ಬಂದು ಕುಳಿತಿದೆ. ಈಗಾಗಲೇ ಸರ್ಕಾರವೇ ಮುಂದೆ ನಿಂತು ಅದಕ್ಕೆ ನಿಧಿ ಕೊಡಿಸುತ್ತಿದೆ. ರಾಜ್ಯ ಆರೆಸ್ಸೆಸ್‌ನ ಮೈ.ಚ.ಜಯದೇವನ ಪಾದದಡಿ ಸರ್ಕಾರವೇ ಬಿದ್ದಿದೆ. ಜಯದೇವನೊಂದಿಗೆ ಪತ್ರಿಕಾಗೋಷ್ಠಿ ನಡೆಸುವ ಗೃಹಸಚಿವ, ಮನೆಗಳನ್ನು ಕಟ್ಟಿಸಲು ಮುಂದೆ ಬಂದವರಿಗೆ ಸೇವಾಭಾರತಿ ತೋರಿಸುತ್ತಾನೆ. ಅಂದರೆ ಈ ದುಷ್ಟರಿಗೆ ತಮ್ಮ ಸರ್ಕಾರಕ್ಕಿಂತ ಸೇವಾಭಾರತೀಯೇ ದೊಡ್ಡದು! ಬೀದಿಬೀದಿ ತಿರುಗಿ ಹಣ ಸಂಗ್ರಹಿಸಿ ಈಗಾಗಲೇ ಸಂತ್ರಸ್ತರನ್ನು ಅವಮಾನಿಸಿರುವ ಮುಖ್ಯಮಂತ್ರಿ, ಮಂತ್ರಿಗಳು ಈಗ ಇನ್ನೂ ಅಸಹ್ಯಕರ ಕೆಲಸಕ್ಕೆ ಮುಂದಾಗಿದ್ದಾರೆ. ಸರ್ಕಾರಿ ಅಧಿಕಾರಿಗಳು, ನೌಕರರಿಗೆ ಪರಿಹಾರನಿಧಿಯನ್ನು ಸಿಎಂ ನಿಧಿಗೆ ಬದಲಾಗಿ ಸೇವಾಭಾರತಿಗೆ ಕೊಡಿ ಎಂದು ಒತ್ತಡ ಹೇರುವ ಮೂಲಕ ಕರ್ನಾಟಕದ ಜನತೆಯನ್ನು ಅವಮಾನಿಸಲಾಗುತ್ತಿದೆ. ನೆಲಗಳ್ಳ ಸಚಿವ ಆರ್.ಅಶೋಕ್ ಸೇವಾಭಾರತಿಗೆ ನಾಲ್ಕು ಲಕ್ಷ ದುಡ್ಡು ಸಂಗ್ರಹಿಸಿ ಕೊಡುತ್ತಾನೆಂದರೆ ಈ ಸರ್ಕಾರ ಇರುವುದಾದರೂ ಯಾತಕ್ಕೆ? ಸಿಎಂ ನಿಧಿ ಇರುವುದಾದರೂ ಏತಕ್ಕೆ? ಅಂದರೆ ಸರ್ಕಾರವೇ ಒಪ್ಪಿಕೊಂಡಿದೆ; ತಾನು ವಿಶ್ವಾಸಾರ್ಹನಲ್ಲ, ಬದಲಿಗೆ ಸೇವಾಭಾರತಿಯೇ ಹೆಚ್ಚು ವಿಶ್ವಾಸಾರ್ಹ ಎಂದು. 10-12 ದಿನದ ಹಿಂದೆಯೇ ಧನಂಜಯಕುಮಾರ್ 'ಸಿಎಂ ನಿಧಿಗೆ ದುಡ್ಡು ನೀಡಿ, ವಿಶ್ವಾಸವಿಲ್ಲದವರು ಆರೆಸ್ಸೆಸ್‌ಗೆ ನೀಡಿ' ಎಂದು ಸರ್ಕಾರವನ್ನೇ ಅವಮಾನಿಸಿದ್ದ. ಒಟ್ಟಿನಲ್ಲಿ ಅಯೋಗ್ಯ ಸರ್ಕಾರ ಕೊನೆಗೂ ನಿಧಿಗಳ್ಳ ಸೇವಾಭಾರತಿಗೆ ರತ್ನಗಂಬಳಿ ಹಾಕಿ ಕರೆದಿದೆ.

ಸರ್ಕಾರ ಸತ್ತಿದೆಯೇ?

ಮನೆ ಕಟ್ಟಿಕೊಡಲು ಸರ್ಕಾರದಿಂದ ಸಾಧ್ಯವೇ ಇಲ್ಲವೇ? ಸೇವಾಭಾರತಿಗೇನು ಇಂಜಿನಿಯರಿಂಗ್ ನೈಪುಣ್ಯವಿದೆಯೇ? ಎಂಬ ಪ್ರಶ್ನೆಗಳನ್ನು ಈಗ ಜನ



ಎತ್ತಲೇಬೇಕಾಗಿದೆ. ರಾಜ್ಯಸರ್ಕಾರದಲ್ಲೇ ಸಿವಿಲ್ ಇಂಜಿನಿಯರಿಂಗ್ ಕಾಮಗಾರಿ ಮಾಡಲು ಹಲವಾರು ಇಲಾಖೆಗಳಿವೆ, ಹಲವಾರು ನಿಗಮಗಳಿವೆ. ಕರ್ನಾಟಕ ಲೋಕೋಪಯೋಗಿ ಇಲಾಖೆ (ಪಿಡಬ್ಲ್ಯೂಡಿ) ಇದೆ. ಅದರಲ್ಲಿ ಸಾವಿರಾರು ನುರಿತ ಹಿರಿಯ ಮತ್ತು ಕಿರಿಯ ಸಿವಿಲ್ ಇಂಜಿನಿಯರ್‌ಗಳಿದ್ದಾರೆ. ವಸತಿ ಯೋಜನೆಗೆಂದೇ ಮೀಸಲಾಗಿರುವ ರಾಜೀವ್‌ಗಾಂಧಿ ವಸತಿ ನಿಗಮವಿದೆ. ಈಗಾಗಲೇ ಈ ನಿಗಮ ನೂರಾರು ವಸತಿ ಸಮುಚ್ಚಯ, ಸಾವಿರಾರು ಬಡಿ ಮನೆಗಳನ್ನು ನಿರ್ಮಿಸಿ ಪರಿಣಾಮಕಾರಿ ಕೆಲಸ ಮಾಡಿದೆ. ಗ್ರಾಮೀಣ ಭಾಗದ ಕಾಮಗಾರಿಗಳನ್ನು ನಿರ್ವಹಿಸಲೆಂದು ದಿ. ನಜೀರ್‌ಸಾಬರು ಆರಂಭಿಸಿದ ಕರ್ನಾಟಕ ಭೂಸೇನಾ ನಿಗಮ (ಲ್ಯಾಂಡ್ ಆರ್ಮಿ) ಎರಡೂವರೆ ದಶಕಗಳ ವಿಶೇಷ ಅನುಭವ ಹೊಂದಿದ್ದು, ಸಾವಿರಗಳ ಸಂಖ್ಯೆಯಲ್ಲಿ ಕಾರ್ಯಪಡೆಯನ್ನು ಹೊಂದಿದೆ.

ಅದಲ್ಲದೇ, ಜಿಲ್ಲಾ ಪಂಚಾಯತ್‌ಗಳಲ್ಲಿ ಸಿವಿಲ್ ಇಂಜಿನಿಯರಿಂಗ್ ವಿಭಾಗಗಳಿವೆ. ತಾಲ್ಲೂಕು ಪಂಚಾಯತ್‌ಗಳಲ್ಲಿ ಸಿವಿಲ್ ಇಂಜಿನಿಯರಿಂಗ್ ಉಪವಿಭಾಗಗಳಿವೆ. ಇಷ್ಟೆಲ್ಲ ಕಾರ್ಯಪಡೆ ಸರ್ಕಾರದಲ್ಲೇ ಇರುವಾಗ ಸೇವಾಭಾರತಿ ಎಂಬ ಕಳ್ಳ ಸಂಸ್ಥೆಗೆ ಮನೆ ನಿರ್ಮಿಸುವ ಜವಾಬ್ದಾರಿ ನೀಡುವುದರ ಆಗತ್ಯವಾದರೂ ಏನಿತ್ತು? ಗುಟ್ಟು ಇರುವುದೇ ಇಲ್ಲಿ, ಇದು ಆರೆಸ್ಸೆಸ್‌ನ ಕುತಂತ್ರ. ಭಾರತದಲ್ಲಿ ಎಲ್ಲೇ ಭೂಕಂಪವಾಗಲೀ, ನೆರೆ ಸಂಭವಿಸಲಿ, ಸುನಾಮಿ ಅಪ್ಪಳಿಸಲಿ... ಅಲ್ಲಿಗೆ ಓಡೋಡಿ ಬರುತ್ತದೆ ಸೇವಾಭಾರತಿ. ಪರಿಹಾರಕ್ಕೆಂದು ಸಾರ್ವಜನಿಕರಿಂದ, ಸರ್ಕಾರದಿಂದ, ಎನ್‌ಆರ್‌ಐಗಳಿಂದ ಹಣ ಸಂಗ್ರಹಿಸುತ್ತದೆ. ವಿದೇಶದಲ್ಲಿ ನಿತ್ಯವೂ ಈ ರೀತಿ ಎತ್ತುವಳಿ ಮಾಡಲು ಪ್ರತ್ಯೇಕ ಅಂಗಸಂಸ್ಥೆಗಳನ್ನೇ ಆರೆಸ್ಸೆಸ್ ಸೃಷ್ಟಿಸಿದೆ. ಬ್ರಿಟನ್ನಿನಲ್ಲಿ ಸೇವಾ ಇಂಟರ್‌ನ್ಯಾಷನಲ್, ಹಿಂದೂ ಸ್ವಯಂಸೇವಕ ಸಂಘ (HSS), ಅಮೆರಿಕಾದಲ್ಲಿ ಇಂಡಿಯಾ ಡೆವಲಪ್‌ಮೆಂಟ್ ಅಂಡ್ ರಿಲೀಫ್ ಫಂಡ್ (IDRF) ಎಂಬ ಆರೆಸ್ಸೆಸ್ ಸಂಸ್ಥೆಗಳು ಗುಜರಾತ್ ಪರಿಹಾರ ನಿಧಿ, ಒರಿಸ್ಸಾ ಪ್ರವಾಹ ನಿಧಿಗೆಂದು ಪೌಂಡ್, ಡಾಲರ್‌ಗಳ ರೂಪದಲ್ಲಿ ಅಪಾರ ಮೊತ್ತ ಸಂಗ್ರಹಿಸಿ, ಆ ದುಡ್ಡನ್ನು ಭಾರತದ ಆರೆಸ್ಸೆಸ್ ಶಾಲೆಗಳಿಗೆ, ಸಂಸ್ಥೆಗಳಿಗೆ ವರ್ಗಾಯಿಸಿ, ಈಗಾಗಲೇ ಕಪ್ಪುಪಟ್ಟಿ ಸೇರಿವೆ. ತಮಿಳುನಾಡಿನಲ್ಲಿ ಸುನಾಮಿ ಪರಿಹಾರ ಕಾರ್ಯದಲ್ಲೂ ಸೇವಾಭಾರತಿ ತಾರತಮ್ಯ ಮಾಡುವುದರ ಮೂಲಕ ಉಗಿಸಿಕೊಂಡಿದೆ.

ಹೀಗೆ ಪರಿಹಾರ ಕಾರ್ಯಗಳಲ್ಲಿ 'ಸೇವೆ'ಯ ಹೆಸರಲ್ಲಿ ನುಗ್ಗುವ ಆರೆಸ್ಸೆಸ್ ತನ್ನ ಜಾಲವನ್ನು ವಿಸ್ತರಿಸುತ್ತದೆ. ತನ್ನ ವಿಷ ಸಿದ್ಧಾಂತಗಳನ್ನು ಹರಡುತ್ತದೆ. ದಲಿತರು ಮತ್ತು ಹಿಂದುಳಿದವರನ್ನು ಅಲ್ಪಸಂಖ್ಯಾತರ ವಿರುದ್ಧ ಎತ್ತಿ ಕಟ್ಟುತ್ತದೆ. ಕಾಟಾಚಾರಕ್ಕೆ ಕಳಪೆ ಕಾಮಗಾರಿ ಮಾಡುತ್ತದೆ. ಪರಿಹಾರ ನಿಧಿ ದುಡ್ಡು ಬಳಸಿಕೊಂಡು ಕೋಮುಗಲಭೆ ಸೃಷ್ಟಿಸುತ್ತದೆ.

ಸೇವಾಭಾರತಿಯೋ ಶವಭಾರತಿಯೋ

ಪ್ರಕೃತಿ ವಿಕೋಪಗಳಾದಾಗ, ಶವಗಳು ಬಿದ್ದಾಗ ಥಟ್ಟಂತ ಎಚ್ಚರಗೊಳ್ಳುತ್ತದೆ ಸೇವಾಭಾರತಿ. ಅಲ್ಲಿವರೆಗೆ ಗುಪ್ತವಾಗಿ ಕಾರ್ಯ ನಿರ್ವಹಿಸುತ್ತ ಆದಿವಾಸಿ ಮಕ್ಕಳಿಗೆ ಶಾಲೆ ತೆರೆದು ತನ್ನ ವಿಷ ಸಿದ್ಧಾಂತವನ್ನು ಉಣ್ಣಿಸುತ್ತಿರುತ್ತದೆ. ಪ್ರಾಕೃತಿಕ ವೈಪರೀತ್ಯಗಳಾದಾಗ ದುಡ್ಡು ದೋಚಲು ಸೇವೆಯ ಹೆಸರಲ್ಲಿ ಪ್ರತ್ಯಕ್ಷವಾಗುವ ಈ 'ಶವಭಾರತಿ'ಯ ಅಧ್ವಾನಗಳು, ದೇಶದ್ರೋಹಿ ಕೆಲಸಗಳ ಕುರಿತು ಕಳೆದ ವಾರ ವಿವರವಾಗಿ ಬರೆದಿದ್ದೆವು. ಲಂಡನ್ನಿನ 'AWAAZ' ಎಂಬ ಸ್ವಯಂಸೇವಾ ಸಂಸ್ಥೆಯು ಪ್ರಕಟಿಸಿದ ಸತ್ಯಶೋಧನಾ ವರದಿಗಳಿಂದ ಸೇವಾಭಾರತಿಯ ಮುಖವಾಡವನ್ನು ಬಯಲಿಗೆಳೆದಿತ್ತು.

1999ರ ಒರಿಸ್ಸಾ ಪ್ರವಾಹ, 2001ರ ಗುಜರಾತ್ ಭೂಕಂಪಗಳ ಪರಿಹಾರ ಕಾರ್ಯಕ್ಕೆಂದು ಬ್ರಿಟನ್ನಿನಲ್ಲಿ 260000 ಪೌಂಡ್‌ಗಳಿಗೂ ಅಧಿಕ ದುಡ್ಡು ಸಂಗ್ರಹಿಸಿದ್ದ ಸೇವಾಭಾರತಿ ಆ ಹಣವನ್ನು ದುರುಪಯೋಗಪಡಿಸಿಕೊಂಡಿತ್ತು. ಕೇವಲ ಮೇಲ್ಜಾತಿಯ ಜನರಿಗೆ ಪರಿಹಾರ ಕಲ್ಪಿಸಿ ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರನ್ನು ನಿರ್ಲಕ್ಷ್ಯ ಮಾಡಿತ್ತು. ಆ ಹಣ ಬಳಸಿಯೇ ಜನರಲ್ಲಿ ದ್ವೇಷ ಸಿದ್ಧಾಂತಗಳನ್ನು ತುಂಬಿ ಅವರನ್ನು ಮತಾಂಧರನ್ನಾಗಿ ಮಾಡಿತ್ತು. ಮುಂದೆ ಇದರ ಪರಿಣಾಮ ಕಂಡುಬಂದಿದ್ದು ಒರಿಸ್ಸಾದಲ್ಲಿ ಕ್ರಿಶ್ಚಿಯನ್ನರ ಮೇಲೆ ನಡೆದ ಅವ್ಯಾಹತ ದಾಳಿಗಳಲ್ಲಿ, ಗುಜರಾತ್‌ನಲ್ಲಿ ಸರ್ಕಾರದ ಪೋಷಣೆಯಲ್ಲೇ ಜರುಗಿದ ಅಲ್ಪಸಂಖ್ಯಾತರ ಹತ್ಯಾಕಾಂಡದಲ್ಲಿ.

ಸುನಾಮಿಯಲ್ಲೂ ನುಂಗಿದವರು


ತಮಿಳುನಾಡಿನ ಭೀಕರ ಸುನಾಮಿ ಲಕ್ಷಾಂತರ ಕುಟುಂಬಗಳನ್ನು ನಿರ್ಗತಿಕರನ್ನಾಗಿ ಮಾಡಿತ್ತು. ಆಗ ಸೇವೆ ಮಾಡುತ್ತೇವೆ ಎಂದು ಮುಂದೆ ಬಂದಿದ್ದ ಸೇವಾಭಾರತಿ ಅಪಾರ ಪ್ರಮಾಣದ ಹಣ ಎತ್ತಿ ಕ[illegible] ಕಾಮಗಾರಿ ನಡೆಸಿ ಓಡಿಹೋಗಿತ್ತು. ಅಲ್ಲೂ ಸಂತ್ರಸ್ತರಲ್ಲಿ ಹಿಂದೂ, ಮುಸ್ಲಿಂ ಮತ್ತು ಕ್ರಿಶ್ಚಿಯನ್ ಎಂಬ ಭೇದಭಾವ ಹುಟ್ಟಿಸಲು ಪ್ರಯತ್ನಿಸಿತ್ತು.

ತಮಿಳುನಾಡಿನ ನಾಗಪಟ್ಟಂ ಜಿಲ್ಲೆಯಲ್ಲಿ ಹಲ[illegible] ಹಳ್ಳಿಗಳನ್ನು ಪುನರ್ ನಿರ್ಮಿಸುವುದಾಗಿ ಸೇವಾಭಾ[illegible] ಮುಂದೆ ಬಂದಿತ್ತು. ಒಂದಿಷ್ಟು ಹಳ್ಳಿಗಳಲ್ಲಿ ಆಹಾ[illegible] ಪೂರೈಕೆ, ಆರೋಗ್ಯ ಸೌಲಭ್ಯ ಒದಗಿಸುವುದರಲ್ಲಿ

ಯುದ್ಧ, ಮಂದಿರ, ಭೂಕಂಪ, ಪ್ರವಾಹ ಎಲ್ಲೆಲ್ಲೂ ಅದೇ ನೀಚ ಬುದ್ಧಿ

ಭಾವನಾತ್ಮಕ ವಿಷಯಗಳನ್ನು ಇಟ್ಟುಕೊಂಡು ತನ್ನ ಬೇಳೆ ಬೇಯಿಸಿಕೊಳ್ಳುವುದರಲ್ಲಿ ಆರ್.ಎಸ್.ಎಸ್. ಸದಾ ಮುಂದು. ಅದು ಸತ್ತವರ ಮನೆಯಲ್ಲೂ ತನ್ನ ಸಿದ್ಧಾಂತದ ಪ್ರಚಾರ ಮಾಡಬಲ್ಲಂತಹ ಅಮಾನವೀಯ ಸಂಸ್ಥೆ.

ಯುದ್ಧ, ಭೂಕಂಪ, ಬರ, ನೆರೆ– ಹೀಗೆ ಎಲ್ಲವೂ ಅದಕ್ಕೆ ಬಲುಪ್ರಿಯ. ಸಂಕಷ್ಟದ ಸಮಯದಲ್ಲಿ ಸೇವೆಯ ಹೆಸರಲ್ಲಿ ಫೀಲ್ಡಿಗಿಳಿಯುವ ಅದು ಸಾರ್ವಜನಿಕ ದುಡ್ಡನ್ನು ತನ್ನ ಸಂಸ್ಥೆಗಳಿಗೆ ವರ್ಗಾಯಿಸುವುದು, ತನ್ನ ನೆಟ್‌ವರ್ಕ ವಿಸ್ತರಿಸುವುದರಲ್ಲಿ ಅದಕ್ಕೆ ಯಾವ ಮುಲಾಜೂ ಇಲ್ಲ.



ದೇಶ ವಿಭಜನೆಯ ದುರಂತದಲ್ಲೂ ತನ್ನ ನೀಚಬುದ್ಧಿ ಮೆರೆದಿತ್ತು. ಬಾಂಗ್ಲಾ ವಿಭಜನೆಯ ವೇಳೆಯೂ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ನಡೆಸಿತ್ತು, ಕಾರ್ಗಿಲ್ ಯುದ್ಧವನ್ನು ಸೃಷ್ಟಿಸಿ ಇಲ್ಲಿ ಹಿಂದೂಗಳನ್ನು ಭಾವನಾತ್ಮಕವಾಗಿ ಒಂದು ಮಾಡಲು ಯತ್ನಿಸಿತ್ತು, ಯುದ್ಧದ ವೇಳೆ ಜನ ಜಾತಿ-ಮತ ಮರೆತು ತಮ್ಮ ಕೈಲಾದಷ್ಟು ನೆರವು ನೀಡಿದ್ದರು. ಒಂದೊತ್ತಿನ ಊಟಕ್ಕೂ ಪರದಾಡುವವರು, ಭಿಕ್ಷುಕರೂ ಕೂಡಾ ತಮ್ಮ ಕೈಲಾದಷ್ಟು ಹಣ ನೀಡಿದ್ದರು. ಆದರೆ ಸಂಘಪರಿವಾರ ಶವಗಳನ್ನು ಇಟ್ಟುಕೊಂಡು, ಮುಸ್ಲಿಮರೆಂದರೆ ಪಾಕಿಸ್ತಾನ ಎಂಬಂತೆ ಬಿಂಬಿಸಲು ಹೆಣಗಾಡಿತ್ತು, ಮೃತಯೋಧರ ಅಂತ್ಯಕ್ರಿಯೆಗೆಂದು ಖರೀದಿಸಿದ ಶವಪೆಟ್ಟಿಗೆ ವ್ಯವಹಾರದಲ್ಲೂ ಗೋಲ್‌ಮಾಲ್ ನಡೆಸಿತ್ತು ಅಂದಿನ 'ದೇಶಭಕ್ತ' ಬಿಜೆಪಿ ಸರ್ಕಾರ. ಅಂದರೆ ಯುದ್ಧ ಎಂದರೆ ಸಾಕು, ತನ್ನ ವಿಷ ಸಿದ್ಧಾಂತ ಹರಡಲು ದುಡ್ಡು ದೋಚಲು ಸಂಘಪರಿವಾರಕ್ಕೆ ರಣೋತ್ಸಾಹ...

ಇನ್ನು ದೇವರು, ಧರ್ಮಗಳನ್ನು ಅದು ಬಿಟ್ಟಿಲ್ಲ. ಅಯೋಧ್ಯೆಯಲ್ಲಿ ಶ್ರೀರಾಮನಿಗೆ ಗುಡಿ ಕಟ್ಟುತ್ತೇವೆ ಎಂದು ಮೂರು ಸಾವಿರ ಕೋಟಿಗೂ ಹೆಚ್ಚು ಸಾರ್ವಜನಿಕ ಹಣವನ್ನು ಎತ್ತಲಾಗಿತ್ತು,

ಅಲ್ಲಿ ಅಯೋಧ್ಯೆಯಲ್ಲಿ ಇವತ್ತಿಗೂ ಗುಡಿ ಏಳಲಿಲ್ಲ, (ಏಳುವುದೂ ಇಲ್ಲ, ಏಳಲೂಬಾರದು) ಆದರೆ ಹಣ ಎಲ್ಲಿ ಹೋಯಿತು? ಅದರ ಲೆಕ್ಕವನ್ಯಾಕೆ ಕೊಡಲಿಲ್ಲ? ರಥಯಾತ್ರೆ ವೇಳೆ ನಡೆದ ಕೋಮು ಹಿಂಸಾಚಾರಗಳಲ್ಲಿ ಆ ಹಣ ಎಷ್ಟು ಬಳಕೆಯಾಯ್ತು? ಭಗವಾಧ್ವಜ, ಶ್ರೀರಾಮನ ವರ್ಣಚಿತ್ರಗಳನ್ನು ಮಾರಿ ಎತ್ತಿದ ಚಂದಾ ನುಂಗಿದವರ್ಯಾರು?

ಹಿಂದೂ ಸಮಾಜೋತ್ಸವದ ಹೆಸರಲ್ಲಿ ಪ್ರತಿವರ್ಷ ದೇಶದಾದ್ಯಂತ ಮಾಡುವ ಎತ್ತುವಳಿ ಹಣದ ಲೆಕ್ಕವನ್ನೇಕೆ ಕೊಡುವುದಿಲ್ಲ ಸಂಘಪರಿವಾರ? ಭೂಕಂಪ, ಪ್ರವಾಹ, ಸುನಾಮಿ ನಿಧಿಗಳ ಹೆಸರಲ್ಲಿ ಎತ್ತಿದ ಹಣ ಸಂತ್ರಸ್ತ[illegible] ಸರಿಯಾಗಿ ಮುಟ್ಟಲಿಲ್ಲ? ಆ ಹಣದ ಲೆಕ್ಕವನ್ನು ಕೇಳುವವರ್ಯಾರು?

ಹಾಗಾಗಿ ಸೇವಾಭಾರತಿ ಪರಿಹಾರ ಕಾರ್ಯಕ್ಕೆ ಇಳಿದರೆ ಅದರಿಂದ ಉತ್ತರಕರ್ನಾಟಕಕ್ಕೆ ಒಳ್ಳೆಯದಕ್ಕಿಂತ ಹಾ[illegible] ಹೆಚ್ಚು.

ಬೀದಿ ಬಸವ ಸಿ.ಎಂ. : ಜನತೆಗೆ ಅವಮಾನ

ಕರಾಳ ಹಿನ್ನೆಲೆ ಹೊಂದಿರುವ ಸೇವಾ ಭಾರತಿಗೆ ಪರಿಹಾರ ಕಾರ್ಯದ ಜವಾ[illegible] ಹೊರಿಸುತ್ತಿರುವುದು ಸಂವಿಧಾನ ವಿರೋಧಿ, ಅಪ್ರಜಾಸತ್ತಾತ್ಮಕ ಕ್ರಮವಾಗಿದೆ. ಗೊತ್ತಿದ್ದರೂ ಮೂರ್ಖ ಸಿ.ಎಂ. ಯಡಿಯೂರಪ್ಪ ಅದ್ಯಾವನೋ ಮೈ.ಚ. ಜಯದ[illegible] ಗುಲಾಮನಂತೆ ವರ್ತಿಸುತ್ತಾ ತನ್ನ ಸರ್ಕಾರವನ್ನು ಚುನಾಯಿಸಿದ ಜನತೆಗೇ ದ[illegible] ಬಗೆಯುತ್ತಿದ್ದಾನೆ.

ಇನ್ನು ಮುಖ್ಯಮಂತ್ರಿ, ಮಂತ್ರಿಗಳು ಡಬ್ಬಾ ಹಿಡಿದುಕೊಂಡು ಬೀದಿಬೀದಿ ಹಣ ಸಂಗ್ರಹಿಸುತ್ತಿರುವುದು ಸಂತ್ರಸ್ತರಿಗಷ್ಟೇ ಅಲ್ಲ, ಇಡೀ ರಾಜ್ಯದ ಜ[illegible] ಮಾಡುತ್ತಿರುವ ದ್ರೋಹವಾಗಿದೆ. ಪರಿಹಾರ ಕಾರ್ಯಕ್ಕೆ ಬೇಕಾದ ಸಂಪ[illegible] ಸರ್ಕಾರ ಮತ್ತು ಸಮಾಜದಲ್ಲೇ ಇದೆ. ಅದು ಉಪಯೋಗವಾಗಬೇಕೇ ಹೊ[illegible] ಬೀದಿಬೀದಿ ಅಲೆದು ಎತ್ತಿದ ದುಡ್ಡಲ್ಲ. ಎಲ್ಲವನ್ನೂ ಬಿಟ್ಟಂತಿರುವ ನಮ್ಮ ಮಾಧ್ಯ[illegible] ಕೂಡಾ 'ಪ್ರವಾಹದಂತೆ ಹರಿದ ಔದಾರ್ಯ' ಎಂದು ಹೆಡ್‌ಲೈನ್ ಬರೆ[illegible] ಸಂತ್ರಸ್ತ ಜನರನ್ನು ಭಿಕ್ಷುಕರಂತೆ ಚಿತ್ರಿಸುತ್ತಿರುವುದು ಅಸಹ್ಯಕರವಾಗಿದೆ. ಸಂಪನ್ಮೂಲಕ್ಕೆ ಕೊರತೆಯಿಲ್ಲ, ವ್ಯವಸ್ಥೆಯ ಲಾಭವುಂಡ ಸಮಾಜದ ಪ್ರತಿಷ್ಠಿತ ವರ್ಗಗಳು ಸರ್ಕಾರದೊಡನೆ ನಿಲ್ಲ[illegible] ಸಿ.ಎಂ. ಮತ್ತು ಮಂತ್ರಿಮಂಡಳ ಗಿಮಿಕ್ಕುಗಳನ್ನು ನಿಲ್ಲಿಸಿ ಕಾರ್ಯಮಗ್ನರಾಗಬೇಕು. ಕೊರತೆ ಇರುವುದು ಸಂಪನ್ಮೂಲ[illegible] ಸಂಕಲ್ಪದಲ್ಲಿ, ಇಚ್ಛಾಶಕ್ತಿಯಲ್ಲಿ.

ಈಗ ಕೆಲ ಗಂಟುಕಳ್ಳರು ಮುಂದೆ ಬಂದು ತಾವು ಸಾವಿರ, ಎರಡು ಸಾವಿರ ಮನೆ ನಿರ್ಮಿಸುವ[illegible] ಹೇಳುತ್ತಿದ್ದಾರೆ. ಇವರು ನಿಜವಾಗಿಯೂ ನಿರ್ಮಿಸುತ್ತಾರಾ? ಇವರು ಯಾರಿಗೆ ಉತ್ತರದಾಯಿಗಳು?

T & T ಒದ್ದೋಡಿಸಿತ್ತು

1993-95 ರ ಅವಧಿಯಲ್ಲಿ ವಿಶ್ವ ಹಿಂದೂ ಪರಿಷತ್ ಅಮೆರಿಕ ಘಟಕದೊಂದಿಗೆ ಅಲ್ಲಿನ ಖ್ಯಾತ ದೂರಸಂಪರ್ಕ ಕಂಪನಿ AT & T ಒಂದು ಒಪ್ಪಂದ ಮಾಡಿಕೊಂಡಿತ್ತು. ಅದರ ಪ್ರಕಾರ AT & T ತನ್ನ ಪ್ರತಿ ಚಂದಾದಾರನ ಒಟ್ಟು ಬಿಲ್‌ನಲ್ಲಿ ಶೇ ಇಂತಿಷ್ಟು ಎಂದು ಒಂದಿಷ್ಟು ಮೊತ್ತವನ್ನು ವಿಎಚ್‌ಪಿಗೆ ಕೊಡಲು ಒಪ್ಪಿತ್ತು. ಪಾಪ AT & T ಗೆ ವಿಎಚ್‌ಪಿ ಎಂತಹ ಜೀವವಿರೋಧಿ ಸಂಘಟನೆ ಎಂಬುದು ಗೊತ್ತಿರಲಿಲ್ಲ. ಅಥವಾ AT & T ಬಳಿ ವಿಎಚ್‌ಪಿಯ ಭಂಟರು ಅದನ್ನು ಮುಚ್ಚಿಟ್ಟಿದ್ದರು. ಆದರೆ ಕೆಲವೇ ದಿನಗಳಲ್ಲಿ AT & T ಮ್ಯಾನೇಜ್‌ಮೆಂಟಿಗೆ ವಿಎಚ್‌ಪಿ ಒಂದು ಕ್ರೂರ ಸಂಘಟನೆಯೆಂದು ಗೊತ್ತಾಗುತ್ತಿದ್ದಂತೆ ವಿಎಚ್‌ಪಿಯನ್ನು ಒದ್ದೋಡಿಸಲಾಗಿತ್ತು.
ಇಂತಹ ವಿಎಚ್‌ಪಿಯ ಮರಿರೂಪವೇ ಸೇವಾಭಾರತಿ. ನಮಗಿದು ಬೇಕಾ?

...ಾಗಿದ್ದ ಕೆಲವು ಎನ್.ಜಿ.ಒ.ಗಳಿಗೆ ಧಮಕಿ ಹಾಕಿದ್ದ ಸೇವಾಭಾರತಿ ...ರ್ ಎನ್.ಜಿ.ಒ.ಗಳನ್ನು ಅಲ್ಲಿಂದ ಓಡಿಸಲು ನೋಡಿತ್ತು. ಸೇವಾ...ಯ ಧರ್ಮಾಧಾರಿತ ಕಾರ್ಯಚಟುವಟಿಕೆ ಕಂಡ ಜನ ಕೊನೆಗೆ ...ಭಾರತಿಯನ್ನೇ ಅಲ್ಲಿಂದ ಒದ್ದೋಡಿಸಿದ್ದರು.

...ಗಪಟ್ಟಂ ಜಿಲ್ಲೆಯ ಕೀಚಂಕುಪ್ಪಂ ...ಹಳ್ಳಿಯಲ್ಲಿ ಸೇವಾಭಾರತಿ ...ಸತಿ ಕೆಲಸ ಮಾಡಿತು. ...ಂತರ ದುಡ್ಡು ಎತ್ತಿ 248 ...ಳನ್ನು ಕಟ್ಟಿತ್ತು. ಆ ಮನೆಗಳ ... ನೋಡಿದರೆ ಅವುಗಳು ...ಂತಿದ್ದವು! ಮೇಲ್ಗಡೆ ಕಮಾನಿನ ...ರ ಕಟ್ಟಡ, ಒಳಗೆ ಕಳಪೆ ...ಾರಿ. ಈ ಮನೆಗಳನ್ನು ಸಮುದ್ರ ...ದ ಒಂದು ಕಿ.ಮೀ.ದೂರದಲ್ಲಿ ...ಾಗಿತ್ತು. ಮೀನುಗಾರ ...ಬಗಳಿಗೆ ಸಮುದ್ರ ತೀರವೇ ...ಿ. ಆದರೆ ಸೇವಾಭಾರತಿ ...ನ್ನ ಸಮುದ್ರತೀರದಿಂದ ದೂರ ... ಹಾಕಿತ್ತು. ಆ ಮನೆಗಳಿಗೆ ಕಟ್ಟಿಸಿದ್ದ ...ಾನೆಗಳಿಗೆ ಸೆಪ್ಟಿಕ್‌ಟ್ಯಾಂಕ್ ಇರಲಿಲ್ಲ. ಅವು ಬಳಸಲು ...ಗ್ಯವಾಗಿದ್ದವು. ಕಟ್ಟಿಸಿದ ಒಂದು ವರ್ಷದಲ್ಲೇ ಮನೆಗಳ ...ಗಳು ಬಿರುಕು ಬಿಟ್ಟವು. ಮಳೆಯಾದಾಗ ಗೋಡೆಗಳು ನೆನೆದು ...ಳಕ್ಕೆ ನೀರು ಹರಿಯಿತು. ಇವತ್ತೇನಾಗಿದೆ ಎಂದರೆ ಅಲ್ಲಿದ್ದ ...ಕ ಕುಟುಂಬಗಳು ಆ ಮನೆಗಳಲ್ಲಿ ವಾಸಿಸಲಾಗದೇ ತಮ್ಮ ... ಜಾಗಕ್ಕೆ ಹೋಗಿ ತಾತ್ಕಾಲಿಕ ಮನೆಗಳನ್ನು ಕಟ್ಟಿಕೊಂಡು ...ತ್ತಿವೆ. ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದ ...ಒ.ಗಳು ಇವತ್ತಿಗೂ ಅದೇ ಪ್ರದೇಶದಲ್ಲಿ ಸೇವೆಯಲ್ಲಿ ...ಗಿವೆ. ಆದರೆ ಮನೆಹಾಳ ಸೇವಾಭಾರತಿ ಈಗಲ್ಲಿ ನಾಪತ್ತೆ. ...ಸುನಾಮಿ ಪರಿಹಾರದ ಹೆಸರಲ್ಲಿ ಎತ್ತಿದ ದುಡ್ಡಿನಲ್ಲಿ ...ನಾಡು, ಒರಿಸ್ಸಾ, ಗುಜರಾತ್‌ಗಳಲ್ಲಿ ಆದಿವಾಸಿ ಮಕ್ಕಳಿಗೆ ಶಾಲೆಗಳನ್ನು ಆರಂಭಿಸಿ, ಮುಗ್ಧ ಮಕ್ಕಳಲ್ಲಿ ಹಿಂದೂತ್ವದ ವಿಷ ಬೀಜ ಬಿತ್ತುತ್ತಿದೆ. ಮುಂದೆ ಈ ಮಕ್ಕಳನ್ನು, ಅವರ ಪೋಷಕರನ್ನು ಅಲ್ಪಸಂಖ್ಯಾತರ ಮೇಲೆ ಮಾರಣಹೋಮ ನಡೆಸಲು ತಯ್ಯಾರುಗೊಳಿಸುತ್ತಿದೆ.



ದಾಳಿಗೊಳಗಾದ ಒರಿಸ್ಸಾದ ಚರ್ಚ್...

ಅಂದಂತೆ, ಕ್ರಿಶ್ಚಿಯನ್ನರ ಮೇಲಿನ ದಾಳಿ ಮಾಡಿ ಹಲವಾರು ಸಾವುನೋವಿಗೆ ಕಾರಣವಾದ ಆರೋಪ ಹೊತ್ತಿರುವ ಸೇವಾಭಾರತಿಯನ್ನು ಬಹುಹಿಂದೆಯೇ ಮಧ್ಯಪ್ರದೇಶದಲ್ಲಿ ನಿಷೇಧಿಸಲಾಗಿದೆ. ಇಂತಹ ನಿಷೇಧಿತ, ಕ್ರೂರ ಕಳ್ಳ ಸಂಸ್ಥೆಯನ್ನು ಹೊರಗಿಡಬೇಕಾದ ಯಡ್ಡಿ ಸರ್ಕಾರವೇ ಅದನ್ನು ಬೆಂಬಲಿಸಿ ಬೀದಿಗಿಳಿದಿದೆ. ಸೇವಾಭಾರತಿ ಕಾಲಿಟ್ಟಲೆಲ್ಲ ಕಳಪೆ ಕಾಮಗಾರಿಗಳು, ಕೋಮುಗಲಭೆಗಳು ಗ್ಯಾರಂಟಿ. ಒರಿಸ್ಸಾ, ಮಧ್ಯಪ್ರದೇಶ ಮತ್ತು ಗುಜರಾತ್‌ಗಳ ವಿದ್ಯಮಾನಗಳು ಇದಕ್ಕೆ ಸಾಕ್ಷಿಯಾಗಿವೆ. ಈಗಾಗಲೇ ಕರಾವಳಿಯಲ್ಲಿ ಕೋಮುಧ್ರುವೀಕರಣವಾಗಿ ಹೋಗಿದೆ. ಈಗ ಉತ್ತರ ಕರ್ನಾಟಕದಲ್ಲೂ ಅಂತಹ ಸ್ಥಿತಿ ನಿರ್ಮಾಣವಾಗಬಾರದೆಂದರೆ ಮೊದಲು ಸೇವಾಭಾರತಿಯನ್ನು ಇಲ್ಲಿಂದ ಒದ್ದೋಡಿಸಬೇಕಿದೆ.

ಪರಿಹಾರ ಕಾರ್ಯ ಮಾಡಬೇಕಾದ ಸರ್ಕಾರ ವೋಟ್‌ಬ್ಯಾಂಕ್ ಸೃಷ್ಟಿಸಿಕೊಳ್ಳಲು, ಅಲ್ಪಸಂಖ್ಯಾತರನ್ನು ಅಸಹಾಯಕ ಸ್ಥಿತಿಗೆ ತಳ್ಳಲು ನೋಡುತ್ತದೆಂದರೆ ಅದಕ್ಕಿಂತ ನಾಚಿಕೆಗೇಡಿನ ವಿಷಯ ಇನ್ನೊಂದಿಲ್ಲ.

ರಾಜ್ಯ ಬಿಜೆಪಿಯ ಪಾಪದ ಕೊಡ ತುಂಬಿ ಉಕ್ಕಿ ಹರಿಯುತ್ತಿದೆ. ವಿರೋಧ ಪಕ್ಷಗಳು, ಪ್ರಜಾಪ್ರಭುತ್ವವಾದಿಗಳು ಕೂಡಲೇ ಧ್ವನಿ ಎತ್ತಬೇಕಾಗಿದೆ. ಆ ಮೂಲಕ ಸಂತ್ರಸ್ತರಿಗೆ ಕನಿಷ್ಠ ಮೂಲಭೂತ ಅಗತ್ಯಗಳು ತಲುಪುವಂತೆ ನೋಡಿಕೊಳ್ಳಬೇಕಾಗಿದೆ.


● ಪಿ.ಕೆ.ಮಲ್ಲನಗೌಡರ್

ಕ್ಯಾಬಿನೆಟ್ ಮೀಟಿಂಗ್‌ಗೆ ಕೋಟಿ!


...ನತ್ತು ರಾಜ್ಯೋತ್ಸವ ಪ್ರಶಸ್ತಿಗಳನ್ನು ರದ್ದುಗೊಳಿಸುತ್ತಿರುವುದನ್ನೇ ಮಹಾನ್ ಸಾಧನೆಯೆಂಬಂತೆ ತೋರಿಸಿಕೊಳ್ಳುತ್ತಿದೆ ಈ ಸರ್ಕಾರ. ಆದರೆ ಪ್ರಚಾರದ ...ಗಳಿಗಾಗಿ ಈ ಸರ್ಕಾರ ಕೋಟಿ ಕೋಟಿ ಹಾಳುಮಾಡಿದೆ. ರಾಜ್ಯೋತ್ಸವ ರದ್ದು ಮಾಡಿದಂತೆ, ಮಠಗಳಿಗೆ ನೀಡಿದ ಅನುದಾನವನ್ನು ವಾಪಾಸ್ ... ಅದನ್ನು ಪರಿಹಾರ ಕಾರ್ಯಕ್ಕೆ ಬಳಸುವ ಧೈರ್ಯ ಈ ಸರ್ಕಾರಕ್ಕಿಲ್ಲ. ...ಯೇ ವಾಪಾಸ್ ಕೊಡಬೇಕೆಂಬ ಸಜ್ಜನಿಕೆ ಮಠಾಧೀಶರಿಗಿಲ್ಲ.

...ನತ್ತು ಮಿತವ್ಯಯದ ಮಾತಾಡುವ ಯಡ್ಡಿ ಬಳಗ ಗುಲ್ಬರ್ಗಾದಲ್ಲಿ ...ರಕ್ಕೆ ನಡೆಸಿದ ಕ್ಯಾಬಿನೆಟ್ ಮೀಟಿಂಗ್‌ಗೆ ಕೇವಲ 1 ಕೋಟಿ ...ಮಿ ಖರ್ಚು ಮಾಡಿತ್ತು! ಇತ್ತೀಚೆಗೆ ಗುಲ್ಬರ್ಗಾದಲ್ಲಿ ನಡೆದ ಸಚಿವ ... ಕಾರ್ಯಕ್ರಮದ ಡೆಕೋರೇಷನ್‌ಗೆ ಖರ್ಚಾದದ್ದು ಕೇವಲ 28 ...! ಈ ಹಣದಲ್ಲಿ ಸಚಿವರಿಗೆ ಸ್ವಾಗತ ಫಲಕಗಳದ್ದೇ ದೊಡ್ಡ ...ಗಿತ್ತು.

...ಗೆಲ್ಲಾ ಮಠಗಳಿಗೆ, ಪ್ರಚಾರಕ್ಕೆ ಹಣ ಪೋಲು ಮಾಡಿದ ಸರ್ಕಾರ ...ಜ್ಯದ ದುಡ್ಡು ಕೊಳ್ಳೆ ಹೊಡೆದ ಗಂಟುಕಳ್ಳರ ಮುಂದೆ ಕೈಚಾಚಿ ...ಂದು ಸಂಗ್ರಹಿಸುತ್ತಿದೆ.
...ಚಿಕೆ, ಮಾನ, ಮರ್ಯಾದೆ ಏನಾದ್ರೂ ಇದ್ದರೆ ತಾನೆ?



ಜಾಣಗೆರೆಯ ಸಾಮರಸ್ಯವೂ ಕನ್ನಡವೀರರ ಸಂಘರ್ಷವೂ



ಜಯಕರ್ನಾಟಕ ಎಂಬ ಸೋಕಾಲ್ಡ್ ಕನ್ನಡಪರ ಸಂಘಟನೆಯ ವತಿಯಿಂದ ಇತೀಚೆಗಷ್ಟೇ 'ವಿಚಿತ್ರ' ವಿಚಾರ ಸಂಕಿರಣವೊಂದನ್ನು ಹಮ್ಮಿಕೊಂಡಿದ್ದ ಅಧ್ಯಕ್ಷ ಜಾಣಗೆರೆ ವೆಂಕಟರಾಮಯ್ಯಗೆ ಅವರ ಕಾರ್ಯಕರ್ತರೇ ಮಂಗಳಾರತಿ ಎತ್ತಿದ್ದಾರೆ!

ಅರ್ಧ ಆಯುಸ್ಸು ಪೂರ್ತಿ ರೊಚ್ಚು, ಕೊಚ್ಚು, ಕೆಚ್ಚು ಎಂದೆಲ್ಲಾ ಭಾಷಣ ಬಿಗಿದು ಚಪ್ಪಾಳೆ ಗಿಟ್ಟಿಸುತ್ತಿದ್ದ ಜಾವೆಂ ಇಲ್ಲಿಗೆ ವಾರದ ಹಿಂದಷ್ಟೇ 'ಸಾಮರಸ್ಯವೋ? ಸಂಘರ್ಷವೋ' ಎಂಬ ವಿಚಾರಸಂಕಿರಣ ಹಮ್ಮಿಕೊಂಡರು. ಅದರರ್ಥವಿಷ್ಟೇ-ಇನ್ನು ಮುಂದೆ ಜಯಕರ್ನಾಟಕ ಸಂಘಟನೆಯ ವತಿಯಿಂದ ರಾಜ್ಯದ ಸಮಸ್ಯೆಗಳ ವಿರುದ್ಧ ಸಂಘರ್ಷ ನಡೆಸಬೇಕೋ ಅಥವಾ ಸಾಮರಸ್ಯದಿಂದ ಸಾಧಿಸಬೇಕೋ?

ಜಾಣಗೆರೆ ಮಗುವಲ್ಲ, ನಿನ್ನೆ ಮೊನ್ನೆ ಹೋರಾಟಕ್ಕಿಳಿದವರೇನಲ್ಲ, ಅದೂ ಈ ಇಳಿವಯಸ್ಸಿನಲ್ಲಿ ಸಾಮರಸ್ಯವೋ ಸಂಘರ್ಷವೋ ಎಂದು ಚರ್ಚೆ ನಡೆಸಿ ಆ ಮೂಲಕ ನಿರ್ಧಾರ ಕೈಗೊಂಡು ಹೋರಾಟ ರೂಪಿಸುತ್ತಾರೆಂದರೆ; ಜಾಣಗೆರೆಗೆ ಅರವತ್ತಕ್ಕೆ ಮೊದಲೇ ಅರಳುಮರಳು ಶುರುವಾಗಿರಬೇಕೆಂದು ಲೆಕ್ಕಹಾಕಿದ ಕನ್ನಡ ಕಾರ್ಯಕರ್ತರು ವೇದಿಕೆಯಲ್ಲೇ ಯಕ್ಕಾಮಕ್ಕಾ ಝಾಡಿಸಿದರು. "ಅಲ್ರೀ ಆ ಗಣಿರೆಡ್ಡಿ ಎಲ್ಲಿಂದಲೋ ಬಂದು ನಮ್ಮ ಸಂಪತ್ತನ್ನೇ ಲೂಟಿ ಹೊಡೆದು ಫ್ಯಾಕ್ಟ್ರಿ ಮಾಡ್ತಾನೆ? ತಿರುಪತಿ ತಿಮ್ಮಪ್ಪನಿಗೆ ವಜ್ರದ ಕಿರೀಟ ಕೊಡ್ತಾನೆ. ಇಂಥವನ ಜೊತೆ ಏನ್ರಿ ಸಾಮರಸ್ಯ ಮಾಡ್ಕೋತೀರಿ? ನಿಮ್ಮ ಪ್ರಕಾರ ಸಾಮರಸ್ಯ ಅಂದ್ರೆ ಗಣಿರೆಡ್ಡೀನಾ ಈ ರಾಜ್ಯದ ಮುಖ್ಯಮಂತ್ರಿ ಮಾಡೋದಾ?"

ರೊಚ್ಚಿಗೆದ್ದ ಕನ್ನಡ ಕಾರ್ಯಕರ್ತರು ಪ್ರಶ್ನೆಗಳ ಮೇಲೆ ಪ್ರಶ್ನೆ ಹಾಕುತ್ತಿದ್ದರೆ ಚಳವಳಿ ಚತುರ ಜಾವೆಂ ಕರವಸ್ತ್ರ ತೆಗೆದು ಬೆವರೊರೆಸಿಕೊಂಡರಂತೆ. ಏನೇನೋ ಮಾತಾಡಿ ಸಭೆ ಮುಗಿಸಿದ್ದೇ ಕಣ್ಮರೆಯಾದರಂತೆ!

'ಜಯಕರ್ನಾಟಕ' ಸಂಘಟನೆಯ ಪರಿಸ್ಥಿತಿ ಸದ್ಯಕ್ಕೆ ಸಾಮರಸ್ಯವೋ ಸಂಘರ್ಷವೋ? ಎಂಬ ತೊಳಲಾಟದಲ್ಲೇ ಬಜೆಯಾಗಿಬಿಟ್ಟಿದೆ. ಜಯಕರ್ನಾಟಕವನ್ನು ಸಂಘಟಿಸುವಲ್ಲಿ ಮಹಾತ್ಮ ಜಾಣಗೆರೆ ಓಡಾಡಿ ಸುಸ್ತಾಗದಿರಲಿ ಎಂದು ಐಷಾರಾಮಿ ಕಾರನ್ನೂ, ಏರ್‌ಕಂಡೀಷನ್ ಕಚೇರಿಯನ್ನೂ, ಪ್ರತಿ ಮಧ್ಯಾಹ್ನ ಊಟಕ್ಕೆ ಪುಷ್ಕಳ ಬಿರಿಯಾನಿ- ಇತ್ಯಾದಿ ಸಾಲದೆಂಬಂತೆ ತಿಂಗಳೊಂದಕ್ಕೆ ಮೂವತ್ತು ಸಾವಿರ ರೂಪಾಯಿಯ ಸಂಬಳವು ಸಿಗುತ್ತಿದೆ!

ಇಷ್ಟೆಲ್ಲಾ ಐಷಾರಾಮಿ ಸೌಕರ್ಯ ಕಲ್ಪಿಸಿಬಿಟ್ಟರೆ ಜಾಣಗೆರೆ ಅದ್ಭುತವಾಗೇ ಸಂಘಟನೆ ಕಟ್ಟುತ್ತಾರೆಂದು ಯಾವ ಪುಣ್ಯಾತ್ಮನ ತಲೆಗೆ ಹೊಳೆಯಿತೋ? ಹೊಟ್ಟೆ ತುಂಬಿದ ಯಾವ ವ್ಯಕ್ತಿ ತಾನೇ ಸಂಘರ್ಷಕ್ಕಿಳಿಯುತ್ತಾನೆ? ಪ್ರತಿ ಮಧ್ಯಾಹ್ನ ಚಿಕನ್ ಬಿರಿಯಾನಿ ತಿಂದು, ಐಷಾರಾಮಿ ಕಾರಲ್ಲಿ ವಾರಕ್ಕೆರಡು ದಿನ ಕುಣಿಗಲ್ಲಿನ ತಮ್ಮ ಫಾರ್ಮ್‌ಹೌಸ್ ಸೇರಿಕೊಂಡರೆ ಜಾಣಗೆರೆ ಸಾಹೇಬರು ರಪ್ಪೊಳಿಯುವುದು ಮೂರನೇ ದಿನಕ್ಕೆ. ಹೋರಾಟ ಹುಟ್ಟುವುದು ಹಸಿವಿನಲ್ಲೇ ಹೊರತು ಬಿರಿಯಾನಿ-ಎಸಿ ಕಾರಿನಲ್ಲಲ್ಲ ಎಂಬ ಸತ್ಯವನ್ನು ಅವರ ಅನ್ನದಾತನಿಗೆ ಅರ್ಥ ಮಾಡಿಸುವವರ್‍ಯಾರು? ●

ಒಂದು ಮನವಿ ▶▶

...ಪ್ರೀಯ ನಾಡಬಂಧುಗಳೇ,

...ಕರ್ನಾಟಕದ ಉತ್ತರ ಭಾಗದ ಜಿಲ್ಲೆಗಳಲ್ಲಿ ಭೀಕರವಾದ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಹಲವೆಡೆ ಇಡೀ ಊರುಗಳೇ ...ಸುಗಿವೆ. ಅಸಂಖ್ಯಾತ ಮನೆಗಳು ಕುಸಿದಿವೆ. ಕೂಡಿಟ್ಟಿದ್ದ ದವಸ, ಧಾನ್ಯಗಳು, ಪಾತ್ರೆ ಇತ್ಯಾದಿ ದಿನಬಳಕೆಯ ಸಾಮಗ್ರಿಗಳು ...ಕೊಚ್ಚಿ ಹೋಗಿವೆ. ನಿಜಕ್ಕೂ ಇದೊಂದು ಮಾನವೀಯ ದುರಂತವೇ ಸರಿ. ಯಾವುದೇ ಭೇದಭಾವವಿಲ್ಲದೆ ಎಲ್ಲಾ ಜಾತಿ/ ...ರ್ಗಗಳ ಜನರು ಇದರಿಂದ ಬಾಧಿತರು. ಈ ಆಘಾತದಿಂದ ಹೊರಬರಲು ಅವರಿಗೆ ಎಷ್ಟೋ ಕಾಲ ಬೇಕಾಗಬಹುದು. ...ರೆಡೆಗೆ ಸಾಧ್ಯವಿರುವ ಎಲ್ಲಾ ನೆರವು ಹರಿಯಬೇಕಿದೆ.

...ಈ ಮಾನವೀಯ ದುರಂತದಿಂದ ನಮ್ಮ ಸೋದರ- ಸೋದರಿಯರು ಹೊರಬರಲು ನಮ್ಮ ಕೈಲಾದಷ್ಟು ಪ್ರಯತ್ನ ...ಡಲೇಬೇಕು.

... ಈ ನಿಟ್ಟಿನಲ್ಲಿ ಕರ್ನಾಟಕ ಜನಪರ ವೇದಿಕೆಯು ತನ್ನ ಕಾರ್ಯಚಟುವಟಿಕೆಗಳು ಇರುವ ಸ್ಥಳಗಳಿಂದ, ಸಾಧ್ಯವಿರುವಷ್ಟು ...ನ್ನು ಸಂಗ್ರಹಿಸಿ ಸಂತ್ರಸ್ತ ಜನರಿಗೆ ನೆರವಾಗಬೇಕೆಂದು ನಿರ್ಧರಿಸಿದೆ.

...ನಿಮ್ಮಿಂದ ಸಾಧ್ಯವಾದಷ್ಟು ಹಣ, ಪಾತ್ರೆಗಳು, ಬಟ್ಟೆಗಳು ಮತ್ತು ಧಾನ್ಯಗಳನ್ನು ನಮ್ಮ ಕಾರ್ಯಕರ್ತರ ಕೈಗೊಪ್ಪಿಸಿದರೆ ...ನ್ನು ಆದಷ್ಟು ಬೇಗ ಸಂಕಷ್ಟದಲ್ಲಿರುವ ಜನರಿಗೆ ತಲುಪಿಸುವ ವ್ಯವಸ್ಥೆ ಮಾಡುತ್ತೇವೆ. ನಿಮಗೆ ಬೇಡವಾದ ವಸ್ತುಗಳನ್ನು ...ಸುವುದಕ್ಕಿಂತ ನಿಮಗೆ ಬೇಕಾದುದರಲ್ಲೇ ಒಂದು ಭಾಗವನ್ನು ಸಂಕಷ್ಟದಲ್ಲಿರುವ ನಿಮ್ಮ ನಾಡಬಂಧುಗಳ ಜೊತೆ ...ಕೊಳ್ಳಿರೆಂದು ನಮ್ರವಾಗಿ ವಿನಂತಿಸುತ್ತಿದ್ದೇವೆ.


ಕರ್ನಾಟಕ ಜನಪರ ವೇದಿಕೆ

ನೀವು ಈ ಕೆಳಕಂಡ ಫೋನ್ ನಂಬರುಗಳನ್ನು ಸಂಪರ್ಕಿಸಿ, ನಿಮ್ಮ ಕೊಡುಗೆಯನ್ನು ನೀಡಬಹುದು.

ಬೆಂಗಳೂರು: ಕುಮಾರ್ ಸಮತಳ	– 9880292674
ದಾವಣಗೆರೆ: ಚಂದ್ರಶೇಖರ ತೋರಣಘಟ್ಟ	– 9481670506
ಶಿವಮೊಗ್ಗ: ಕೆ.ಎಲ್.ಅಶೋಕ್	– 9448256216
ಬಾಗಲಕೋಟೆ: ಮಹಾಲಿಂಗಪ್ಪ ಆಲಬಾಳ	- 9916156055
ಬೆಳಗಾವಿ: ರವಿ ಮ.ಪಾಟೀಲ	- 9731799429
ಹೊಸಕೋಟೆ: ಹೈದರ್ ಬೇಗ್	- 9008484724
ಮಂಡ್ಯ: ಮದ್ದೂರು ಮಹೇಶ್	- 9980724704
ಮೈಸೂರು: ಸೀತಾ	- 9481533607
ಚಿಕ್ಕಮಗಳೂರು: ಗೌಸ್ ಮೊಯಿದ್ದೀನ್	- 9448220998
ಉತ್ತರ ಕನ್ನಡ: ರಮೇಶ್ ಅಂಕೋಲ	- 9448738079
ವಾಸು ಎಚ್.ವಿ	- 9945516267

ಅರುಣಾಚಲ ಪ್ರದೇಶ ಯಾರದ್ದು


ಹಿಮಾಲಯ ಪರ್ವತ ಶ್ರೇಣಿಯ ತಪ್ಪಲಿನಲ್ಲಿರುವ ಅರುಣಾಚಲ ಪ್ರದೇಶ ಯಾರದ್ದು ಎಂಬ ಪ್ರಶ್ನೆ ಆಗಾಗ ಏಳುತ್ತಲೇ ಇರುತ್ತದೆ. ಮೊನ್ನೆ ನಮ್ಮ ಪ್ರಧಾನಮಂತ್ರಿ ಡಾ.ಮನಮೋಹನ್ ಸಿಂಗ್ ಅವರು ಚುನಾವಣಾ ಪ್ರಚಾರಕ್ಕಾಗಿ ಅರುಣಾಚಲ ಪ್ರದೇಶಕ್ಕೆ ಭೇಟಿ ನೀಡಿರುವುದನ್ನು ನಮ್ಮ ನೆರೆಯ ರಾಷ್ಟ್ರ ಚೀನಾ ಪ್ರಬಲವಾಗಿ ಖಂಡಿಸಿದೆ. ಅದರ ಬೆನ್ನಹಿಂದೆಯೇ ನಮ್ಮ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಎಂ.ಕೃಷ್ಣ ಕೇಂದ್ರ ಹಣಕಾಸು ಸಚಿವ ಪ್ರಣಬ್ ಮುಖರ್ಜಿ ಹಾಗೂ ಭಾರತೀಯ ವಾಯುಪಡೆಯ ಮುಖ್ಯಸ್ಥರಾದಿಯಾಗಿ ಎಲ್ಲರೂ ಚೀನಾದ ವಿರುದ್ಧ ಮುಗಿಬಿದ್ದಿದ್ದಾರೆ. "ಅರುಣಾಚಲ ಪ್ರದೇಶ ಭಾರತದ ಅವಿಭಾಜ್ಯ ಅಂಗ. ನಮ್ಮ ನೆಲದಲ್ಲಿ ನಾವು ಎಲ್ಲಿ ಬೇಕಾದರೂ ಹೋಗುತ್ತೇವೆ, ಏನು ಬೇಕಾದರೂ ಮಾಡುತ್ತೇವೆ. ಅದು ನಮ್ಮ ಸಾರ್ವಭೌಮ ಹಕ್ಕು. ಅದರಲ್ಲಿ ಚೀನಾ ಮೂಗು ತೂರಿಸುವ ಅವಶ್ಯಕತೆಯಿಲ್ಲ" ಎಂಬಂತಹ ಮಾತುಗಳನ್ನು ಅವರೆಲ್ಲರೂ ಆಡುತ್ತಿದ್ದಾರೆ.




ನಮ್ಮ ದೇಶದ ಪ್ರಧಾನಿ ನಮ್ಮದೇ ದೇಶದ ಒಂದು ರಾಜ್ಯಕ್ಕೆ ಹೋಗಿ ಭೇಟಿ ಕೊಟ್ಟರೆ ಅದನ್ನು ವಿರೋಧಿಸುವುದಕ್ಕೆ ಚೀನಾ ಯಾರು, ಅದಕ್ಕೇನು ಹಕ್ಕಿದೆ ಎಂಬಂತಹ ಪ್ರಶ್ನೆಗಳು ನಮ್ಮಲ್ಲಿ ಹುಟ್ಟುವುದು ಸಹಜ. ನಮ್ಮ ಸಾರ್ವಭೌಮ ಹಕ್ಕನ್ನೇ ಪ್ರಶ್ನಿಸುತ್ತಿರುವ ಚೀನಾ ಬಗ್ಗೆ ಅನೇಕ ಭಾರತೀಯರಿಗೆ ಸಿಟ್ಟು ಬಂದಿದ್ದೂ ನಿಜ. ನಮ್ಮ ಪಠ್ಯಪುಸ್ತಕಗಳಲ್ಲಿ, ಮಾಧ್ಯಮಗಳಲ್ಲಿ, ಚರಿತ್ರೆಯ ಪುಸ್ತಕಗಳಲ್ಲಿ ಅರುಣಾಚಲ ಪ್ರದೇಶ ಭಾರತದ ಒಂದು ರಾಜ್ಯ ಎಂದು ಓದಿರುವುದರಿಂದ, ನಮ್ಮ ರಾಜಕಾರಣಿಗಳು ಮತ್ತು ಮಿಲಿಟರಿ ಅಧಿಕಾರಿಗಳು ಅರುಣಾಚಲ ಪ್ರದೇಶ ನಮ್ಮ ನೆಲ ಎಂದು ವಾದಿಸುತ್ತಲೇ ಬಂದಿರುವುದರಿಂದ ಹಾಗೂ ಭಾರತದ ಇನ್ನಿತರ ರಾಜ್ಯಗಳಂತೆ ಅರುಣಾಚಲ ಪ್ರದೇಶ ಕೂಡ ಭಾರತದ ಏಕಾಧಿಪತ್ಯ ಆಡಳಿತಕ್ಕೆ ಒಳಪಟ್ಟಿರುವುದರಿಂದ ಬಹುತೇಕ ಭಾರತೀಯರೆಲ್ಲರೂ ಅದನ್ನು ತಮ್ಮ ನೆಲ ಎಂದೇ ಭಾವಿಸಿದ್ದಾರೆ. ಅದು ಭಾರತದ ಅವಿಭಾಜ್ಯ ಅಂಗ ಎಂದೇ ನಂಬಿದ್ದಾರೆ. ಆದ್ದರಿಂದಲೇ ನಮ್ಮ ದೇಶದ ಪ್ರಧಾನಿಯೊಬ್ಬ ದೇಶದ ಗಡಿಯಲ್ಲಿರುವ ನಮ್ಮದೇ ಆದ ಆ ರಾಜ್ಯಕ್ಕೆ ಭೇಟಿ ಕೊಟ್ಟಿದ್ದನ್ನು ಹೊರಗಿನ ದೇಶವಾದ ಚೀನಾ ಖಂಡಿಸಿದರೆ, ಆ ಪ್ರದೇಶ ತನಗೆ ಸೇರಿದ್ದೆಂದು ಚೀನಾ ವಾದಿಸಿದರೆ ನಮಗೆಲ್ಲರಿಗೂ ಸಿಟ್ಟು ಬರುತ್ತದೆ. ಆದರೆ, ಈ ವಿಚಾರ ನಾವಂದುಕೊಂಡಷ್ಟು ಸರಳವಾಗಿಲ್ಲ. ಅರುಣಾಚಲ ಪ್ರದೇಶ ಯಾರಿಗೆ ಸೇರಬೇಕು ಎಂಬ ವಿವಾದ ನಿನ್ನೆ ಮೊನ್ನೆ ಹುಟ್ಟಿದ್ದಲ್ಲ. ಅದಕ್ಕೆ ಹೆಚ್ಚೂ ಕಡಿಮೆ ಒಂದು ಶತಮಾನದ ಸುದೀರ್ಘ ಚರಿತ್ರೆಯಿದೆ. ಹಾಗಾಗಿ ಈ ವಿವಾದವನ್ನು ಚಾರಿತ್ರಿಕವಾಗಿ ಯಾವುದೇ ಪೂರ್ವಾಗ್ರಹವಿಲ್ಲದೇ ವಸ್ತುನಿಷ್ಠವಾಗಿ ನೋಡದ ಹೊರತು ಅದು ಅರ್ಥವಾಗುವುದಿಲ್ಲ. 'ಅದು ನಮ್ಮದು' ಎಂದು ನಾವು ಹೇಳುತ್ತಲೇ ಇರುತ್ತೇವೆ, 'ಅದು ನಮ್ಮದು' ಎಂದು ಚೀನಾವೂ ವಾದಿಸುತ್ತಲೇ ಇರುತ್ತದೆ. ಇದು ಸಮಸ್ಯೆಯನ್ನು ಬಗೆಹರಿಸದೇ ಅದನ್ನು ಬಿಗಡಾಯಿಸುವುದಕ್ಕೆ ಮಾತ್ರವೇ ನೆರವಾಗುತ್ತದೆ.

ಅಸಲಿಗೆ ಚೀನಾ ದೇಶ ತನ್ನ ನೆರೆಹೊರೆಯ 14 ದೇಶಗಳೊಂದಿಗೆ ಗಡಿ ವಿವಾದಗಳನ್ನು ಹೊಂದಿದೆ. ಅದರಲ್ಲಿ ಭಾರತವೂ ಒಂದು. ಭಾರತದೊಂದಿಗೆ ಚೀನಾ ಎರಡು ಗಡಿ ವಿವಾದಗಳನ್ನು ಹೊಂದಿದೆ. ಒಂದನೆಯದು, ಜಮ್ಮು ಮತ್ತು ಕಾಶ್ಮೀರದ ಲಡಾಕ್ ಪ್ರದೇಶದ 38,000 ಚ.ಕಿ.ಮೀ.ನಷ್ಟು ಈಶಾನ್ಯ ಭಾಗ ಈಗ ಚೀನಾದ ವಶದಲ್ಲಿದ್ದು ಅದು ತನಗೆ ಸೇರಿದ್ದೆಂದು ಭಾರತ ವಾದಿಸುತ್ತಿದೆ. ಇನ್ನು ಎರಡನೆಯದು, ಈಗ ಅರುಣಾಚಲ ಪ್ರದೇಶವೆಂದು ಕರೆಯಲ್ಪಡುವ ಪ್ರದೇಶದಲ್ಲಿ ಸುಮಾರು 90,000 ಚ.ಕಿ.ಮೀ.ನಷ್ಟು ಪ್ರದೇಶ ಭಾರತದ ವಶದಲ್ಲಿದ್ದು ಅದು ತನಗೆ ಸೇರಿದ್ದೆಂದು ಚೀನಾ ವಾದಿಸುತ್ತಿದೆ. ಈ ಅರುಣಾಚಲ ಪ್ರದೇಶದ ವಿವಾದಕ್ಕೆ ಬರುವುದಾದರೆ ಬ್ರಿಟಿಷರು ಭರತಖಂಡವನ್ನು ಆಳುತ್ತಿದ್ದಾಗಲೂ ಈ ವಿವಾದ ಇತ್ತು. ಆಗ ಅದಕ್ಕಿನ್ನೂ ಅರುಣಾಚಲ ಪ್ರದೇಶ ಎಂಬ ಹೆಸರೂ ಇರಲಿಲ್ಲ. ವಾಸ್ತವದಲ್ಲಿ ಇದು ಹಿಮಾಲಯದ ಪರ್ವತ ಶ್ರೇಣಿಯಲ್ಲಿ, ಸಮುದ್ರ ಮಟ್ಟದಿಂದ ಸಾವಿರಾರು ಅಡಿಗಳಷ್ಟು ಎತ್ತರದಲ್ಲಿರುವ ಭಾರತ ಮತ್ತು ಟಿಬೆಟ್‌ಗಳ ನಡುವಿರುವ ಅತ್ಯಂತ ಶೀತ ಪ್ರದೇಶ. ಟಿಬೆಟ್ ಆಗ ಚೀನಾವನ್ನಾಳುತ್ತಿದ್ದ ಕಿಂಗ್ ರಾಜಮನೆತನದ ಆಡಳಿತಕ್ಕೊಳಪಟ್ಟಿದ್ದರಿಂದ ಅದೂ ಚೀನಾದ ಭಾಗ ಎಂದೇ ಪರಿಗಣಿಸಲಾಗಿತ್ತು. ಹಾಗಾಗಿ ಇದು ಭಾರತ-ಚೀನಾ ಗಡಿವಿವಾದವಾಗಿಯೇ ಪರಿಗಣಿಸಲ್ಪಟ್ಟಿತ್ತು. ಈ ವಿವಾದಿತ ಪ್ರದೇಶ ಗಗನಚುಂಬಿಯಂತಿರುವ ದೊಡ್ಡ ದೊಡ್ಡ ಬೆಟ್ಟಗುಡ್ಡಗಳನ್ನು ಒಳಗೊಂಡಿರುವ ಅತ್ಯಂತ ಶೀತಪ್ರದೇಶವಾಗಿರುವ ಕಾರಣದಿಂದ ಚೀನಾ ಮತ್ತು ಭಾರತಗಳ ನಡುವೆ ಸ್ಪಷ್ಟವಾದ ಗಡಿರೇಖೆಗಳನ್ನೇ ಎಳೆಯಲಾಗಿರಲಿಲ್ಲ. ಹಾಗಾಗಿ, 'ಈ ಪ್ರದೇಶ ನಮ್ಮದು' ಎಂದು ಬ್ರಿಟಿಷ್ ಭಾರತ ಮತ್ತು ಚೀನಾಗಳು ವಾದಿಸುತ್ತಲೇ ಇದ್ದವು. 1913ರಲ್ಲಿ ಕಿಂಗ್ ರಾಜವಂಶದ ಪತನದೊಂದಿಗೆ ಟಿಬೆಟ್ ತನ್ನನ್ನು ಸ್ವತಂತ್ರ ದೇಶವೆಂದು ಘೋಷಿಸಿಕೊಂಡಿತು. ಆವಾಗ ಭಾರತ-ಚೀನಾ ನಡುವಿನ ಈ ವಿವಾದ ಭಾರತ-ಟಿಬೆಟ್ ನಡುವಿನ ವಿವಾದವಾಗಿ ಪರಿಗಣಿಸಲ್ಪಡಬೇಕಿತ್ತು. ಆದರೆ ಹಾಗಾಗಲಿಲ್ಲ. ಚೀನಾ ಟಿಬೆಟ್ ಅನ್ನು ತಮ್ಮ ದೇಶದ ಅವಿಭಾಜ್ಯ ಅಂಗ ಎಂದೇ ಪರಿಗಣಿಸಿತ್ತು. ಅಲ್ಲದೇ, ಬ್ರಿಟಿಷ್ ಮತ್ತು ಸೋವಿಯತ್ ಒಕ್ಕೂಟಗಳ ನಡುವೆ 1907ರಲ್ಲಿ ನಡೆದ ಒಪ್ಪಂದದಲ್ಲಿ ಎರಡೂ ಟಿಬೆಟ್ ಮೇಲೆ ಚೀನಾದ ಅಧಿಕಾರವನ್ನು ಒಪ್ಪಿಕೊಂಡು ಚೀನಾ ಮಧ್ಯಸ್ಥಿಕೆಯಿಲ್ಲದೇ ಟಿಬೆಟ್‌ನೊಂದಿಗೆ ಮಾತುಕತೆ ನಡೆಸಬಾರದೆಂದು ತೀರ್ಮಾನಿಸಿದ್ದವು. ಹೀಗಾಗಿ, ಈ ವಿವಾದಿತ ಪ್ರದೇಶ ಯಾರಿಗೆ ಸೇರಬೇಕು ಎಂಬ ಪ್ರಶ್ನೆ ಭಾರತ-ಚೀನಾ ಗಡಿ ವಿವಾದವಾಗಿಯೇ ಮುಂದುವರೆಯಿತು.

ಈ ಹಿನ್ನೆಲೆಯಲ್ಲಿ ಈ ಎರಡೂ ದೇಶಗಳ ನಡುವೆ ಸ್ಪಷ್ಟವಾದ ಗಡಿರೇಖೆಯನ್ನು ಎಳೆಯುವ ಮೊದಲ ಪ್ರಯತ್ನ ಇಪ್ಪತ್ತನೇ ಶತಮಾನದ ಆರಂಭದಲ್ಲಿ ಅಂದಿನ ಬ್ರಿಟಿಷ್-ಭಾರತ ಸರ್ಕಾರದಿಂದ ನಡೆಯಿತು. ಬ್ರಿಟಿಷ್ ಭಾರತದ ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿಯಾಗಿದ್ದ ಹೆನ್ರಿ ಮ್ಯಾಕ್‌ಮಹೋನ್ ಎಂಬಾತ ಈ ಪ್ರದೇಶವನ್ನು ಸರ್ವೇ ಮಾಡಿ ಪಶ್ಚಿಮದಲ್ಲಿ ಭೂತಾನ್‌ನಿಂದ ಹಿಡಿದು ಪೂರ್ವದಲ್ಲಿ ಬ್ರಹ್ಮಪುತ್ರ ನದಿಯ ಮಹಾತಿರುವಿನಿಂದ ಪೂರ್ವಕ್ಕೆ 260 ಕಿ.ಮೀ. ದೂರದ ತನಕ 890 ಕಿ.ಮೀ. ಉದ್ದದ ಒಂದು ಗಡಿರೇಖೆಯನ್ನು ಎಳೆದ. 'ಮ್ಯಾಕ್‌ಮಹೋನ್ ರೇಖೆ' ಎಂದೇ ಪ್ರಸಿದ್ಧವಾಗಿರುವ ಈ ಗಡಿರೇಖೆಯೇ ಭಾರತ ಮತ್ತು ಟಿಬೆಟ್‌ಗಳ ನಡುವಿನ ಅಧಿಕೃತ ಗಡಿರೇಖೆಯಾಗಬೇಕೆಂಬ ಪ್ರಸ್ತಾವವನ್ನು ಬ್ರಿಟಿಷ್ ಭಾರತ, ಟಿಬೆಟ್ ಮತ್ತು ಚೀನಾಗಳ ನಡುವೆ 1913-14ರಲ್ಲಿ ಶಿಮ್ಲಾದಲ್ಲಿ ನಡೆದ ಮಾತುಕತೆಗಳಲ್ಲಿ ಖುದ್ದು ಮ್ಯಾಕ್‌ಮಹೋನ್‌ನೇ ಬ್ರಿಟಿಷ್ ಭಾರತದ ಪರವಾಗಿ ಮುಂದಿಟ್ಟ. ಆದರೆ, ಅದಕ್ಕೆ ಚೀನಾ ಸಿದ್ಧವಿರಲಿಲ್ಲ. ಏಕೆಂದರೆ, ಬ್ರಿಟಿಷ್ ಭಾರತದ ಸಾಮ್ರಾಜ್ಯವನ್ನು ಇನ್ನಷ್ಟು ಉತ್ತರ ದಿಕ್ಕಿಗೆ ವಿಸ್ತರಿಸುವ ಹಾಗೆ ತವಾಂಗ್ ಮತ್ತಿತರ ಟಿಬೆಟ್ ಪ್ರದೇಶಗಳನ್ನೆಲ್ಲಾ ಭಾರತಕ್ಕೆ ಸೇರಿಸಿಕೊಂಡು ಈ ರೇಖೆಯನ್ನು ಎಳೆಯಲಾಗಿತ್ತು. ಆದರೂ ಟಿಬೆಟ್‌ನ ಪ್ರತಿನಿಧಿಗಳು ಇದಕ್ಕೆ ಒಪ್ಪಿಗೆ ಸೂಚಿಸಿದರು. ಆದರೆ, ಚೀನಾದ ಪ್ರತಿನಿಧಿಗಳು ಅದಕ್ಕೆ ಬಲವಾದ ವಿರೋಧ ವ್ಯಕ್ತಪಡಿಸಿ ಸಭೆಯಿಂದಲೇ ಹೊರನಡೆದರು. ಅಲ್ಲಿಗೆ ಭಾರತ-ಟಿಬೆಟ್‌ಗಳ ನಡುವೆ ಮಾತ್ರವೇ ಒಪ್ಪಂದವಾಯಿತೇ ಹೊರತು ಚೀನಾ ಅದನ್ನೆಂದೂ ಒಪ್ಪಿಕೊಳ್ಳಲಿಲ್ಲ.



ಅಲ್ಲಿಂದಾಚೆಗೆ ಮ್ಯಾಕ್‌ಮಹೋನ್ ರೇಖೆಯಾಗಲೀ, ಗಡಿ ವಿವಾದವಾಗಲೀ ಎಲ್ಲೂ ಸುದ್ದಿಯಲ್ಲಿರಲಿಲ್ಲ. ಎಲ್ಲರೂ ಅದನ್ನು ಮರೆತೆಬಿಟ್ಟಿದ್ದರು. ಆದರೆ 1937ರಲ್ಲಿ ಬ್ರಿಟಿಷರು ಹೊರತಂದ ನಕಾಶೆಯಲ್ಲಿ ಮ್ಯಾಕ್‌ಮಹೋನ್ ರೇಖೆಯನ್ನೇ ಅಧಿಕೃತ ಗಡಿರೇಖೆಯೆಂದು ತೋರಿಸಲಾಗಿತ್ತು. ಇದರೊಂದಿಗೆ ಮತ್ತೆ ವಿವಾದಕ್ಕೆ ಜೀವ ಬಂದಂತಾಯಿತು. 1944ರ ಹೊತ್ತಿಗೆ ಬ್ರಿಟಿಷರು ಈ ಪ್ರದೇಶದ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಿ ತಮ್ಮ ಆಡಳಿತಕ್ಕೆ ತೆಗೆದುಕೊಂಡು ಸ್ಥಳೀಯರಿಂದ ತೆರಿಗೆ ವಸೂಲಿ ಮಾಡಲಾರಂಭಿಸಿದರು.



ಈ ಅವಧಿಯಲ್ಲಿ ಅತ್ತ ಚೀನಾದಲ್ಲಿ ಮಾವೋ ತ್ಸೆ ತುಂಗ್ ನೇತೃತ್ವದ ಮಹಾನ್ ರಕ್ತಸಿಕ್ತ ಕ್ರಾಂತಿ ಅಂತಿಮ ಹಾಗೂ ನಿರ್ಣಾಯಕ ಘಟ್ಟಕ್ಕೆ ತಲುಪುತ್ತಿದ್ದುದರಿಂದ ಚೀನಾವನ್ನಾಳುತ್ತಿದ್ದ ಕೊಮಿನ್‌ಟಾಂಗ್ ಪಕ್ಷದ ಚಿಯಾಂಗ್ ಕೈ ಶೇಕ್‌ಗೆ ಇತ್ತ ಗಮನ ಹರಿಸುವುದಕ್ಕೂ ಸಾಧ್ಯವಿರಲಿಲ್ಲ. 1947ರಲ್ಲಿ ಇತ್ತ ಬ್ರಿಟಿಷರು ಭಾರತ ಬಿಟ್ಟುಹೋಗಿದ್ದು, ದೇಶ ವಿಭಜನೆಯಾಗಿದ್ದು, ಸಣ್ಣಪುಟ್ಟ ರಾಜರುಗಳು ಭಾರತದ ಏಕಾಧಿಪತ್ಯಕ್ಕೆ ಒಳಪಡಲು ಇಷ್ಟಪಡದೇ ಸ್ವತಂತ್ರವಾಗಿ ಉಳಿಯುವ ಘೋಷಣೆ ಮಾಡಿದ್ದು, ದೇಶದಾದ್ಯಂತ ಅಸ್ಥಿರತೆಯುಂಟಾಗಿದ್ದು – ಈ ಎಲ್ಲಾ ಕಾರಣಗಳಿಂದಾಗಿ ನೂತನವಾಗಿ ಅಧಿಕಾರಕ್ಕೇರಿದ ನೆಹರೂ ಆಡಳಿತಕ್ಕೂ ಅತ್ತ ವಿಶೇಷವಾಗಿ ಗಮನ ಹರಿಸುವುದಕ್ಕೆ ಆಗಲಿಲ್ಲ. 1949ರಲ್ಲಿ ಚೀನಾದಲ್ಲಿ ಪ್ರಜಾಕ್ರಾಂತಿ ಯಶಸ್ವಿಯಾಗಿ ಮಾವೋ ತ್ಸೆ ತುಂಗ್ ನೇತೃತ್ವದ ಕಮ್ಯೂನಿಸ್ಟ್ ಸರ್ಕಾರ ಅಧಿಕಾರಕ್ಕೇರಿತು. ಟಿಬೆಟ್‌ನಲ್ಲಿ ಹಳೆಯ ಊಳಿಗಮಾನ್ಯ ಶಕ್ತಿಗಳೇ ಇನ್ನೂ ಅಧಿಕಾರದಲ್ಲಿದ್ದುದರಿಂದ ಅವುಗಳಿಂದ ದುಡಿಯುವ ಜನಸಮುದಾಯವನ್ನು ವಿಮೋಚನೆ ಮಾಡಿ, ಅದನ್ನು ಉಳಿದ ಚೀನಾದಂತೆಯೇ ಆಧುನಿಕ ಸಮಾಜವಾದಿ ಸಮಾಜವನ್ನಾಗಿ ಪರಿವರ್ತಿಸಬೇಕೆಂಬ ಉದ್ದೇಶದಿಂದ ಮಾವೋ ನೇತೃತ್ವದ ಸರ್ಕಾರ ಟಿಬೆಟ್‌ಗೆ ತನ್ನ ಕೆಂಪು ಸೈನ್ಯವನ್ನು ಕಳಿಸಿ ಟಿಬೆಟ್ ಅನ್ನು ವಶಪಡಿಸಿಕೊಂಡಿತು. ಚೀನಾ ಟಿಬೆಟ್ ಅನ್ನು ವಶಪಡಿಸಿಕೊಂಡಿದ್ದು, 1959ರಲ್ಲಿ ಅಲ್ಲಿಂದ ತಪ್ಪಿಸಿಕೊಂಡು ಭಾರತಕ್ಕೆ ಬಂದ ಬೌದ್ಧ ಭಿಕ್ಕು ದಲೈ ಲಾಮಾಗೆ ಭಾರತ ಆಶ್ರಯ ಕೊಟ್ಟಿದ್ದು ಟಿಬೆಟ್‌ನಲ್ಲಿ ಭಾರತದ ಪರವಾದ ಅಭಿಪ್ರಾಯ ಬಲವಾಗಿ ಬೇರೂರಲು ಕಾರಣವಾಯಿತು.




ಬ್ರಿಟಿಷರು ಭಾರತ ಬಿಟ್ಟು ಹೋದ ಮೇಲೆ ಅನೇಕ ಸಣ್ಣಪುಟ್ಟ ರಾಜರು ತಮ್ಮ ರಾಜ್ಯಗಳನ್ನು ಭಾರತ ಏಕಾಧಿಪತ್ಯದೊಳಗೆ ವಿಲೀನಗೊಳಿಸುವುದಕ್ಕೆ ಒಪ್ಪಿರಲಿಲ್ಲ. ಅಂಥವರಲ್ಲಿ ಒಬ್ಬನಾದ ಹೈದರಾಬಾದಿನ ನಿಜಾಮನನ್ನು ಮಿಲಿಟರಿ ಮೂಲಕ ಸದೆಬಡೆದು ಹೈದರಾಬಾದ್ ಪ್ರಾಂತ್ಯವನ್ನು ಭಾರತ ಒಕ್ಕೂಟಕ್ಕೆ ಬಲವಂತವಾಗಿ ಸೇರಿಸಿಕೊಂಡೊಡನೇ ಉಳಿದವರೂ ಅದಕ್ಕೆ ಸಮ್ಮತಿ ಸೂಚಿಸಿದರು. ವಾಸ್ತವದಲ್ಲಿ ನೆಹರೂಗೆ ಕಾಶ್ಮೀರ, ಅರುಣಾಚಲ ಪ್ರದೇಶ, ಸಿಕ್ಕಿಂ, ಈಶಾನ್ಯ ಭಾರತ ಮುಂತಾದ ಎಲ್ಲಾ ಪ್ರದೇಶಗಳಿಗೆ ಬೇಲಿಹಾಕಿಕೊಂಡು ಬೃಹತ್ ಭಾರತವನ್ನು ಕಟ್ಟಬೇಕೆಂಬ ಮಹದಾಶೆಯಿತ್ತು. ಆದ್ದರಿಂದಲೇ ಅವರು ಕಾಶ್ಮೀರವನ್ನಾಗಲೀ ಅಥವ ಅರುಣಾಚಲ ಪ್ರದೇಶವನ್ನಾಗಲೀ ಬಿಟ್ಟುಕೊಡುವುದಕ್ಕೆ ಸಿದ್ಧವಿರಲಿಲ್ಲ. ಚೀನಾದ ವಿದೇಶಾಂಗ ವ್ಯವಹಾರಗಳ ಮಂತ್ರಿ ಚೌ ಎನ್ ಲಾಯ್ ಅವರು ಅಕ್ಟೋಬರ್ 24, 1959ರಲ್ಲಿ ನೆಹರೂಗೆ ಪತ್ರ ಬರೆದು ಚೀನಾ ಮತ್ತು ಭಾರತಗಳೆರಡೂ ಮ್ಯಾಕ್ ಮಹೋನ್ ರೇಖೆಯಿಂದ 20 ಕಿ.ಮೀ. ಹಿಂದಕ್ಕೆ ಸರಿದು ಮಾತುಕತೆಗಳ ಮೂಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂಬ ಪ್ರಸ್ತಾಪವನ್ನಿಟ್ಟರು. ತಾತ್ಕಾಲಿಕವಾಗಿ ನೆಹರೂ ಇದಕ್ಕೆ ಒಪ್ಪಿಕೊಂಡರಾದರೂ ಈ ಪ್ರದೇಶವನ್ನು ಬಿಟ್ಟುಕೊಡುವುದಕ್ಕೆ ಅವರು ಸಿದ್ಧವಿರಲಿಲ್ಲ. ಯುದ್ಧ ಮಾಡಿಯಾದರೂ ಚೀನಾದ ವಶದಲ್ಲಿದ್ದ ಪ್ರದೇಶಗಳನ್ನು ವಶಪಡಿಸಿಕೊಂಡು ತಮ್ಮ ಸಾಮ್ರಾಜ್ಯ ವಿಸ್ತರಿಸಿಕೊಳ್ಳುವ ತವಕದಲ್ಲಿ ಅವರಿದ್ದರು. ಆದರೆ, ಚೀನಾದ ಹತ್ತಿರ ಬಲಿಷ್ಠವಾದ, ದಶಕಗಳ ಕಾಲ ಯುದ್ಧದಲ್ಲಿ ನುರಿತ ಬೃಹತ್ ಸೈನ್ಯವಿತ್ತು. ಆದ್ದರಿಂದ ಅಂಥ ದುಸ್ಸಾಹಸಕ್ಕೆ ನೆಹರೂ ಕೈ ಹಾಕಲಿಲ್ಲ. ಇದೇ ವೇಳೆಯಲ್ಲಿ ಕಮ್ಯೂನಿಸ್ಟ್ ಸಿದ್ಧಾಂತದಡಿಯಲ್ಲಿ ಸದೃಢೀಕರಣಗೊಳ್ಳುತ್ತಿದ್ದ ಚೀನಾವನ್ನು ಹೊಸಕಿ ಹಾಕುವುದಕ್ಕೆ ಸಾಮ್ರಾಜ್ಯಶಾಹಿ ಅಮೆರಿಕ ಹವಣಿಸುತ್ತಿತ್ತು. ಈ ಉದ್ದೇಶಕ್ಕಾಗಿಯೇ ಚೀನಾದ ಅಕ್ಕಪಕ್ಕದ ದೇಶಗಳಿಗೆ ಮಿಲಿಟರಿ ಮತ್ತು ಹಣಕಾಸು ನೆರವು ಕೊಟ್ಟು ಅದರ ವಿರುದ್ಧ ಎತ್ತಿಕಟ್ಟುವ ಕೆಲಸ ಮಾಡುತ್ತಿತ್ತು. ಈ ಹಿನ್ನೆಲೆಯಲ್ಲಿ ಭಾರತದ ಬೆನ್ನಿಗೂ ಅಮೆರಿಕ ನಿಂತು ಚೀನಾದೊಂದಿಗೆ ಯುದ್ಧ ಮಾಡುವಂತೆ ಪ್ರಚೋದಿಸುತ್ತಿತ್ತು. ಮೊದಲೇ ಇಂತಹದ್ದೇ ಆಲೋಚನೆಯಲ್ಲಿದ್ದ ನೆಹರೂಗೆ ಈಗ ಅಮೆರಿಕದ ಬೆಂಬಲ ಸಿಕ್ಕಿದ್ದು ಆನೆಬಲ ತಂದುಕೊಟ್ಟಿತ್ತು. ಇದೆಲ್ಲದರ ಪರಿಣಾಮವೇ 1962 ಇಂಡೋ-ಚೀನಾ ಯುದ್ಧ. ಈ ಯುದ್ಧವನ್ನು ಘೋಷಿಸಿದ್ದು ನೆಹರೂ ಅವರೇ.

ಅಮೆರಿಕದ ಕುತಂತ್ರವನ್ನು ಚೆನ್ನಾಗಿ ಅರಿತಿದ್ದ ಚೀನಾದ ಅಧ್ಯಕ್ಷ ಮಾವೋ ತ್ಸೆ ತುಂಗ್ ನೆಹರೂಗೆ ಪರಿಪರಿಯಾಗಿ ಅರ್ಥೈಸುವುದಕ್ಕೆ ಪ್ರಯತ್ನಿಸಿದರು. "ನಾವು ನೆರೆಹೊರೆಯವರು ಮಾತುಕತೆಯ ಮೂಲಕ ವಿವಾದವನ್ನು ಬಗೆಹರಿಸಿಕೊಳ್ಳೋಣ. ಅಮೆರಿಕದ ಕುಮ್ಮಕ್ಕಿನೊಂದಿಗೆ ಯುದ್ಧಕ್ಕಿಳಿದರೆ ನಮ್ಮಿಬ್ಬರಿಗೆ ಹಾನಿಯಾಗುತ್ತದೆಯೇ ಹೊರತು ಅಮೆರಿಕಕ್ಕಲ್ಲ" ಎಂದು ಮನವರಿಕೆ ಮಾಡಿಕೊಡಲು ಪ್ರಯತ್ನಿ
ಆದರೆ, ನೆಹರೂಗೆ ಯುದ್ಧ ಸನ್ನಿ ಹತ್ತಿತ್ತು. ಅಂತಿ
ಯುದ್ಧ ಘೋಷಿಸಿಯೇ ಬಿಟ್ಟರು. ಚೀನಾದ
ಹೋಲಿಸಿದರೆ ಭಾರತದ ಸೈನ್ಯ ಏನೇನೂ ಅಲ್ಲ. ದಶಕ
ಯುದ್ಧದಲ್ಲೇ ನಿರತವಾಗಿ ನುರಿತಿದ್ದ ಬಲಿಷ್ಠ ಕೆಂಪು
ಚೀನಾದ ಬಳಿಯಿತ್ತು. ಅಲ್ಲದೇ, ಅತ್ಯಂತ ಎತ್ತ
ಹಿಮಚ್ಛಾದಿತ ಪ್ರದೇಶಗಳಲ್ಲೂ ಯುದ್ಧ ಮಾಡಿದ ಅ
ಅದಕ್ಕಿತ್ತು. ನಿರೀಕ್ಷೆಯಂತೆಯೇ ಕೆಂಪು ಸೇನೆ ಭಾ
ಸೈನ್ಯವನ್ನು ಹೀನಾಯವಾಗಿ ಸೋಲಿಸಿ ಓಡಿಸಿ
ಮ್ಯಾಕ್‌ಮಹೋನ್ ರೇಖೆಯನ್ನು ದಾಟಿ ಭಾರತದ
ನುಗ್ಗಿಬಿಟ್ಟಿತು. ಭಾರತದ ಸೈನ್ಯ ಬದುಕುಳಿದರೆ ಸಾಕೆಂ
ಅಲ್ಲಿಂದ ಓಡಿ ಬಂತು. ಇಡೀ ಅರುಣಾಚಲ ಪ್ರ
ಚೀನಾದ ವಶವಾಯಿತು. ಆ ಹೊತ್ತು ಮಾವೋ ಮ
ಮಾಡಿದ್ದರೆ ಭಾರತದ ರಾಜಧಾನಿ ದೆಹಲಿ
ಚೀನಾದ ಕೆಂಪು ಸೈನ್ಯ ಕೆಲವೇ ದಿನಗಳಲ್ಲಿ
ಪಡಿಸಿಕೊಳ್ಳಬಹುದಿತ್ತು. ಆದರೆ ಆ ಸಂದರ್ಭ
ಚೀನಾ ಅಧ್ಯಕ್ಷ ಮಾವೋ ಮತ್ತು ವಿದೇ
ವ್ಯವಹಾರಗಳ ಸಚಿವ ಚೌ ಎನ್ ಲಾಯ್ ತೋ
ಪ್ರಬುದ್ಧತೆ ನಿಜಕ್ಕೂ ಪ್ರಶಂಸನೀಯವಾದದ್ದು.
ನೆರೆಯ ದೇಶದೊಂದಿಗೆ ಯುದ್ಧಕ್ಕಿಳಿಯು
ತರವಲ್ಲ ಎಂದು ಬಗೆದಿದ್ದ ಆ ಇಬ್ಬರು ನಾಯ
ತಮ್ಮ ಸೈನ್ಯಕ್ಕೆ ವಾಪಸ್ಸು ಬರುವಂತೆ ಆ
ಕೊಟ್ಟರು. ಮತ್ತೆ ಕೆಂಪು ಸೇನೆ ಮ್ಯಾಕ್‌ಮಹ
ಲೈನ್ ಹತ್ತಿರ ಬಂದು ನಿಂತಿತು. ಮಾವೋ ಮಾ
ಮೊದಲೇ ಕೇಳಿದ್ದರೆ ನೆಹರೂಗೆ ಇಂಥ ಹೀನಾಯ ಸೋ
ನೋಡಬೇಕಾಗಿ ಬರುತ್ತಿರಲಿಲ್ಲ.

ಆವಾಗಲೂ ಈ ವಿವಾದ ಇತ್ಯರ್ಥಗೊಳ್ಳ
North East Frontier Agency ಎ
ಕರೆಯಲ್ಪಡುತ್ತಿದ್ದ ಈ ಪ್ರದೇಶವನ್ನು 1972ರಲ್ಲಿ ಅರುಣಾ
ಪ್ರದೇಶ ಎಂದು ಭಾರತ ಮರುನಾಮಕರಣ ಮಾ
ಆದರೆ, ಚೀನಾ ಮುದ್ರಿಸಿದ ನಕಾಶೆಗಳು ಇದನ್ನು
ಟಿಬೆಟ್ ಎಂದೇ ತೋರಿಸುತ್ತವೆ. 1981ರಲ್ಲಿ ಚೀ
ಅಧ್ಯಕ್ಷರಾಗಿದ್ದ ಡೆಂಗ್ ಕ್ಸಿಯಾವೋ ಪಿಂಗ್ ಮತ್ತೆ
ಶಾಂತಿಯುತವಾಗಿ ಮಾತುಕತೆಗಳ ಮೂಲಕ ಸಮಸ್ಯೆ
ಇತ್ಯರ್ಥ ಮಾಡುವುದಕ್ಕಾಗಿ ಭಾರತವನ್ನು ಒತ್ತಾಯಿಸಿ
ಎಂಟು ಸುತ್ತಿನ ಮಾತುಕತೆಗಳಾದರೂ ಯಾವುದೇ ಒಪ್ಪ
ಬರಲಿಲ್ಲ. 1988ರಲ್ಲಿ ಭಾರತದ ಪ್ರಧಾನಿ ಚೀನಾಕ್ಕೆ
ಕೊಟ್ಟು ಗಡಿ ಸಮಸ್ಯೆಯನ್ನು ಮಾತುಕತೆಗಳ ಮ
ಇತ್ಯರ್ಥ ಮಾಡುವುದಾಗಿ ಹೇಳಿ ಬಂದರು. ಆ
ಅದು ಅಷ್ಟಕ್ಕೆ ನಿಂತಿತು. 1993ರಲ್ಲಿ ಇಂಡೋ-
ಒಪ್ಪಂದವು ಸಮಸ್ಯೆಯ ಬಗ್ಗೆ ಚರ್ಚಿಸುವುದಕ್ಕಾಗಿ
ಕಾರ್ಯಸಮಿತಿ ರಚಿಸುವುದಕ್ಕೂ ಅವಕಾಶ
ಕೊಟ್ಟಿತು. ಅದರಿಂದಲೂ ಹೆಚ್ಚೇನೂ ಪ್ರಯೋಜನವಾ
ಇದೇ ರೀತಿಯಲ್ಲಿ 1996ರಲ್ಲಿ ಮತ್ತೊಂದು ಒ
ಮಾಡಿಕೊಂಡು ಎರಡೂ ದೇಶಗಳ ನಡ
ಸಂಘರ್ಷಮಯ ವಾತಾವರಣವನ್ನು ತಿಳಿಗೊಳಿಸು
ವಿಶ್ವಾಸವೃದ್ಧಿ ಕ್ರಮಗಳನ್ನು ಕೈಗೊಳ್ಳುವುದಕ್ಕೆ ನಿರ್ಧ
ಲಾಯಿತು. ಅಲ್ಲಿಂದಾಚೆಗೆ ಎರಡೂ ದೇಶಗಳ
ಪಡೆಗಳ ನಡುವೆ ಚಿಕ್ಕಪುಟ್ಟ ಘರ್ಷಣೆಗಳು ನಡೆಯು
ಇವೆ. ಅದೇ ರೀತಿಯಲ್ಲಿ ಎರಡೂ ದೇಶಗಳ ರಾಜಕ
ನಾಯಕತ್ವಗಳ ನಡುವೆ ಮಾತುಕತೆಗಳೂ ನಡೆಯು
ಆದರೆ ಸಮಸ್ಯೆ ಮಾತ್ರ ಹಾಗೆಯೇ ಉಳಿದಿದೆ.
ಉದ್ಭವವಾಗಿರುವುದು ಅಂತಹ ಒಂದು ಕ
ಭಾರತವಂತೂ ಮಾತೆತ್ತಿದರೆ 1913-14ರ ಶಿಮ್ಲಾ ಒಪ್ಪ
ನಾವು ಬದ್ಧವಾಗಿದ್ದೇವೆ ಎಂದು ಹೇಳುತ್ತಿರುತ್ತದೆ. ಭಾ
ಬ್ರಿಟಿಷ್ ಸಾಮ್ರಾಜ್ಯವನ್ನು ಇನ್ನಷ್ಟು ವಿಸ್ತರಿಸಬೇ
ಉದ್ದೇಶದಿಂದ ಮ್ಯಾಕ್‌ಮಹೋನ್ ಎಳೆದ ಆ ಗಡಿ
ಭಾರತಕ್ಕೆ ಅನುಕೂಲವಾಗಿರುವುದರಿಂದ, ಆ ರೇಖೆ
ಶಿಮ್ಲಾ ಒಪ್ಪಂದ ಮಾನ್ಯ ಮಾಡಿರುವುದರಿಂದ ಅ
ಭಾರತ ಸಹಜವಾಗಿ ಎತ್ತಿಹಿಡಿಯುತ್ತದೆ. ಆದರೆ,
ಆ ಒಪ್ಪಂದಕ್ಕೆ ಅಂದೂ ಒಪ್ಪಿರಲಿಲ್ಲ, ಇಂದೂ
ಇದು ಸಮಸ್ಯೆ ಜೀವಂತವಾಗಿರುವುದಕ್ಕೆ ಕಾರಣವಾ

ಇಲ್ಲಿ ಗಮನಿಸಬೇಕಾದ ಒಂದು ವಿಚಾರ ಎ
ಅರುಣಾಚಲ ಪ್ರದೇಶ ಯಾರಿಗೆ ಸೇರಬೇಕೆಂದು ಎ
ದೇಶಗಳು ಕಿತ್ತಾಡಿಕೊಳ್ಳುತ್ತಿವೆಯಾದರೂ 'ನೀವು ಯ
ದೇಶಕ್ಕೆ ಸೇರಬಯಸುತ್ತೀರಿ?' ಎಂದು ಅರುಣಾಚಲ ಪ್ರ
ಜನರನ್ನು ಯಾರೂ ಕೇಳುತ್ತಿಲ್ಲ. ಅವರು ಭಾರತದೊ
ಇರಲು ಇಚ್ಛೆ ಪಡುತ್ತಾರಾ, ಚೀನಾದೊಂದಿಗೆ ಹೋ
ಬಯಸುತ್ತಾರಾ ಅಥವ ಸ್ವತಂತ್ರವಾಗಿರಲು ಬಯಸು
ಎಂಬುದನ್ನು ಕೇಳುವ ಕನಿಷ್ಠ ಕಾಳಜಿಯನ್ನು ಎ
ದೇಶಗಳು ಇಲ್ಲಿಯತನಕ ಪ್ರದರ್ಶಿಸಿಲ್ಲ. ಇಬ್ಬರು ದೊಡ್ಡ
ಸೇರಿಕೊಂಡು ಮೂರನೇಯ ಅಮಾಯಕ ಕುರಿಯೊ
ಭವಿಷ್ಯವನ್ನು ಬರೆಯುತ್ತಿದ್ದಾರೆ!

● ಕುಮಾರ್ ಬುರಡಿ



ಪರಿಹಾರ ಕಾರ್ಯ

...ತಿಭೂತವೂ, ಚೆಡ್ಡಿ ಕಾಟವೂ....

...ಅಂತೂಇಂತೂ ಪರಿಹಾರ ಕಾರ್ಯ ಶುರುವಾಗಿದೆ. ...ರಕ್ಷಿಂತ ಜನರೇ ಆಸ್ಥೆ ವಹಿಸಿ ಸಾಕಷ್ಟು ಪರಿಹಾರ ...ಗ್ರಿಗಳನ್ನು ನೀಡುತ್ತಿದ್ದು, ಸಂತ್ರಸ್ತರಿಗೆ ಇದು ಕೊಂಚ ...ವಾಗುತ್ತಿದೆ. ಪರಿಹಾರ ಕಾರ್ಯಕ್ಕೆ ನಿಯೋಜನೆಗೊಂಡ ...ತೀಕ ಸರ್ಕಾರಿ ನೌಕರರು ಮಾನವೀಯ ನೆಲೆಯಲ್ಲಿ ...ಯುತ್ತಿರುವುದರಿಂದ ಸಂತ್ರಸ್ತರಿಗೆ ಆಹಾರ ಧಾನ್ಯ ..., ಸ್ಟೋವ್, ಸೀಮೆಎಣ್ಣೆ-ಇತ್ಯಾದಿ ನಿತ್ಯದ ಅಗತ್ಯಗಳು ...ಮಟ್ಟಿಗಾದರೂ ಪೂರೈಕೆಯಾಗುತ್ತಿವೆ.

...ಆದರೆ ಬಿಜೆಪಿಗಳು ಪರಿಹಾರ ಕಾರ್ಯದಲ್ಲೂ ಮೂಗು ...ಸಿ ರಾಜಕೀಯ ಶುರು ಮಾಡಿದ್ದು ತೀರಾ ಅಸಹ್ಯಕರ ...ದೆ. ಪ್ರತಿ ಹಳ್ಳಿಯ ಬೆಳೆಹಾನಿ, ಮನೆಹಾನಿ ಇತ್ಯಾದಿಗಳನ್ನು ...ಲಿಸಿ ಅಂದಾಜು ನಷ್ಟ ತಯಾರಿಸಲು ಪ್ರತಿ ಹಳ್ಳಿಗೆ ... ನೋಡಲ್ ಅಧಿಕಾರಿಯನ್ನು ನೇಮಿಸಲಾಗಿದೆ. ಈ ...ಡಲ್ ಅಧಿಕಾರಿಗೆ ಗ್ರಾಮ ಪಂಚಾಯತ್ ಕಾರ್ಯ ..., ತಲಾಟಿಗಳು ನೆರವು ನೀಡುತ್ತಾರೆ. ಇವರೆಲ್ಲ ಸೇರಿ ...ವಾದ ಅಥವಾ ಭಾಗಶಃ ನಾಶವಾದ ಮನೆ, ಬೆಳೆಗಳಿಗೆ ...ಗದಿ ಮಾಡುತ್ತಾರೆ. ಇಂತಹ ಕಷ್ಟದ ಸಮಯದಲ್ಲಿ ...ಹ ಭ್ರಷ್ಟ ಅಧಿಕಾರಿಯಿದ್ದರೂ ಕೊಂಚವಾದರೂ ಪ್ರಾಮಾ...ಣಿಕತೆಯಿಂದ ಕೆಲಸ ಮಾಡಿ ಸಂತ್ರಸ್ತರಿಗೆ ಅರ್ಹ ಪರಿಹಾರ ...ವುವಂತೆ ಮೌಲ್ಯೀಕರಣ (valuation) ಮಾಡುತ್ತಾನೆ. ...ಬಾರಿಯೂ ಅಧಿಕಾರಿಗಳು ಹಾಗೇ ಮಾಡುತ್ತಿದ್ದರೋ ...ಏ? ಆದರೀಗ ಬಿಜೆಪಿಗಳು ಅಡ್ಡ ನುಸುಳಿ ಇಲ್ಲೂ ...ಕೀಯ ನಡೆಸುತ್ತಿವೆ. ಮೂರು ತಿಂಗಳೊಳಗೆ ಗ್ರಾಮ ...ಾಯತ್ ಚುನಾವಣೆಗಳು ಬರಲಿವೆ. ಚೆಡ್ಡಿ ಬಿಜೆಪಿಗಳು ಪರಿಹಾರಕಾರ್ಯವನ್ನೇ ಚುನಾವಣಾ ತಯ್ಯಾರಿಯ ...ಮನ್ನಾಗಿ ಮಾಡಿಕೊಂಡು ಪರಿಹಾರ ನಿಗದಿಯಲ್ಲಿ ...ತಮ್ಯ ಎಸಗುತ್ತಿದ್ದಾರೆ. ಬಿಜೆಪಿ ಕಾರ್ಯಕರ್ತರು, ...ಲಿಗರು ಸಂತ್ರಸ್ತರಾಗಿದ್ದರೆ ಅವರಿಗೆ ಹೆಚ್ಚಿಗೆ ಪರಿಹಾರ ... ಎಂದು ಬೇಕಾಬಿಟ್ಟಿ ವ್ಯಾಲ್ಯೂವೇಷನ್ ಮಾಡಿಸುತ್ತಿದ್ದಾರೆ. ...ಕಚ್ಚಾಮನೆ ಬಿದ್ದಿದ್ದರೆ ಸಿಗುವುದು ಕೇವಲ 2-3 ಸಾವಿರ ...ರೂ. ಅಂತಹದರಲ್ಲಿ ಈ ಬಿಜೆಪಿಗಳು ತಮಗಾಗದವರ ...ದ್ಧ ತಮಗೆ ಓಟು ಮಾಡದವರ ವಿರುದ್ಧ ಮಸಲತ್ತು ... ಜುಜುಬಿ ಪರಿಹಾರ ಮೊತ್ತ ಬರೆಸುತ್ತಿವೆ. ಸರ್ಕಾರಿ ...ಾರಿಗಳ ಜೊತೆ ಈ ಬಿಜೆಪಿ ಮನೆಹಾಳರು ಮನೆಮನೆಗೇ ...ಗುತ್ತಿದ್ದಾರೆ. ತಾವೇ ಪರಿಹಾರ ನೀಡುತ್ತಿದ್ದೇವೆ ಎಂಬಂತೆ ...ಸು ಕೊಡುವುದು, ಸಿಕ್ಕಷ್ಟು ಕಮಿಷನ್ ಬಾಚುವುದು, ...ಪಿ ಪ್ರಚಾರ ನಡೆಸುವುದು-ಇಂತಹ ಹಲ್ಕಾ ಕೆಲಸಗಳಲ್ಲಿ ...ಸುಗಿರುವ ಬಿಜೆಪಿಗಳಿಗೆ ಸದ್ಯದಲ್ಲೇ ಗೂಸಾ ಬಿದ್ದರೂ ...ರ್ಯವಿಲ್ಲ.

..."ಯಾವುದೇ ಗ್ರಾಮಕ್ಕೆ ಹೋದರೂ ಮೊದಲು ಬಿಜೆಪಿ ...ಖಂಡರನ್ನು ಕಾಣಿ. ಅವರು ಹೇಳಿದಂತೆ ಪರಿಹಾರ ... ಮಾಡಿ" ಎಂಬ ಮೌಖಿಕ ಆದೇಶವನ್ನು ಯಡ್ಡಿಯ ... ಸರ್ಕಾರ ಹೊರಡಿಸಿರುವುದರಿಂದ ಅಧಿಕಾರಿಗಳೂ ...ಾಯಕರಾಗಿದ್ದಾರೆ. ಪರಿಹಾರ ಕಾರ್ಯದಲ್ಲೂ ರಾಜಕೀಯ ...ಸುತ್ತಾರೆಂದರೆ, ಅವರು ಹೊಟ್ಟೆಗೆ ಅನ್ನ ತಿನ್ನದವರೇ.... ...ಇನ್ನೊಂದು ಕಡೆ ಗಂಜಿಕೇಂದ್ರಗಳ ಅವ್ಯವಸ್ಥೆ. ಇವು ...ಚಾರಕ್ಕೆಂಬಂತೆ ಶುರುವಾಗಿದ್ದವು. ಪ್ರಕೃತಿ ಜಾತಿ ಧರ್ಮ ...ೇ ಎಲ್ಲರನ್ನೂ, ಎಲ್ಲವನ್ನೂ ಭಗ್ನಗೊಳಿಸಿರುವ ಈ ... ಜನರ ನಡುವಿನ ಜಾತಿಗೋಡೆಗಳು ಉರುಳಬೇಕಿತ್ತು, ... ದುರದೃಷ್ಟಕರ ವಿಷಯವೆಂದರೆ ಈಗಲೂ ಅಲ್ಲಲ್ಲಿ ...ಸ್ಪೃಶ್ಯತೆ ಕಾಣಿಸಿಕೊಂಡಿದೆ. ಸರ್ಕಾರಿ ಶಾಲೆಗಳಲ್ಲಿ ಬಿಸಿ ...ಟ ತಯಾರಿಸುವ ಕೆಲ ದಲಿತ, ಹಿಂದುಳಿದ ಮಹಿಳೆ ...ನ್ನು ಗಂಜಿಕೇಂದ್ರದ ಕೆಲಸಕ್ಕೂ ಹಾಕಲಾಗಿತ್ತು, ಕೆಲ ...ಜಾತಿಯ ಜನರು ಈ ಕಾರಣಕ್ಕಾಗಿ ಗಂಜಿಕೇಂದ್ರಗಳಿಗೆ ...ಬರಲೇ ಇಲ್ಲ, ಇನ್ನು ಕೆಲವರು ತಮ್ಮ ಓಣಿಯ ...ಸ್ಥಾನಗಳಲ್ಲೇ ಗಂಜಿಕೇಂದ್ರ ಸ್ಥಾಪನೆ ಮಾಡಿಸಿಕೊಂಡರು. ...ಲ್ಲಿ ದಲಿತರು, ಹಿಂದುಳಿದವರಿಗೆ ಅವಕಾಶ ...ಂತಾಗಿತ್ತು.

...ಲವು ಕಡೆ ಆಹಾರ ಪಡೆಯುವ ಪೈಪೋಟಿಯಲ್ಲಿ ...ನ ಮೇಲೆ ಹಲ್ಲೆಗಳೂ ಆದವು. ಬದುಕೇ ಮೂರಾಬಟ್ಟೆ ...ದರೂ, ಮಠ-ಮಠಗಳೆಲ್ಲ ನಾಮಾವಶೇಷವಾದರೂ ...ೋಡೆ ಮಾತ್ರ ಭದ್ರವಾಗಿಯೇ ನಿಂತಿದೆ.

...ಲು ಅಪಸ್ವರಗಳ ನಡುವೆಯೂ ಸದ್ಯದ ಪರಿಹಾರ ...ರ ಸಂತ್ರಸ್ತರಿಗೆ ಗುಟುಕು ಜೀವ ನೀಡಿದೆ.

● ಆಲಬಾಳ

ಹರಿಕತೆ, ಅಸಾಮಾನ್ಯ ದೈತ್ಯ ಪ್ರತಿಭೆಯಿಂದ ಸಾಧ್ಯ!

ಕರ್ನಾಟಕದಲ್ಲಿ ಯಡ್ಡಿ ಆಡಳಿತ ಯರ್‍ರಾಬಿರ್‍ರಿ ಸಾಗಿದೆ. ಯಡ್ಡಿ ಕಡೆಯವರು ಯಾರಾದರೂ ಬಂದು ಕಾಪಾಡಿಯಾರೆಂದು ಕಾದೂಕಾದೂ ಸುಸ್ತಾದ ಸಂತ್ರಸ್ತರು ನೀರಿಳಿದ ಜಾಗದಲ್ಲಿ ಸುಧಾರಿಸಿಕೊಳ್ಳುತ್ತಿದ್ದಾರೆ. ಇಂಥ ಸಮಯದಲ್ಲಿ ಬಳ್ಳಾರಿ ಸೀಮೆಯ ಭೀಕರ ಬದುಕನ್ನು ಭೀಕರವಾಗಿಯೇ ದಾಖಲಿಸುತ್ತಿದ್ದ ದೈತ್ಯ ಲೇಖಕ ಕುಂ. ವೀರಭದ್ರಪ್ಪನ ಪುಸ್ತಕವೊಂದು ಬೆಂಗಳೂರಿನ ಯವನಿಕಾದಲ್ಲಿ ಬಿಡುಗಡೆಯಾಯ್ತಂತಲ್ಲಾ, ಕೃತಿ ಕುರಿತು ಮಾತನಾಡಲು ಬಂದಿದ್ದ ನರಹಳ್ಳಿ ಬಾಲಸುಬ್ರಹ್ಮಣ್ಯ ಎಂಬ ಪೀತಿಪಾತ್ರ ವಿಮರ್ಶಕನನ್ನು ನೋಡಿದ ಕೂಡಲೇ ಸಾಹಿತ್ಯಲೋಕದ ಕಿಡಿಗೇಡಿಗಳು "ಈ ನರಿಹಳ್ಳಿಯ ಬಾಲ ತನ್ನ ಊರೆಸರನ್ನ ನರಹಳ್ಳಿ ಎಂದು ಬದಲಾಯಿಸಿಕೊಂಡಿದ್ದೇಕೆ? ಬಹುಶಃ ಕೃತಿಕಾರನ ನರಹಿಡಿದು ವಿಮರ್ಶೆ ಮಾಡುವ ಸಲುವಾಗಿ ನರಹಳ್ಳಿ ಎಂದು ಬದಲಾಯಿಸಿಕೊಂಡಿರಬಹುದು" ಎಂದು ಕಟಕಿಯಾಡುತ್ತಿರುವಾಗಲೇ, ನರಹಳ್ಳಿ ಕುಂ.ವಿ. ನರವನ್ ಅಗುವಂತೆ ಹೊಗಳಿಬಿಟ್ಟರಂತಲ್ಲಾ, ಇದರಿಂದ ಕೃತಾರ್ಥರಾದ ಕುಂ.ವಿ.ಎರಡೂ ಕೈಯೆತ್ತಿ ಮುಗಿದರಂತಲ್ಲಾ, ಥೂತ್ತೇರಿ!


* * * * * *

ಪುಸ್ತಕ ಬಿಡುಗಡೆಗಾಗಿ ಬಂದಿದ್ದ ಮತ್ತೊಬ್ಬ ಅತಿಥಿ ಅಗ್ರಹಾರ ಕೃಷ್ಣಮೂರ್ತಿ, ಕುಂ.ವಿ. ಹೊಗಳಿಕೆಯನ್ನು ಮುಂದುವರೆಸುತ್ತಾರೆಂದು ಕಾದಿದ್ದವರಿಗೆ ಆಘಾತವಾಗುವಂತೆ "ಐವತ್ತು ಪೇಜಿನಲ್ಲಿ ಬರೆಯಬಹುದಾದ ಕಾದಂಬರಿಯನ್ನು ಇನ್ನೂರು ಪುಟ ಎಳೆದಿದ್ದಾರೆ. ಹಾಗಾಗಿ ಇದೊಂದು ಹರಿಕಥಾ ಪ್ರಸಂಗ" ಎಂದುಬಿಟ್ಟರಂತಲ್ಲಾ. ಆ ಕೂಡಲೇ ಕುಂ.ವಿ. ಅಭಿಮಾನಿಗಳು "ಅಗ್ರಹಾರದಿಂದ ಬಂದಿರುವ ಈ ಬ್ರಾಹ್ಮಣರ ಕೃಷ್ಣಮೂರ್ತಿ, ನಮ್ಮ ಶೂದ್ರ ಸಾಹಿತಿಯ ಬಗ್ಗೆ ಇನ್ನೇನು ತಾನೆ ಹೇಳಲು ಸಾಧ್ಯ. ಅಷ್ಟಕ್ಕೂ ಇಂಥ ಬಲಪಂಥೀಯರನ್ನೆಲ್ಲಾ ನಮ್ಮ ಶೂದ್ರ ಸಾಹಿತ್ಯ ಸಭೆಗೆ ಕರೆಸಬಾರದು" ಎಂದು ಗೊಣಗಿದರಂತಲ್ಲಾ. ಆಗ ಅಗ್ರಹಾರ "ಆದ್ರೆ ಹರಿಕತೆ ಮಾಡುವುದು ಸುಲಭ ಸಾಧ್ಯವಿಲ್ಲ, ಅಸಾಮಾನ್ಯ ದೈತ್ಯ ಪ್ರತಿಭೆಗಳಿಗೆ ಮಾತ್ರ ಸಾಧ್ಯ. ನಮ್ಮ ಕುಂ.ವಿ. ಅಂಥ ದೈತ್ಯ" ಎಂದಾಗ ಕುಂ.ವಿ. ಅಭಿಮಾನಿ ಪಡೆ ಥಂಡಾ ಹೊಡೆಯಿತಂತಲ್ಲಾ, ಥೂತ್ತೇರಿ!!

* * * * * *

ಥೂತ್ತೇರಿ

▸ ಯಾಹೂ



ವಿವೇಕ ರೈ ಕನ್ನಡದ ದೊಡ್ಡ ವಿದ್ವಾಂಸ. ದ.ಕ.ದಲ್ಲಿದ್ದರೂ ದಲಿತರ ಬಗ್ಗೆ ಚಿಂತಿಸಿದವರು. ಅವರ ಒಡನಾಟ ಬಯಸಿದವರು. ತುಳು-ಕನ್ನಡದ ನಡುವೆ ತೂಗುಸೇತುವೆಯಾದವರು. ಜಾನಪದ ವಿದ್ವಾಂಸರು. ಉಪಕುಲಪತಿಗಳಾಗಿದ್ದವರು. ಇಂತಹ ಅಪರೂಪದ ವಿದ್ವಾಂಸ ಕರ್ನಾಟಕ ತೊರೆದು ಜರ್ಮನಿಗೆ ಹೋಗಿ ಕನ್ನಡದ ಕೆಲಸವನ್ನ ಕಂಟಿನ್ಯೂ ಮಾಡುತ್ತಾರಂತಲ್ಲಾ. ಅವರ ಬೀಳ್ಕೊಡುಗೆ ಸಮಾರಂಭಕ್ಕೆ ವಿವೇಕ ಬಳಗ ಎಂಬ ಟೀಮು ಅವಿವೇಕ ಪ್ರದರ್ಶಿಸಿ ಹಂಪಾನ ಕರೆಸಿದ್ದು ಸುತರಾಂ ಸರಿಯಿಲ್ಲವೆಂದು ವಿವೇಕಾಭಿಮಾನಿಗಳು ಶಾನೆ ಗೊಣಗಿಕೊಂಡರಂತಲ್ಲಾ. ವಿವೇಕದಿಂದ ಬರೆದ ಚಿತ್ರವನ್ನು ಅವಿವೇಕದ ಮಸಿ ಕೆಡಿಸಿತು ಎಂಬ ನೂತನ ಗಾದೆಯಂತೆ ಈ ಹಂಪಾನ ಹೆಸರನ್ನು ಹಾಳುಮಾಡಿಕೊಂಡು ಬರೋಬ್ಬರಿ ಕಾಲುಶತಮಾನವಾಗಿದೆ. ಜೀವನದಲ್ಲಿ ಈತ ಮಾಡಿರುವ ಒಂದೇ ಒಂದು ಒಳ್ಳೆಯ ಕೆಲಸ ಕಮಲಾರನ್ನ ಲವ್ ಮಾಡಿ ಮದುವೆಯಾಗಿದ್ದು. ಆದ್ದರಿಂದ ಈತನನ್ನ ಅಂತರ್ಜಾತಿ ವಿವಾಹಿತರ ಸಭೆಗೆ ಕರೆಸಿ ಹಾರ ಹಾಕಬೇಕೇ ಹೊರತು, ವಿವೇಕ ರೈ ತರಹದವರ ಸಭೆಗಳಿಗೆ ಕರೆಸಬಾರದು. ಕರೆಸಿದರೂ ಮೈಕ್ ಕೊಡಬಾರದು. ಏಕೆಂದರೆ ಹಂಪಾನಾರೇ ಹೇಳಿರುವಂತೆ ರಾಜ್ಯದ ಮೈಕಿಗೆಲ್ಲಾ ಅವರ ಹೆಸರು ಗೊತ್ತಿದೆಯಂತಲ್ಲಾ ಥೂತ್ತೇರಿ!!

* * * * * *

ಯರ್‍ರಾಬಿರ್‍ರಿ ಯಡ್ಡಪ್ಪನಿಂದ ಬರೋಬ್ಬರಿ ಹತ್ತು ಕೋಟಿ ಗುಂಜಿಕೊಂಡ ಮಂತ್ರಾಲಯದ ಮಾಂತ್ರಿಕರು, ಅದು ಯಾತಕ್ಕೂ ಸಾಲದು ಎಂದು ಬೆಂಗಳೂರಿಗೆ ಬಂದು ಕುಳಿತಿದ್ದಾನಂತಲ್ಲಾ. ಪ್ರವಾಹಕ್ಕೆ ಸಿಕ್ಕ ಮಂಗ ಮರಕ್ಕೆ ಹಾರಲು ಮರಿಯ ಡುಬ್ಬವನ್ನೇ ಬಳಸಿಕೊಂಡಂತೆ ಸುಯತೀಂದ್ರ ತೀರ್ಥರು ಮಠದ ಗೋಪುರದ ಮೇಲಿಂದ ಹೆಲಿಕಾಪ್ಟರ್‌ಗೆ ಹಾರಿ, ಬೆಂಗಳೂರಲ್ಲಿ ಇಳಿದನಂತರ ಸುಮ್ಮನೆ ಕೂರುವುದಕ್ಕಿಂತಲೂ ಕಾಣಿಕೆ ಸಂಗ್ರಹಿಸಿದರೆ ಹೇಗೆ ಎಂದು ವಿ.ಕ. ಭಟ್ಟನಿಗೊಂದು ಸುದ್ದಿ ಮುಟ್ಟಿಸಿದರಂತಲ್ಲಾ. ವಿ.ಕ. ಭಟ್ಟ ಕೂಡಲೇ ತನ್ನ ಎಂದಿನ ಕರಪತ್ರದಲ್ಲಿ "ನೋಡಿ, ನೋಡಿ, ಇಂದೇ ಕಡೇ ದಿನ. ಸಾಕ್ಷಾತ್ ರಾಘವೇಂದ್ರನೇ ಧರೆಗಿಳಿದು ಬೆಂಗಳೂರಿನ ಜಯನಗರದ ಐದನೇ ಗಲ್ಲಿಯಲ್ಲಿ ಕುಳಿತಿದ್ದಾರೆ. ಭಕ್ತಾದಿಗಳು ತಮ್ಮ ಕೈಲಿದ್ದುದನ್ನು ಕೊಟ್ಟು ಕಾಲಿಗೆ ಬಿದ್ದು ಬನ್ನಿ" ಎಂದು ಹೊರಟೇಬಿಟ್ಟನಂತಲ್ಲಾ ಥೂತ್ತೇರಿ!!


* * * * * *

ಆಂಧ್ರ ಪ್ರದೇಶದಿಂದ ಕರ್ನಾಟಕಕ್ಕೆ ಬಂದು ಕುಳಿತ ಸುಯತೀಂದ್ರನ ಸಣ್ಣ ಬುದ್ಧಿಯಿಂದ ರೋಸಯ್ಯ ಸಮಾಧಾನಗೊಂಡು "ಅಂತೂ ನಮಗೆ ಮಂತ್ರಾಲಯದ ರೋಸು ಕಳೆಯಿತು" ಎಂದು ನಿಟ್ಟುಸಿರು ಬಿಡುತ್ತಿರುವಾಗ ಇತ್ತ ಜಯನಗರದ ವಿಪ್ರವರೇಣ್ಯರು ಕೈಯಲ್ಲಿ ಚಿಲ್ಲರೆ ಕಾಸಿಡಿದು ಐದನೇ ಗಲ್ಲಿಗೆ ಹೋದಾಗ, ಸುಯತೀಂದ್ರರ ಸುತ್ತಲಿದ್ದವರು "ಗುರುಗಳು ಯಾವಾಗೆಂದರೆ ಆವಾಗ ಸಿಗುವುದಿಲ್ಲ. ಬೆಳಿಗ್ಗೆ ಸ್ನಾನ, ಪೂಜೆ, ನಂತರ ಉಪಾಹಾರ ಆನಂತರ ಶಯ್ಯಾಗೃಹ ಪ್ರವೇಶ ಮಾಡುತ್ತಾರೆ. ನಂತರ ಮಧ್ಯಾಹ್ನ ಭೋಜನ ಮಾಡಿ, ವಿಶ್ರಾಂತಿ ತೆಗೆದುಕೊಳ್ಳುತ್ತಾರೆ. ಆನಂತರ ವಾಯುವಿಹಾರ. ಅದೆಲ್ಲಾ ಮುಗಿದನಂತರ ರಾತ್ರಿ ಊಟವನ್ನು ವರ್ಜಿಸಿರುವುದರಿಂದ ಊಟದಷ್ಟೇ ಫಲಾಹಾರ, ಕ್ಷೀರ ಮತ್ತು ಹಣ್ಣಿನೊಂದಿಗೆ ದಿನವನ್ನು ಮುಗಿಸುವುದರಿಂದ, ಈ ನಡುವೆ ಬಿಡುವು ಸಿಕ್ಕಾಗ ನೀವು ಬಂದು ಕಾಣಿಕೆ ಕೊಡಬಹುದು. ಅದುಬಿಟ್ಟು ಯಾವಾಗೆಂದರೆ ಆವಾಗ ಕಾಣಿಕೆ ಕೊಡಲಾಗುವುದಿಲ್ಲ. ಅದಕ್ಕೆಲ್ಲಾ ನಿಗದಿಯಾದ ಸಮಯವಿದೆ" ಎಂದರಂತಲ್ಲಾ. ಭಿಕ್ಷಾರ್ಥಿಗಳಲ್ಲೂ ಇರುವ ಅಹಂಕಾರ ಗ್ರಹಿಸಿದ ಗುರುಭಕ್ತರು ಗುರುಗುಟ್ಟಿಕೊಂಡು ಹೋದರಂತಲ್ಲಾ, ಥೂತ್ತೇರಿ!!

ರಾಜ್ಯದ ಜನರು ಸಾಯ್ತಿದ್ದಾಗ ಆರೋಗ್ಯ ಮಂತ್ರಿ ಏನು ಮಾಡ್ತಿದ್ದ?

ಒಂದು ಕಡೆ ಪ್ರವಾಹದಿಂದಾಗಿ ಉತ್ತರ ಕರ್ನಾಟಕದ ಸಾಮಾನ್ಯ ಜನರು ಸಾವು ಬದುಕಿನ ನಡುವೆ ಹೋರಾಡುತ್ತಿದ್ದರೆ ಇನ್ನೊಂದು ಕಡೆ ಸದ್ದಿಲ್ಲದೆ ಹಂದಿ ಜ್ವರದಿಂದ ಸಾಯುತ್ತಿರುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಆದರೆ ರಾಜ್ಯ ಸರ್ಕಾರದಲ್ಲಿ ಆರೋಗ್ಯ ಸಚಿವನಾಗಿ ಜನರ ಆರೋಗ್ಯದ ಜವಾಬ್ದಾರಿ ಹೊಂದಿರುವ ಶ್ರೀರಾಮುಲು ಎಂಬ ರೋಗಿಷ್ಟ ಮಂತ್ರಿಯ ವರ್ತನೆ ನೋಡಿದವರು ಮಾತ್ರ ಇವನೇನು ಆರೋಗ್ಯ ಸಚಿವನೋ ಅಥವಾ ಅನಾರೋಗ್ಯ ಸಚಿವನೋ ಎಂದು ಕೇಳುತ್ತಿದ್ದಾರೆ. ನಮ್ಮ ರಾಜ್ಯ ಇಂದು ಎಂದಿಲ್ಲದ ಸಂಕಷ್ಟಕ್ಕೆ ಸಿಲುಕಿರುವ ಸಂದರ್ಭದಲ್ಲಿ ಅದರಲ್ಲೂ ನೆರೆ ಹಾವಳಿಯಿಂದ ತತ್ತರಿಸಿರುವ ಕಡೆಗಳಲ್ಲಿ ಜನರಿಗೆ ಒಂದೆಡೆ ಊಟ ಬಟ್ಟೆ ವಸತಿಗಳ ಚಿಂತೆಯ ಜೊತೆಗೇ ಎಲ್ಲಿ ಯಾವ ಸಾಂಕ್ರಾಮಿಕ ರೋಗಗಳು ಆವರಿಸಿಕೊಂಡು ಜನರ ಬದುಕನ್ನು ನರಕವನ್ನಾಗಿಸಿ ಮಾಡಿಬಿಡುತ್ತವೋ ಎಂಬ ಆತಂಕ ಶುರುವಾಗಿದೆ. ಅದೂ ಇಡೀ ದೇಶದಲ್ಲೇ ಮಹಾರಾಷ್ಟ್ರವನ್ನು ಬಿಟ್ಟರೆ ಹಂದಿಜ್ವರದಿಂದ ಹೆಚ್ಚು ಸಾವುನೋವು ಸಂಭವಿಸಿರುವುದು ಕರ್ನಾಟಕದಲ್ಲೇ ಎನ್ನುವುದನ್ನು ನೋಡಿದಾಗ ಇದರ ತೀವ್ರತೆ ಏನು ಎಂದು ತಿಳಿಯುತ್ತದೆ. ಹಂದಿ ಜ್ವರ ಶುರುವಾದ ಮೊದಮೊದಲಿಗೆ ಅದರ ಬಗ್ಗೆ ಹುಯಿಲೆಬ್ಬಿಸಿದವರು ಇಂದು ಅದರಿಂದ ಯಾರು ಬದುಕಿದರು ಯಾರು ಸತ್ತರು ಎಂದು ನೋಡುವ ಗೋಜಿಗೇ ಹೋಗುತ್ತಿಲ್ಲ.

ಈಗಾಗಲೇ ಕರ್ನಾಟಕದಲ್ಲಿ ಅಧಿಕೃತ ದಾಖಲೆಗಳ ಪ್ರಕಾರ 112 ಮಂದಿ ಹಂದಿ ಜ್ವರಕ್ಕೆ ಬಲಿಯಾಗಿದ್ದಾರೆ. ಇಡೀ ದೇಶದಲ್ಲಿ ಬಲಿ ಆಗಿರುವವರ ಸಂಖ್ಯೆ 396ನ್ನು ದಾಟಿದೆ. ಇಡೀ ದೇಶದಲ್ಲಿ ಈ ಹಂದಿಜ್ವರ ಎಂಬ ಎಚ್1ಎನ್1 ವೈರಸ್ ಸೋಂಕು ತಗುಲಿಸಿಕೊಂಡವರು 11,000 ಇದ್ದರೆ ಅದರಲ್ಲಿ ಕರ್ನಾಟದವರ ಸಂಖ್ಯೆಯೇ ಒಂದು ಸಾವಿರವನ್ನು ದಾಟಿದೆ! ಇವರಲ್ಲಿ ಗಣನೀಯ ಸಂಖ್ಯೆಯ ಜನರು ಬೀದರ್, ಗುಲ್ಬರ್ಗ, ಗದಗಗಳಲ್ಲಿದ್ದಾರೆ. ಇದೀಗ ನೆರೆಯಿಂದ ಜನರು ಪಡಿಪಾಟಲುಪಡುತ್ತಾ ಇರುವ ಸಂದರ್ಭದಲ್ಲಿ ಸಣ್ಣ ಜ್ವರಕ್ಕೂ ಸರಿಯಾದ ಔಷಧಿ ಮಾತ್ರೆಗಳು ದೊರೆಯದ ಸ್ಥಿತಿಯಲ್ಲಿ ಹಂದಿಜ್ವರದಂತ ಸಾಂಕ್ರಾಮಿಕ ಕಾಯಿಲೆ ಬಹು ಬೇಗನೆ ಹರಡುವ ಎಲ್ಲಾ ಸಾಧ್ಯತೆಗಳಿರುತ್ತವೆ. ಇಂತಹ ಸಂದರ್ಭಗಳಲ್ಲಿ ಹೆಚ್ಚಿನ ಹೊಣೆಗಾರಿಕೆ ಹೊರಬೇಕಾದದ್ದು ಆರೋಗ್ಯ ಸಚಿವಾಲಯ. ಆರೋಗ್ಯ ಸಚಿವನಾದವನು ಇದರ ಬಗ್ಗೆ ನಿಗಾ ವಹಿಸಿ ಅಗತ್ಯ ಕ್ರಮಗಳನ್ನು ಸರ್ಕಾರದಿಂದ ತೆಗೆದುಕೊಳ್ಳ ಬೇಕಿರುತ್ತದೆ. ಆತಂಕಿತ ಜನರಿಗೆ ಧೈರ್ಯ ಹೇಳಬೇಕಾಗಿರು ತ್ತದೆ. ಆದರೆ ಈ ರಾಮುಲು ಯಾವ ಸ್ಥಿತಿಯಲ್ಲಿದ್ದಾನೆಂದರೆ ಜನರಿಗೆ ಧೈರ್ಯ ಹೇಳುವುದಿರಲಿ, ಅವನೇ ಜನರ ಬಳಿಗೆ ಹೆದರಿಕೊಂಡು ಹೋಗುವ ಪರಿಸ್ಥಿತಿ ನಿರ್ಮಿಸಿಕೊಂಡಿದ್ದಾನೆ. ಯಾವ ಹಳ್ಳಿಯಲ್ಲಿ ಜನರು ಹಿಡಿದು ಬಡಿದಾರೋ ಎಂದು ತನ್ನ ಸುತ್ತಲೂ ಹತ್ತಾರು ಬಾಡಿಗಾರ್ಡ್‌ಗಳನ್ನಲ್ಲದೆ ರಕ್ಷಣೆಗಾಗಿ ರಿಸರ್ವ್ ಪೊಲೀಸರನ್ನೂ ಕರೆದೊಯ್ಯುತ್ತಿದ್ದಾನೆ. ಒಬ್ಬ ಆರೋಗ್ಯಮಂತ್ರಿಯಾದವನಿಗೆ ಇದಕ್ಕಿಂತ ಗತಿಗೇಡಿನ ಸ್ಥಿತಿ ಸಾಧ್ಯವೇ?.




ಶ್ರೀರಾಮುಲು

ತಿಂಗಳ ಹಿಂದೆ ಹಂದಿ ಜ್ವರ ರಾಜ್ಯಕ್ಕೆ ಪ್ರವೇಶಿಸಿ ಜನರು ವಿಪರೀತ ಟೆನ್‌ಶನ್‌ಗೊಳಗಾಗಿದ್ದರೆ ಈ ಮಹಾಪುರುಷನಿಗೆ ಬಳ್ಳಾರಿ, ಕೊಳ್ಳೆಗಾಲದ ಚುನಾವಣೆಯೇ ಮುಖ್ಯವಾಗಿತ್ತು. ಜನರು ಉಗಿಯುತ್ತಿರುವುದು ತಿಳಿದ ಮೇಲೆ ಒಂದೆರಡು ಆಸ್ಪತ್ರೆಗಳಿಗೆ ಭೇಟಿ ಕೊಟ್ಟು ಮಾಧ್ಯಮಗಳಿಗೆ ಪೋಸು ಕೊಟ್ಟು ಕೃತಾರ್ಥನಾಗಿಬಿಟ್ಟ ಈ ಮೇಕಪ್ ರಾಮುಲು. ಆ ನಂತರದಲ್ಲಿ ಈ ಮನುಷ್ಯನ ಅದೃಷ್ಟೇ ಇರಲಿಲ್ಲ. ಈಗಲೂ ಅಷ್ಟೇ ನೆರೆ ಪರಿಹಾರಕ್ಕಾಗಿ ಕೇಂದ್ರ ಸರ್ಕಾರವನ್ನು ದೂರುತ್ತಾ ನಿಂತಿದ್ದ ಬಿಟ್ಟರೆ ಆರೋಗ್ಯ ಇಲಾಖೆಗೆ ಸುತ್ತೋಲೆಯೊಂದನ್ನು ಕಳುಹಿಸಿ ಸುಮ್ಮನಾಗಿಬಿಟ್ಟ. ನೆರೆಯಲ್ಲಿ ಸಿಲುಕಿದವರಿಗೆ ಕನಿಷ್ಠ ಔಷಧಿ ಉಪಚಾರಗಳು ದೊರಕುವಂತೆಯೂ ಮಾಡಲಿಲ್ಲ. ರೋಮ್ ನಗರಕ್ಕೆ ಬೆಂಕಿ ಬಿದ್ದಾಗ ನೀರೋ ಎಂಬ ರಾಜ ಪಿಟೀಲು ಬಾರಿಸುತ್ತಿದ್ದನಂತಲ್ಲಾ. ಆ ನೀರೋ ತರದ ಈ ಶ್ರೀರಾಮುಲುಗಳಿರುವವರೆಗೂ ನಮ್ಮ ರಾಜ್ಯವಾಗಲೀ, ರಾಜ್ಯದ ಜನರಾಗಲೀ ಉದ್ಧಾರ ವಾಗುವುದಿರಲಿ ನೆಮ್ಮದಿಯಿಂದ ಇರಲೂ ಸಾಧ್ಯವಿಲ್ಲ.



ನೆಹರೂ ಮಗನಿಗೆ ಜನ್ಮ ನೀಡಿದ್ದ ಸನ್ಯಾಸಿನಿ



ತಮ್ಮ ವ್ಯಕ್ತಿತ್ವದಲ್ಲಿ, ಚಿಂತನೆಯಲ್ಲಿ, ಜೀವನಶೈಲಿಯಲ್ಲಿ ವಿವಿಧ ದಿಕ್ಕಿನಲ್ಲಿದ್ದ ನೆಹರೂ ಮತ್ತು ಶ್ರದ್ಧಾ ಎಂಬ ಸನ್ಯಾಸಿನಿಯ ನಡುವೆ ಪ್ರೇಮಾಂಕುರವಾಗಿತ್ತೆಂದಾಗಲಿ, ಅವರ ನಡುವೆ ದೈಹಿಕ ಸಂಬಂಧವಿತ್ತೆಂದಾಗಲಿ, ಆ ಸಂಬಂಧದಿಂದ ಒಂದು ಗಂಡು ಮಗು ಕೂಡ ಬೆಂಗಳೂರಿನಲ್ಲಿ ಜನಿಸಿತ್ತೆಂದಾಗಲಿ ನಂಬುವುದಾದರೂ ಹೇಗೆ? ಆದರೂ ಅದು ಸತ್ಯ ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ ಮತ್ತು ಆ ಪುರಾವೆಗಳನ್ನು ನಿವೃತ್ತ ನ್ಯಾಯಾಧೀಶರೊಬ್ಬರು, ನೆಹರೂ ಅವರ ಆಪ್ತ ಕಾರ್ಯದರ್ಶಿಯಾಗಿದ್ದ ಅಧಿಕಾರಿಯೊಬ್ಬ ಮತ್ತು ಸ್ವತಃ ಶ್ರದ್ಧಾಮಾತಾಳನ್ನು ಸಂದರ್ಶಿಸಿದ್ದ ಖ್ಯಾತ ಪತ್ರಕರ್ತ ಖುಷ್ವಂತ್ ಸಿಂಗ್ ಕೂಡ ಒಂದಲ್ಲಾ ಒಂದು ರೀತಿಯಲ್ಲಿ ದೃಢಪಡಿಸುತ್ತಾರೆ. ಅದು ನಿಜವೇ ಆಗಿದ್ದರೆ, ನೆಹರೂ ಅವರ ಆ ಪುತ್ರನಿಗೆ, ಇಂದಿರಾ ಗಾಂಧಿಯ ಆ ತಮ್ಮನಿಗೆ ಈಗ ಅರವತ್ತು ವರ್ಷ ವಯಸ್ಸಾಗಿದೆ!

ಇಂದಿರಾ ಗಾಂಧಿ ತಮ್ಮ ಬೆಂಗಳೂರಿನಲ್ಲಿ

ಸಾವಂತ್ರಿ

ಭಾರತದ ಪ್ರಥಮ ಪ್ರಧಾನಿಯಾಗಿದ್ದ, ರಾಷ್ಟ್ರಪಿತ ಮಹಾತ್ಮಗಾಂಧಿಯವರ ದತ್ತುಪುತ್ರನಂತಿದ್ದ, ಈ ದೇಶದ ಜಾತ್ಯತೀತ ಪರಂಪರೆಗೆ ಬದ್ಧರಾಗಿದ್ದ ಜವಾಹರ್‌ಲಾಲ್ ನೆಹರೂ ಎಂಬ ಬುದ್ಧಿಜೀವಿ ಎಲ್ಲಿ? ಅಪ್ಪಟ ಹಿಂದೂತ್ವವಾದಿಯಾಗಿದ್ದ ಸಂಸ್ಕೃತ ಪಂಡಿತೆಯಾಗಿದ್ದ ಕೇಸರಿ ಬಟ್ಟೆ ತೊಡುತ್ತಿದ್ದ ಹಲವೊಮ್ಮೆ ಹುಲಿಯ ಚರ್ಮವನ್ನು ಧರಿಸುತ್ತಿದ್ದ ಶ್ರದ್ಧಾಮಾತಾ ಎಂಬ ಸನ್ಯಾಸಿನಿ ಎಲ್ಲಿ?

ತಮ್ಮ ವ್ಯಕ್ತಿತ್ವದಲ್ಲಿ, ಚಿಂತನೆಯಲ್ಲಿ, ಜೀವನಶೈಲಿಯಲ್ಲಿ ವಿವಿಧ ದಿಕ್ಕಿನಲ್ಲಿದ್ದ ನೆಹರೂ ಮತ್ತು ಶ್ರದ್ಧಾಳ ನಡುವೆ ಪ್ರೇಮಾಂಕುರವಾಗಿತ್ತೆಂದಾಗಲಿ, ಅವರ ನಡುವೆ ದೈಹಿಕ ಸಂಬಂಧವಿತ್ತೆಂದಾಗಲಿ, ಆ ಸಂಬಂಧದಿಂದ ಒಂದು ಗಂಡು ಮಗು ಕೂಡ ಬೆಂಗಳೂರಿನಲ್ಲಿ ಜನಿಸಿತ್ತೆಂದಾಗಲಿ ನಂಬುವುದಾದರೂ ಹೇಗೆ?



ಆದರೂ ಅದು ಸತ್ಯ ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ ಮತ್ತು ಆ ಪುರಾವೆಗಳನ್ನು ನಿವೃತ್ತ ನ್ಯಾಯಾಧೀಶರೊಬ್ಬರು, ನೆಹರೂ ಅವರ ಆಪ್ತ ಕಾರ್ಯದರ್ಶಿಯಾಗಿದ್ದ ಅಧಿಕಾರಿಯೊಬ್ಬ ಮತ್ತು ಸ್ವತಃ ಶ್ರದ್ಧಾ ಮಾತಾಳನ್ನು ಸಂದರ್ಶಿಸಿದ್ದ ಖ್ಯಾತ ಪತ್ರಕರ್ತ ಖುಷ್ವಂತ್ ಸಿಂಗ್ ಕೂಡ ಒಂದಲ್ಲಾ ಒಂದು ರೀತಿಯಲ್ಲಿ ದೃಢಪಡಿಸುತ್ತಾರೆ.

ಬೆಂಗಳೂರಿನಲ್ಲಿ ಜನಿಸಿದ ನೆಹರೂ ಪುತ್ರ!

ಕೊಲ್ಕತ್ತಾದ ಹೈಕೋರ್ಟಿನಲ್ಲಿ ಮುಖ್ಯ ನ್ಯಾಯಾಧೀಶರಾಗಿದ್ದ ನ್ಯಾಯಮೂರ್ತಿ ದೇಬಿಸಿಂಗ್ ತೆವಾಟಿಯಾ ಅವರ ಪ್ರಕಾರ ನೆಹರೂ ಮತ್ತು ಶ್ರದ್ಧಾಮಾತೆಯ ನಡುವಿನ ಸಂಬಂಧ ಮತ್ತು ಅದರ ಫಲವಾಗಿ ಬೆಂಗಳೂರಿನಲ್ಲಿ ಜನಿಸಿದ ಗಂಡುಕೂಸಿನ ಕತೆ ನಡೆದದ್ದು ಹೀಗೆ:

ಅದು 1949 ರ ಏಪ್ರಿಲ್ ತಿಂಗಳು. ಬೆಂಗಳೂರಿನ ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ ಡಾ. ಎಜೆಕಿಯಲ್ ಎಂಬ ಮಹಿಳಾ ವೈದ್ಯೆ ನಡೆದು ಬರುತ್ತಿದ್ದಾಗ ಅವರಿಗೆ ದುಗುಡಗೊಂಡಿದ್ದ ಮಹಿಳೆಯೊಬ್ಬಳು ಕಂಡಳು. ಆ ಗರ್ಭಿಣಿಯು ತಾನು ಯಾರೆಂದು, ಎಲ್ಲಿಯವಳೆಂದು ಬಹಿರಂಗಪಡಿಸಿದ್ದರಿಂ[illegible] ಆಕೆಯನ್ನು ಆಸ್ಪತ್ರೆಯಿಂದ ಹೊರದೂಡಲಾಗಿತ್ತು. ಆ ಗರ್ಭಿಣಿಯನ್ನು ಎಜೆ[illegible]ಯಲ್ ಮಾತನಾಡಿಸಿದಾಗ ಆಕೆ ಉತ್ತರ ಭಾರತದವಳೆಂದು ಗೊತ್ತಾಯಿತಲ್ಲ[illegible] ಆಕೆಯ ಬಳಿ ಕಡಿಮೆ ಹಣವಿದ್ದರೂ ಆಕೆ ಶ್ರೀಮಂತೆಯಂತೆ ಎಜೆಕಿಯಲ[illegible] ಅವರಿಗೆ ಕಂಡುಬಂದಳು. 30 ವರ್ಷ ವಯಸ್ಸಿನ ಆಜುಬಾಜಿನಲ್ಲಿದ್ದ [illegible] ಗರ್ಭಿಣಿಯ ಬಗ್ಗೆ ಡಾ. ಎಜೆಕಿಯಲ್ ಅವರಲ್ಲಿ ಎಷ್ಟು ಕರುಣೆ ಉಕ್ಕಿತೆಂದ[illegible] ಅವರೇ ಆಕೆಯನ್ನು ಟ್ಯಾಕ್ಸಿಯಲ್ಲಿ ರೋಮನ್ ಕ್ಯಾಥೊಲಿಕರು ನಡೆಸುತ್ತಿ[illegible] ಆಸ್ಪತ್ರೆಗೆ ಕರೆದುಕೊಂಡು ಹೋದರಲ್ಲದೆ, ಬೆನ್ಸನ್ ಟೌನ್ ಏರಿಯಾದ[illegible] ಆಕೆಗೆಂದು ಪುಟ್ಟ ಮನೆಯನ್ನೂ ಬಾಡಿಗೆಗೆ ಹಿಡಿದರು. ಅಷ್ಟೇ ಅಲ್ಲ, [illegible] ಮನೆಯ ತಿಂಗಳ ಬಾಡಿಗೆಯಾದ 50 ರೂಪಾಯಿಗಳನ್ನು ಎಜೆಕಿಯಲ[illegible] ಅವರೇ ನೀಡಿದರಲ್ಲದೆ ಆಕೆಗೆ ಅಗತ್ಯವಾಗಿದ್ದ ಅಕ್ಕಿ-ಬೇಳೆ ಮತ್ತು ಇತ[illegible] ಸಾಮಗ್ರಿಗಳನ್ನು ತಂದು ಮನೆಯಲ್ಲಿ ಇಟ್ಟರು.

ಸುಮಾರು ಒಂದು ತಿಂಗಳ ಕಾಲ ಬೆಂಗಳೂರಿನಲ್ಲಿ ವಾಸಿಸಿದ ಆ ಗರ್ಭಿಣಿಯು ಎಲ್ಲಾ ಸಮಯವನ್ನು ತನ್ನ ಬಳಿ ಇದ್ದ ಪೊಟ್ಟಣದಲ್ಲಿನ ಹಲವಾ[illegible] ಪತ್ರಗಳನ್ನು ಮತ್ತೆ ಮತ್ತೆ ಓದುವುದರಲ್ಲೇ ಕಳೆದಳು. ಆಕೆ ಆ ಪೊಟ್ಟಣವನ[illegible] ಎಷ್ಟು ಜೋಪಾನವಾಗಿ ಇಟ್ಟುಕೊಂಡಿದ್ದಳೆಂದರೆ ಆಕೆ ನಿದ್ರಿಸುವಾಗ [illegible] ಪತ್ರಗಳ ಪೊಟ್ಟಣವನ್ನು ತನ್ನ ತಲೆದಿಂಬಿನಡಿ ಬಚ್ಚಿಡುತ್ತಿದ್ದಳು.

ಈ ಮಧ್ಯೆ ಒಮ್ಮೆ ಹೆರಿಗೆ ನೋವನ್ನು ಅನುಭವಿಸಿದಾಗಲೂ ಡಾ[illegible] ಎಜೆಕಿಯಲ್ ಅವರೇ ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು

▶▶▶




ಶ್ರದ್ಧಾಮಾತಾ ಹಿಂದೂತ್ವವಾದಿಗಳ ಮಾತಾಹರಿ !

ಎರಡನೆ ಮಹಾಯುದ್ಧದ ಸಂದರ್ಭದಲ್ಲಿ ಜರ್ಮನ್ನರು ತಮ್ಮ ಗೂಢಚರ್ಯೆ ಕೆಲಸಗಳಿಗೆ ಮಾತಾಹರಿ ಎಂಬ ಫ್ರಾನ್ಸಿನ ವೇಶ್ಯೆಯನ್ನು ಬಳಸಿಕೊಂಡಿದ್ದರು. ಯುದ್ಧ ಮುಗಿದ ನಂತರ ಫ್ರಾನ್ಸಿನ ನ್ಯಾಯಾಲಯ ದೇಶದ್ರೋಹದ ಕೆಲಸ ಮಾಡಿದ್ದಕ್ಕೆ ಮಾತಾಹರಿಗೆ ಮರಣದಂಡನೆ ವಿಧಿಸಿತ್ತು, ಆನಂತರ ಮಾತಾಹರಿಯ ಮೇಲೆ ಗುಂಡುಗಳನ್ನು ಹಾರಿಸಿ ಕೊಲ್ಲಲಾಯಿತು.

ಅಲ್ಲಿ ಜರ್ಮನ್ನರು ತಮ್ಮ ಉದ್ದೇಶಗಳನ್ನು ಸಾಧಿಸಲು ಮಾತಾಹರಿ ಎಂಬ ವೇಶ್ಯೆಯನ್ನು ಬಳಸಿದಂತೆ ಇಲ್ಲಿ ಹಿಂದೂತ್ವವಾದಿಗಳ, ಶ್ರದ್ಧಾಮಾತಾಳೆಂಬ ಸನ್ಯಾಸಿನಿಯನ್ನು ಬಳಸಿಕೊಂಡಿದ್ದರು ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ.

1947 ರಲ್ಲಿ ದೇಶ ವಿಭಜನೆಗೊಂಡು ಭಾರತಕ್ಕೆ ಸ್ವಾತಂತ್ರ ಲಭಿಸಿತ್ತು, ಜವಾಹರಲಾಲ್ ನೆಹರೂ ಎಂಬ ಜಾತ್ಯತೀತವಾದಿ ಪ್ರಧಾನಮಂತ್ರಿಯಾಗಿದ್ದರು. ಇದು ಸಹಜವಾಗಿಯೇ ಹಿಂದೂತ್ವವಾದಿಗಳಿಗೆ ಸಹಿಸಲಾಗಲಿಲ್ಲ, ಎಂದೂ ಸ್ವಾತಂತ್ರ ಸಂಗ್ರಾಮದಲ್ಲಿ ಭಾಗವಹಿಸದಿದ್ದ ಹಿಂದೂತ್ವವಾದಿಗಳಿಗೆ ಹೇಗಾದರೂ ಮಾಡಿ ಭಾರತವನ್ನು ಹಿಂದೂರಾಷ್ಟ್ರವಾಗಿಸುವ ಹಂಬಲವಂತೂ ಇದ್ದೇ ಇತ್ತು, ಆ ನಿಟ್ಟಿನಲ್ಲಿ ಅವರು ಗುರಾಣಿಯಂತೆ ಬಳಸಿದ್ದು ಓರ್ವ ಮಹಿಳೆಯನ್ನು! ಎಂತಹ ದೇಶಪ್ರೇಮ, ಎಂತಹ ಸ್ತ್ರೀಭಕ್ತಿ!!

ಅದು 1948. ಅಷ್ಟೊತ್ತಿಗಾಗಲೇ ಶ್ರದ್ಧಾಮಾತಾ ಸನ್ಯಾಸಿನಿಯಾಗಿದ್ದಳು, ಉತ್ತಮ ವಾಗ್ಮಿಯಾಗಿದ್ದಳು. ಒಮ್ಮೆ ಆಕೆ ಕೊಲ್ಕತ್ತಾದಲ್ಲಿ ದೊಡ್ಡ ಸಭೆಯನ್ನುದ್ದೇಶಿಸಿ ವೇದಗಳ ಬಗ್ಗೆ ಭಾಷಣ ಕುಟ್ಟುತ್ತಿದ್ದದ್ದನ್ನು ಅಂದು ಹಿಂದೂ ಮಹಾಸಭಾ[illegible] ನಾಯಕನಾಗಿದ್ದ ಶ್ಯಾಮಪ್ರಸಾದ್ ಮುಖರ್ಜಿ ನೋಡಿದ[illegible] ಅವಳ ವಾಕ್ ಚಾತುರ್ಯದಿಂದ ವಿಸ್ಮಿತಗೊಂಡು ಆಕೆಯನ[illegible] ದೆಹಲಿಗೆ ಆಹ್ವಾನಿಸಿದ. ದೆಹಲಿಯಲ್ಲೂ ಆಕೆ ತನ್ನ ಕಲ್ಪನೆಯ[illegible] ಹಿಂದೂ ಭಾರತ ಹೇಗಿರುತ್ತದೆಂದು ಹಲವಾರು ಕ[illegible] ಭಾಷಣಗಳನ್ನು ನೀಡಿದಳು, ಬಹಳಷ್ಟು ಜನರ ಮೆಚ್ಚುಗೆಯನ[illegible] ಪಡೆದಳು. ಆಗ ಹೇಗಾದರೂ ಮಾಡಿ ಶ್ರದ್ಧಾಮಾತಾಳನ[illegible] ಪ್ರಧಾನಿ ನೆಹರೂ ಭೇಟಿಯಾದರೆ ಅವಳ ವಾಕ[illegible] ಚಾತುರ್ಯದಿಂದ ನೆಹರೂ ಪ್ರಭಾವಿತರಾಗಿ ತಮ[illegible] ಹಿಂದೂತ್ವ ಸಿದ್ಧಾಂತಕ್ಕೆ ಪುಷ್ಟಿ ಸಿಗಬಹುದೆಂದು ಮುಖರ್ಜಿ[illegible] ಲೆಕ್ಕ ಹಾಕಿದ.



ಶ್ಯಾಮಪ್ರಸಾದ್ ಮುಖರ್ಜಿ

ಆದರೆ ದೇವಮಾನವರು ಮತ್ತು ದೇವಧೂತೆಯರನ[illegible] ಕಂಡರೆ ನೆಹರೂಗೆ ಆಗುತ್ತಿರಲಿಲ್ಲ, ಆದ್ದರಿಂದ ಅವರು[illegible] ಶ್ರದ್ಧಾಳನ್ನು ಭೇಟಿಯಾಗಲು ನಿರಾಕರಿಸಿದರು. ಆ[illegible] ಮುಖರ್ಜಿ ತನ್ನ ಮಿತ್ರರಾಗಿದ್ದ ಜಗತ್ ನಾರಾಯಣ[illegible] ಲಾಲ್ ಎಂಬುವವರ ನೆರವು ಪಡೆದು, ಲಾಲ್ ಅವರು[illegible] ನೆಹರೂ ಕಚೇರಿಯಲ್ಲಿ ಸಿಬ್ಬಂದಿಯಾಗಿ ಸೇವೆ ಸಲ್ಲಿಸಿ[illegible] ಎಸ್.ಡಿ. ಉಪಾಧ್ಯಾಯ ಎಂಬುವವರಿಂದ ಪತ್ರ ಪಡೆದು ನೆಹರೂ ಅವರು[illegible] ಶ್ರದ್ಧಾಳನ್ನು ಭೇಟಿ ಆಗುವಂತೆ ನೋಡಿಕೊಂಡಿದ್ದರು.

ಆ ಭೇಟಿಯ ನಂತರ ನೆಹರೂ ಮತ್ತು ಶ್ರದ್ಧಾ ನಡುವಿನ ಸಂಬಂ[illegible]

▶▶▶

...ಆಕೆ ತನ್ನ ಮಗುವಿಗೆ ಜನ್ಮ ನೀಡಿರಲಿಲ್ಲ. ಆದರೆ 1949 ರ ...0 ರಂದು ಆಕೆ ಕ್ಯಾಥೊಲಿಕ್ ಆಸ್ಪತ್ರೆಯಲ್ಲಿ ಒಂದು ಗಂಡುಮಗುವಿಗೆ ...ನೀಡಿದಳು. ಆದರೆ ಆ ಕೂಸು ಈ ಜಗತ್ತಿಗೆ ಬರುವ ಮುನ್ನವೇ ...ಬಿಟ್ಟಿತ್ತು. ಅದಾದನಂತರ ಒಂಭತ್ತು ದಿನಗಳನ್ನು ಆಸ್ಪತ್ರೆಯಲ್ಲೇ ಕಳೆದ ...ನಂತರ ತನ್ನ ಬಾಡಿಗೆ ಮನೆಗೆ ಹಿಂದಿರುಗಿ ಅಲ್ಲಿ ಹತ್ತು ದಿನಗಳ ಕಾಲ ...ಮಾಡಿದಳು. 1949 ರ ಜೂನ್ 19 ರಂದು ...ಯು ವಿಮಾನವನ್ನೇರಿ ಹೊರಟು ಹೋದಳು. ...ವರೆ ಹೋಗುವಾಗ ಎಜೆಕಿಯಲ್ ಮತ್ತಾಕೆಯ ...ಕೊಂದು ವೆಚ್ಚ ಮಾಡಿದ್ದ 600 ರೂಪಾಯಿಗಳ ...ನ್ನು ಹಾಗೆ ಉಳಿಸಿಕೊಂಡು ಹೋಗಿದ್ದಳಲ್ಲದೆ; ...ದಾ ಓದುತ್ತಿದ್ದ ಪತ್ರಗಳ ಪೊಟ್ಟಣವನ್ನೂ ಮರೆತುಹೋಗಿದ್ದಳು.



ಪೊಟ್ಟಣವನ್ನು ತೆರೆದು ನೋಡಿದಾಗ ...ಯಿತು: ಅದರಲ್ಲಿನ ಆತ್ಮೀಯ ಪತ್ರಗಳನ್ನು ...ದೇಶದ ಪ್ರಥಮ ಪ್ರಧಾನಿಯಾಗಿದ್ದ ಜಾತ್ಯತೀತ ...ಲಾಲ್ ನೆಹರೂ ಎಂದು! ಮತ್ತು ಅವುಗಳನ್ನು ...ದ್ದವಳು ಶ್ರದ್ಧಾ ಮಾತಾ ಎಂಬ ಹಿಂದೂತ್ವವಾದಿ ...!!

...ಮಾದನಂತರ ಶ್ರದ್ಧಾಮಾತಾ ತನಗೆ ನೆರವು ... ಎಜೆಕಿಯಲ್ ದಂಪತಿಗಳನ್ನು ಸಂಪರ್ಕಿಸಲೇ ...ಆಕೆ ಹೇಗಿದ್ದಳೆಂದು ವಿಚಾರಿಸಲು ಎಜೆಕಿಯಲ್ ದಂಪತಿಗಳು ಆಕೆ ...ದೆಹಲಿ ವಿಳಾಸಕ್ಕೆ ಪತ್ರ ಬರೆದರು. ಆದರೆ ಆ ಪತ್ರ ಹಾಗೆಯೇ ...ಬಂದಿತ್ತು. ಆಗ ಆಕೆಯನ್ನು ಪತ್ತೆಹಚ್ಚಲು ಹಾಗು ಆಕೆ ಬಿಟ್ಟುಹೋಗಿದ್ದ ಪೊಟ್ಟಣವನ್ನು ಆಕೆಗೆ ವಾಪಸ್ಸು ಕಳುಹಿಸಲು ಡಾ. ಎಜೆಕಿಯಲ್ ...ಪತಿ ತಮ್ಮ ಸ್ನೇಹಿತನಾಗಿದ್ದ ಹಿಂದಿ ಪಂಡಿತ ಡಾ. ಕರಮ್‌ಚಂದ್ ...ಎಂಬಾತನನ್ನು ಸಂಪರ್ಕಿಸಿದರು.

...ದ್ಧಾಮಾತಾ ಬೆಂಗಳೂರಿನಲ್ಲಿದ್ದ ಪ್ರತಿದಿನವೂ ಅಷ್ಟು ಜೋಪಾನವಾಗಿ ...ಕೊಂಡಿದ್ದ, ಆದರೂ ಕೊನೆ ಕ್ಷಣ ಮರೆತುಹೋಗಿದ್ದ ಪತ್ರಗಳಲ್ಲಿ ಆಕೆ ...ಹುದು ಎಂಬ ಸೂಚನೆಗಳಿವೆಯೇ ಎಂದು ...ಯು ಡಾ. ವಾಡೆಯನ್ನು ಕೇಳಿದರು. ಆ ...ಣದಲ್ಲಿದ್ದ ಮೊದಲನೇ ಪತ್ರವನ್ನು ನೋಡಿದ ... ಡಾ. ವಾಡೆಗೆ ಎಲ್ಲವೂ ಸ್ಪಷ್ಟವಾಯಿತು. ...ರ ಮಾರ್ಚ್ 2 ರಂದು ಲಕ್ನೋದಲ್ಲಿನ ... ಬಂಗಲೆಯಿಂದ ರವಾನಿಸಲ್ಪಟ್ಟಿದ್ದ ಆ ಪತ್ರದಲಿ ...ಪಂಡಿತ್ ನೆಹರೂ ಅವರ ಹಸ್ತಾಕ್ಷರ. ಶ್ರದ್ಧಾ ...ಗೆ ಬರೆದಿದ್ದ ಆ ಪೊಟ್ಟಣದಲ್ಲಿದ್ದ ಇತರೆ ...ಆತ್ಮೀಯ ಪತ್ರಗಳನ್ನೂ ನೆಹರೂ ಅವರೇ ...ದ್ದರು. ಆ ಪತ್ರಗಳು ಬಹಿರಂಗಗೊಂಡರೆ ... ಅವರ ಖ್ಯಾತಿಗೆ ಹಾನಿಯಾಗುತ್ತದೆ ಎಂದು ...ದ ನೆಹರೂ ಅಭಿಮಾನಿಯಾಗಿದ್ದ ಡಾ. ವಾಡೆ ...ಕೂಡಲೇ ಎಜೆಕಿಯಲ್ ದಂಪತಿಗಳಿಗೆ ಶ್ರದ್ಧಾ ...ಕೊಡಬೇಕಿದ್ದ ಆರು ನೂರು ರೂಪಾಯಿಗಳ ಸಾಲವನ್ನು ...ಜೇಬಿನಿಂದಲೇ ತೀರಿಸಿದರಲ್ಲದೆ, ಆ ಪತ್ರಗಳ ...ವನ್ನು ತಮ್ಮ ಬಳಿಯೇ ಇಟ್ಟುಕೊಂಡರು.



...ಪತ್ರಗಳು ಬೇರೆ ಯಾರ ಕೈಗೂ ಸಿಗಬಾರದೆಂದರೆ ತಾವೇ ಅದನ್ನು ...ಗಿ ನೆಹರೂ ಅವರಿಗೆ ತಲುಪಿಸಬೇಕೆಂದು ನಿರ್ಧರಿಸಿದ ಡಾ. ವಾಡೆ ...ಪರಿಚಿತರಾಗಿದ್ದ ನೆಹರೂ ಅವರ ಖಾಸಗಿ ಕಾರ್ಯದರ್ಶಿ ಎ. ವಿ. ಶಲ ...ವರಿಗೆ ಈ ಕುರಿತು ಪತ್ರ ಬರೆದರು. ಆದರೆ ಪೈಯವರಿಂದ ...ನಕಾರಿಯಾದ ಉತ್ತರ ಬರಲಿಲ್ಲ. ನೆಹರೂ ಅವರಿಗಾಗಲಿ, ತನಗಾಗಲಿ ...ಡೆ ಅವರು ದೆಹಲಿಯತನಕ ಬರುವ ತೊಂದರೆಯನ್ನು ತೆಗೆದುಕೊಳ್ಳ ...ದು ಅನ್ನಿಸುತ್ತಿದೇ ಎಂದೂ ಬದಲಾಗಿ ಆ ಪತ್ರಗಳನ್ನು ಪೈ ಅವರ ... ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳುಹಿಸಿ ಕೊಡಬೇಕೆಂದೂ ಪೈ ...ದರು. ಅಷ್ಟೇ ಅಲ್ಲ ಆ ಪತ್ರಗಳಲ್ಲಿದ್ದ ವಿಚಾರಗಳು ಬಹಿರಂಗಗೊಂಡರೆ ... ಅವರ ಖ್ಯಾತಿಗೆ ಹಾನಿಯಾಗುತ್ತದೆಂಬ ಡಾ. ವಾಡೆ ಅವರ ಆತಂಕವನ್ನೂ ಪೈ ಅವರು ಗಂಭೀರವಾಗಿ ಪರಿಗಣಿಸಲಿಲ್ಲ. "ನಿಮ್ಮಲ್ಲಿರುವ ಒಂದೆರಡು ಚೀಟಿಗಳನ್ನು ಕೆಲವರು ಅಪಾರ್ಥ ಮಾಡಿಕೊಳ್ಳುವ, ಬೇರೆ ರೀತಿಯಲ್ಲಿ ಪರಿಗಣಿಸುವ ಸಾಧ್ಯತೆ ಇದೆ. ಆದರೆ ಪ್ರಧಾನಿಯವರಿಗೆ ಅದರ ಬಗ್ಗೆ ಯಾವುದೇ ಆತಂಕಗಳಿಲ್ಲ ಆದರೂ ನೀವು ಕಳುಹಿಸುವ ಪತ್ರಗಳನ್ನು ಓದುವುದಕ್ಕಾಗಿ ಕಾಯುತ್ತಿದ್ದೇನೆ" ಎಂದು ಉತ್ತರಿಸುವ ಮೂಲಕ ಡಾ. ವಾಡೆ ಅವರ ಆತಂಕಗಳನ್ನು ಪೈ ನಿರ್ಲಕ್ಷಿಸಿದರು.

ಆಗ ವಾಡೆ ಅವರು ಪೈಗೆ ಮತ್ತೊಂದು ಪತ್ರವನ್ನು ಕಳುಹಿಸಿದರು. ಅದರೊಂದಿಗೆ ನೆಹರೂ ಅವರು ಶ್ರದ್ಧಾ ಮಾತಾಗೆ ಬರೆದಿದ್ದ ಒಂದು ಪತ್ರದಲ್ಲಿ ಆಕೆಯನ್ನು ರಾತ್ರಿ ಹತ್ತು ಗಂಟೆಯ ನಂತರ ಭೇಟಿ ಆಗುವುದಾಗಿ ಹೇಳಿರುವುದನ್ನು ಮತ್ತು ಆ ಹೊತ್ತಿನಲ್ಲಿ ಅವರಿಬ್ಬರ ಭೇಟಿಯನ್ನು ಬೇರೆಯವರು ವಿವಿಧ ರೀತಿಯಲ್ಲಿ ಅರ್ಥೈಸಬಹುದೆಂದೂ ವಾಡೆ ಸೂಕ್ಷ್ಮವಾಗಿ ಸೂಚಿಸಿದರು.

ಅದನ್ನು ಓದಿದ ನಂತರವೂ ಪೈ ಅವರು ವಿಚಲಿತರಾಗಲಿಲ್ಲ. "ಆ ಒಂದು ವಾಕ್ಯದಿಂದ ಯಾರೂ ಅಪಾರ್ಥ ಮಾಡಿಕೊಳ್ಳುವ ಅಗತ್ಯವಿಲ್ಲ" ಎಂದು ಉತ್ತರಿಸಿದ ಪೈ ಅವರು "ನಿಮ್ಮ ಈ ಪತ್ರಗಳಿಗೆ ನಾವಿಷ್ಟು ಪ್ರಾಮುಖ್ಯತೆ ಕೊಟ್ಟಿರುವುದಕ್ಕೆ ಕಾರಣ ನೀವು ನಿಮ್ಮ ಪತ್ರದಲ್ಲಿ ಉಲ್ಲೇಖಿಸಿರುವ ಸಾಲನ್ನು ನೋಡಿ ನೆಹರೂ ಅವರ ಬಗ್ಗೆ ಯಾರಾದರೂ ಅಪಾರ್ಥ ಮಾಡಿಕೊಳ್ಳುತ್ತಾರೆ ಎಂಬ ಆತಂಕದಿಂದಲ್ಲ, ಬದಲಾಗಿ ಅದರಿಂದಾಗಿ ಆ ಮಹಿಳೆಯ ವ್ಯಕ್ತಿತ್ವದ ಮೇಲೆ ಕಳಂಕ ಬಿದ್ದೀತು ಎಂಬ ಕಾಳಜಿಯಿಂದ" ಎಂದು ಉತ್ತರಿಸಿದರು.

ಆದರೆ ಆ ಪತ್ರಗಳನ್ನು ಸ್ವತಃ ನೆಹರೂ ಅವರಿಗೇ ಕೊಡಬೇಕೆಂಬ ಹಠವನ್ನು ವಾಡೆ ಬಿಡಲಿಲ್ಲ. ಅವರು ಆ ಪತ್ರಗಳ ಪೊಟ್ಟಣವನ್ನು ಹೊತ್ತು ದೆಹಲಿಗೆ ಹೊರಟೇ ಬಿಟ್ಟರು. ಪೈ ಅವರ ನೆರವಿನಿಂದ ನೆಹರೂ ಅವರನ್ನು ಖಾಸಗಿಯಾಗಿ ಭೇಟಿ ಮಾಡಿ ಆ ಪತ್ರಗಳ ಪೊಟ್ಟಣವನ್ನು ಅವರಿಗೆ ನೀಡುವಲ್ಲಿಯೂ ಯಶಸ್ವಿಯಾದರು. ಅವುಗಳನ್ನು ವಾಡೆ ಅವರಿಂದ ಪಡೆದ ನೆಹರೂ ಆ ಪತ್ರಗಳಲ್ಲಿ ಅಷ್ಟು ಮುಖ್ಯವಲ್ಲದ, ಕೇವಲ ಎರಡು ಸಾಲುಗಳನ್ನು ಹೊಂದಿದ್ದ ಒಂದನ್ನು ವಾಡೆ ಅವರಿಗೆ ನೆನಪಿನ ಕುರುಹಾಗಿ ಇಟ್ಟುಕೊಳ್ಳಲು ನೀಡಿದರಲ್ಲದೆ, ಮುಂದೆಂದಾದರು ತಮ್ಮನ್ನು ಭೇಟಿ ಆಗಬೇಕೆಂದಿದ್ದರೆ ಅದನ್ನೇ ತಮ್ಮ ಗುರುತಿನ ಚೀಟಿಯಾಗಿ ಉಪಯೋಗಿಸಿಕೊಳ್ಳಲು ಹೇಳಿದರು. ಅಷ್ಟೇ ಅಲ್ಲ, ತಮ್ಮ ಖಾಸಗಿ ಫೋನ್ ನಂಬರ್ ಅನ್ನು ನೆಹರೂ ಅವರು ಡಾ. ವಾಡೆಗೆ ನೀಡಿದರಲ್ಲದೆ, ಅವರಿಗೆ ಯಾವುದಾದರೂ ಜವಾಬ್ದಾರಿಯನ್ನು ನೀಡುವುದಾಗಿ ಹೇಳಿದರು. ಆದರೆ ವಾಡೆ ಅವರು ಅವುಗಳನ್ನೆಲ್ಲ ನಿರಾಕರಿಸಿ, ನೆಹರೂ ಅವರ ವ್ಯಕ್ತಿತ್ವಕ್ಕೆ ಧಕ್ಕೆ ಆಗಬಾರದೆಂಬ ಕಾಳಜಿಯಿಂದ ಮತ್ತು ದೇಶಪ್ರೇಮದಿಂದ ಇಷ್ಟೆಲ್ಲ ತೊಂದರೆ ತೆಗೆದುಕೊಂಡಿದ್ದೇನೆಂದು ಹೇಳಿ ವಾಪಸ್ಸಾಗಿದ್ದರು.

ಇದೆಲ್ಲ ನಡೆದದ್ದು 1949 ರಲ್ಲಿ. ಆದಾದ 27 ವರ್ಷಗಳ ಕಾಲ ನೆಹರೂ-ಶ್ರದ್ಧಾಮಾತಾ-ಎಜೆಕಿಯಲ್-ವಾಡೆ ಮತ್ತು ಬೆಂಗಳೂರಿನ ಕ್ಯಾಥೊಲಿಕ್ ಆಸ್ಪತ್ರೆಯಲ್ಲಿ ಜನಿಸಿದ ಗಂಡುಮಗುವಿನ ಬಗ್ಗೆ ಯಾರೂ, ಎಲ್ಲಿಯೂ ಪ್ರಸ್ತಾಪಿಸಿರಲಿಲ್ಲ.

ಆದರೆ 1976 ರಲ್ಲಿ ಒಂದು ವಿಚಿತ್ರ ಘಟನೆ ನಡೆಯಿತು. ಕೊಲ್ಕತ್ತಾ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ನಿವೃತ್ತಿ ಹೊಂದಿದ್ದ ನ್ಯಾ. ದೇಬಸಿಂಗ್ ತೆವಾಟಿಯಾ ಎಂಬುವವರನ್ನು ಡಾ. ವಾಡೆ ಸಂಪರ್ಕಿಸಿ ಅವರನ್ನು ಭೇಟಿಯಾಗುವ ಆಸಕ್ತಿ ತೋರಿದರು. ಕುತೂಹಲಗೊಂಡ ತೆವಾಟಿಯಾ ವಾಡೆ ಅವರಿಗೆ ಬರಲು ಹೇಳಿದರು. ಅವರಿಬ್ಬರು ಭೇಟಿ ಆದಾಗ ವಾಡೆ ಅವರಿಗೆ ಎಂಭತ್ತಕ್ಕಿಂತ ಹೆಚ್ಚು ವಯಸ್ಸಾಗಿತ್ತು. 1940 ರ ದಶಕದಲ್ಲಿ ನಡೆದಿದ್ದರ ಘಟನಾವಳಿಗಳ ನೆನಪಿನ ಕುರುಹಾಗಿ ನೆಹರೂ ಅವರು ವಾಡೆ ಅವರಿಗೆ ನೀಡಿದ್ದ ಎರಡೇ ಎರಡು ಸಾಲುಗಳ ಒಂದು ಪತ್ರವನ್ನು ತೆವಾಟಿಯಾ ಅವರಿಗೆ ತೋರಿಸಿದರು.

▶▶▶

...ಂಗಳುಗಳಲ್ಲಿ ಗಟ್ಟಿಯಾದಾಗ ಹಿಂದೂ ಮಹಾಸಭಾದ ನಾಯಕರು ...ತಂತ್ರ ಸಫಲವಾಯಿತೆಂದು ಸಂಭ್ರಮಿಸಿದ್ದರು. 1949 ರ ಮಾರ್ಚ್ ... ಹಿಂದೂ ಮಹಾಸಭಾದ ನಾಯಕರಲ್ಲಿ ...ದ್ದ ಆಶುತೋಷ್ ಲಹರಿ ಎಂಬಾತ, ಗಾಂಧಿ ...ಯ ಆರೋಪಿಗಳಲ್ಲಿ ಒಬ್ಬನಾಗಿದ್ದ ಮತ್ತು ...ತ್ವವಾದಿಗಳ ಪರಮನಾಯಕನಾಗಿದ್ದ ವಿ.ಡಿ. ...ಗೆ ಪತ್ರವೊಂದನ್ನು ಬರೆದಿದ್ದ. ಆ ಪತ್ರದಲ್ಲಿ ...ರೊಂದಿಗೆ ಶ್ರದ್ಧಾ ಸಾಧಿಸಿದ್ದ "ಸಕ್ರಿಯ ಸಂಪರ್ಕ"ದ ...ಹರಿ ಕೊಂಡಾಡಿದ್ದನಲ್ಲದೆ, "ಭಾರತದ ...ನ್ನು ದೇವಾಸುದೇವತೆಗಳೇ ನಿರ್ಧರಿಸುತ್ತಿದ್ದಾರೆ ...ವ ನನ್ನ ನಂಬಿಕೆ. ಈ ಸಂಪರ್ಕದಿಂದಾಗಿ ನಮ್ಮ ... ಈಡೇರಿದರೆ ಅದರಿಂದ ಹೊಸ ಬೆಳವಣಿಗೆ ...ಬಹುದು" ಎಂಬ ಆಶಯವನ್ನು ವ್ಯಕ್ತಪಡಿಸಿದ್ದ.




ವಲ್ಲಭಾಯಿ ಪಟೇಲ್

...ರೆ ಈ ಪತ್ರ ಇಂಟೆಲಿಜೆನ್ಸ್ ಬ್ಯುರೋದವರ ...ು, ಅವರು ಅದನ್ನು ನೆಹರೂ ಸಂಪುಟದಲ್ಲಿ ...ಚಿವರಾಗಿದ್ದ ವಲ್ಲಭಾಯಿ ಪಟೇಲ್‌ರಿಗೆ ...ದರು.

...49 ರ ಮಾರ್ಚ್ 9 ರಂದು ಆ ಪತ್ರವನ್ನು ನೆಹರೂ ಅವರಿಗೆ ...ದ ಪಟೇಲ್ ಪ್ರಧಾನಿಗಳಿಂದ ವಿವರಗಳನ್ನು ಕೇಳಿದರು. ಆ ಪತ್ರಕ್ಕೆ ...ಸ ಉತ್ತರಿಸಿದ ನೆಹರೂ ಅವರು ಇದೀ ಪ್ರಕರಣವನ್ನೇ ಸಾರಾಸಗಟಾಗಿ ... ಹೀಗೆಂದು ಉತ್ತರಿಸಿದ್ದರು: "ನೀವು ಪ್ರಸ್ತಾಪಿಸಿರುವ ಮಹಿಳೆಯನ್ನು ... ಬಾರಿ ದೆಹಲಿ, ಲಕ್ನೋ ಇತ್ಯಾದಿ ಕಡೆಗಳಲ್ಲಿ ಭೇಟಿಯಾಗಿರುವುದು ಖಂಡಿತಾ ಸತ್ಯ. ಆದರೆ ಸಾಮಾನ್ಯವಾಗಿ ನಾವಿಬ್ಬರೂ ಹಿಂದೂ ಕೋಡ್ ಬಿಲ್ ಮತ್ತು ಹಿಂದಿಗೆ ಸಂಬಂಧಿಸಿದಂತೆ ಭಾಷಾ ಪ್ರಶ್ನೆಯ ಬಗ್ಗೆ ಚರ್ಚಿಸಿದ್ದೇವೆ. ಈ ಎರಡೂ ವಿಷಯಗಳನ್ನು ಕುರಿತಂತೆ ಆಕೆ ನನ್ನ ಮೇಲೆ ಪ್ರಭಾವ ಬೀರಲು ಯತ್ನಿಸಿರುವಂತೆ ಅವಳ ಮೇಲೆ ಪ್ರಭಾವ ಬೀರಲು ನಾನು ಪ್ರಯತ್ನಿಸಿದ್ದೇನೆ. ಆ ನಿಟ್ಟಿನಲ್ಲಿ ನಾನು ಎಷ್ಟು ಯಶಸ್ವಿಯಾಗಿದ್ದೇನೆ ಎಂಬುದು ನನಗೆ ಗೊತ್ತಿಲ್ಲ. ಆದರೆ ಖಂಡಿತವಾಗಿಯೂ ಆಕೆ ನನ್ನ ಮೇಲೆ ಯಾವ ಪ್ರಭಾವವನ್ನೂ ಬೀರಿಲ್ಲ."

ಹೀಗೆ ಶ್ರದ್ಧಾಳನ್ನು ಬಳಸಿಕೊಂಡು ನೆಹರೂ ಮೂಲಕ ದೇಶದ ಮೇಲೆ ಹಿಂದೂತ್ವ ಸಿದ್ಧಾಂತವನ್ನು, ಹಿಂದಿ ಭಾಷೆಯನ್ನು ಹೇರಲು ಯತ್ನಿಸಿದ್ದ ಹಿಂದೂ ಮಹಾಸಭಾದವರು ಅದರಲ್ಲಿ ಸಂಪೂರ್ಣವಾಗಿ ಸೋತಿದ್ದರು. ಅಷ್ಟೇ ಅಲ್ಲ, ತಮ್ಮ ಈ ಕುತಂತ್ರದಿಂದಾಗಿ ಶ್ರದ್ಧಾ ಓರ್ವ ಮಗುವಿನ ತಾಯಿಯಾಗುವಂತೆ ಮಾಡಿದ್ದರು.

ಸದಾ ಮಹಿಳೆಯರನ್ನು ಮಾತೆಯರೆಂದು ಕೊಂಡಾಡುವ, ಸ್ತ್ರೀಯರ ಬಗ್ಗೆ ಗೌರವವಿದೆ ಎಂದು ಕೊಚ್ಚಿಕೊಳ್ಳುವ ಹಿಂದೂತ್ವವಾದಿಗಳೇ ತಮ್ಮ ದುರುದ್ದೇಶಕ್ಕಾಗಿ ಓರ್ವ ಮಹಿಳೆಯು ತನ್ನ ದೇಹವನ್ನೇ ಒಬ್ಬನಿಗೆ ಅರ್ಪಿಸುವಂತೆ ಮಾಡಿದ್ದು ಅವರ ನೀಚ ಬುದ್ಧಿಗೆ ಸಾಕ್ಷಿಯಂತಿದೆ.



ಕೊನೆಗೆ ಶ್ರದ್ಧಾ ಎಲ್ಲಿ ಹೋದಳು?

ಹಿಂದೂತ್ವವಾದಿಗಳ ಅಸ್ತ್ರವಾಗಿ ಬಳಕೆಯಾದ ಶ್ರದ್ಧಾ 1948 ರಲ್ಲಿ ನೆಹರೂ ಅವರನ್ನು ಭೇಟಿಯಾಗಿದ್ದು, 1949 ಅವರ ಮಗನಿಗೆ ಜನ್ಮ ನೀಡಿದ್ದು ಎಲ್ಲಾ ಆದ ಮೇಲೆ ಆಕೆ ಏನಾದಳು? ಎಲ್ಲಿಗೆ ಹೋದಳು ಎಂಬುದೂ ಅಷ್ಟೇ ಕುತೂಹಲಕಾರಿಯಾಗಿದೆ.

ಪ್ರಾಯಶಃ ಶ್ರದ್ಧಾ-ನೆಹರೂ ಸಂಬಂಧ 1940 ರ ದಶಕ ಕೊನೆಗೊಳ್ಳುವ ಹೊತ್ತಿಗೆ ಅಂತ್ಯಗೊಂಡಿತ್ತು. ಅದಾದನಂತರವೇ ಆಕೆ ಇಂಗ್ಲೆಂಡಿಗೆ ಹೋಗಿ ಕೆಲ ವರ್ಷಗಳ ಕಾಲ ಅಲ್ಲೇ ವಾಸಿಸಿದ್ದಳು. ಆದರೆ ಆಕೆ ಅಲ್ಲಿ ಏನು ಮಾಡುತ್ತಿದ್ದಳು, ಜೀವನೋಪಾಯಕ್ಕಾಗಿ ಏನನ್ನು ಅವಲಂಬಿಸಿದ್ದಳು ಎಂಬುದೆಲ್ಲ ನಿಗೂಢವಾಗಿದೆ. ಆದರೆ ಒಂದಂತೂ ಸ್ಪಷ್ಟ. ಆಕೆಗೆ ಭಾರತ ದೇಶದ ಗಣ್ಯಾತಿಗಣ್ಯರೊಂದಿಗೆ ಸಂಪರ್ಕವಿತ್ತು.

ಕೊಲ್ಕತ್ತಾದ ನಿವೃತ್ತ ಮುಖ್ಯ ನ್ಯಾಯಮೂರ್ತಿ ದೇಬಸಿಂಗ್ ತೆವಾಟಿಯಾ ಅವರು ಹೇಳುವಂತೆ ಆಕೆಗೆ ಅಂದಿನ ಉಪರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಪರಿಚಯವೂ ಇತ್ತು. 1954 ರಲ್ಲಿ ಶ್ರದ್ಧಾ ಇಂಗ್ಲೆಂಡಿನಿಂದ ಭಾರತಕ್ಕೆ ವಾಪಸ್ಸು ಬರಲು ನಿರ್ಧರಿಸಿದಾಗ ರಾಧಾಕೃಷ್ಣನ್ ಅವರಿಗೆ ಕರೆ ನೀಡುವಂತೆ ತೆವಾಟಿಯಾ ಅವರಿಗೆ ಹೇಳಿದಳು ಮತ್ತು ಲಂಡನ್ ಹೋಟೆಲ್ಲೊಂದರ ಫೋನ್ ನಂಬರ್‌ನ್ನು ನೀಡಿದಳು. ಆ ನಂಬರಿಗೆ ತೆವಾಟಿಯಾ ಫೋನ್ ಮಾಡಿ ಶ್ರದ್ಧಾಳ ಪರವಾಗಿ ತಾನು ಮಾತನಾಡುತ್ತಿರುವುದಾಗಿ ಹೇಳಿದಕೂಡಲೆ ಸ್ವತಃ ರಾಧಾಕೃಷ್ಣನ್‌ರೇ ಆ ಕರೆಯನ್ನು ಸ್ವೀಕರಿಸಿದರು. ಮಾತ್ರವಲ್ಲ, ಕರೆ ಸ್ವೀಕರಿಸಿದ ಒಂದು ವಾರದಲ್ಲೇ ಆಕೆ ಭಾರತಕ್ಕೆ ಹಿಂದಿರುಗಲು ಒಂದು ವಿಮಾನ ಟಿಕೆಟ್ ಅನ್ನು ರಾಧಾಕೃಷ್ಣನ್ ವ್ಯವಸ್ಥೆ ಮಾಡಿದ್ದರು.

ಭಾರತಕ್ಕೆ ಹಿಂದಿರುಗಿದ ಶ್ರದ್ಧಾ ಹರಿಯಾಣದ ಫರೀದಾಬಾದಿನಲ್ಲಿ ಒಂದು ಆಶ್ರಮವನ್ನು ಸ್ಥಾಪಿಸಿದಳು ಮತ್ತು ತಾನು ವಾಸಿಸುತ್ತಿದ್ದ ಕಟ್ಟಡದ ಸುತ್ತ ಬೇಲಿ ಹಾಕಿಕೊಂಡು ತನ್ನ ರಕ್ಷಣೆಗಾಗಿ ದೊಡ್ಡ ದೊಡ್ಡ ನಾಯಿಗಳನ್ನು ಸಾಕಿಕೊಂಡಿದ್ದಳು.

ತೆವಾಟಿಯಾ ಅವರು ಲಂಡನ್ನಿನಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ಭಾರತಕ್ಕೆ ಹಿಂದಿರುಗಿದಾಗ 1955 ರಲ್ಲಿ ಆಕೆಯ ಆಶ್ರಮಕ್ಕೆ ಭೇಟಿ ನೀಡಿದರು. ಅವತ್ತೇ ಶ್ರದ್ಧಾ ದೆಹಲಿಗೆ ಹಿಂದಿರುಗುತ್ತಿದ್ದರಿಂದ ತೆವಾಟಿಯಾ ಕೂಡ ತನ್ನೊಂದಿಗೆ ತನ್ನ ಹೊಸ ಪಕಾರ್ಡ್ ಕಾರಿನಲ್ಲಿ ಬರುವಂತೆ ಶ್ರದ್ಧಾ ಸೂಚಿಸಿದಳು. ತೆವಾಟಿಯಾ ನೆನಪಿಸಿಕೊಳ್ಳುವಂತೆ ಆಗ ಶ್ರದ್ಧಾಳ ಕಾರ್ ಡ್ರೈವರ್ ಆಗಿದ್ದವನು ಓರ್ವ ಸುಂದರರೂಪಿ ಫ್ರೆಂಚ್ ಮನುಷ್ಯ. ಶ್ರದ್ಧಾಳಿಗೆ ಆ ದುಬಾರಿ ಕಾರ್ ಕೊಡಿಸಿದವರು ಯಾರು? ಆ ಫ್ರೆಂಚ್ ಪ್ರಜೆ ಅಲ್ಲೇನು ಮಾಡುತ್ತಿದ್ದ ಎಂಬುದೂ ನಿಗೂಢವಾಗಿದೆ. ಅವತ್ತು ಶ್ರದ್ಧಾಳೊಂದಿಗೆ ಪ್ರಯಾಣಿಸುತ್ತಿದ್ದಾಗ "ನಿನಗೆ ವಿದೇಶಿ ಹೆಂಡತಿ ಸಿಕ್ಕಿಲ್ಲವೆ?" ಎಂದು ಶ್ರದ್ಧಾ ಕೇಳಿದಳಂತೆ. ಅದಕ್ಕೆ ತೆವಾಟಿಯಾ ಅವರು "ಭಾರತೀಯರು ವಿದೇಶಿಯರನ್ನು ಮದುವೆ ಆಗುವುದನ್ನು ನೀವು ವಿರೋಧಿಸುತ್ತೀರಲ್ಲವೇ?" ಎಂದು ಕೇಳಿದಾಗ "ಭಾರತೀಯರು ದುಷ್ಟರು, ವಿದೇಶಿಯರೇ ಎಷ್ಟೋ ವಾಸಿ" ಎಂದು ಉತ್ತರಿಸಿದಳಂತೆ.

ಜವಾಹರ್‌ಲಾಲ್ ನೆಹರೂ 1964 ರಲ್ಲಿ ತೀರಿಕೊಂಡರು. ಪ್ರಾಯಶಃ ಅದಾದ ನಂತರವೇ ಶ್ರದ್ಧಾ ಜೈಪುರಕ್ಕೆ ಹೋಗಿ ಅಲ್ಲೊಂದು ಆಶ್ರಮವನ್ನು ಸ್ಥಾಪಿಸಿ ಅಲ್ಲೇ ವಾಸಿಸತೊಡಗಿದಳು. 1966 ರಲ್ಲಿ ತೆವಾಟಿಯ ಆಕೆಯನ್ನು ಮತ್ತೊಮ್ಮೆ ಭೇಟಿಯಾದರು. ಅಷ್ಟೊತ್ತಿಗಾಗಲೇ ಶ್ರದ್ಧಾ ವಿವಿಧ ರೀತಿಯಲ್ಲಿ ಬದಲಾಗಿದ್ದಳು. ತನ್ನ ದೇಹ ತೂಕವನ್ನು ಸಾಕಷ್ಟು ಇಳಿಸಿಕೊಂಡಿದ್ದ ಶ್ರದ್ಧಾ ಆ ಹೊತ್ತಿಗೆ ಎಡಪಂಥೀಯಳಾಗಿದ್ದಳು ಮತ್ತು ಪ್ರಗತಿಪರ ಧೋರಣೆಯನ್ನು ಮೈಗೂಡಿಸಿಕೊಂಡಿದ್ದಳು. ಅಂದಿನ ಭೇಟಿಯಲ್ಲಿ ಇಂದಿರಾ ಗಾಂಧಿ ಬಗ್ಗೆ ಕಿಡಿಕಾರಿದ್ದ ಶ್ರದ್ಧಾ "ಆ ಮಾಟಗಾತಿ ನನ್ನ ರಕ್ತ ಹೀರಬೇಕೆಂದಿದ್ದಾಳೆ" ಎಂದಿದ್ದಳು. ಆದರೆ ಅಂದು ತೆವಾಟಿಯಾ ಅವರಿಗೆ ಆಕೆಯ ಮಾತು ಅರ್ಥವಾಗಿರಲಿಲ್ಲ. ಆದಾದ ಹತ್ತು ವರ್ಷಗಳ ನಂತರ ವಾಡೆ ಅವರನ್ನು ಭೇಟಿ ಆಗಿ ಅವರಿಗೆ ಗೊತ್ತಿದ್ದನ್ನೆಲ್ಲ ಹೇಳಿದ ನಂತರವೇ ಶ್ರದ್ಧಾಳ ಮಾತಿನ ಒಳಾರ್ಥ ತೆವಾಟಿಯಾ ಅವರ ಅರಿವಿಗೆ ಬಂದದ್ದು.

ಈ ಮಧ್ಯೆ 1979 ರಲ್ಲಿ ಖುಷ್ವಂತ್ ಸಿಂಗ್ ಶ್ರದ್ಧಾಳನ್ನು ಜೈಪುರದಲ್ಲಿ ಭೇಟಿಯಾಗಿ ಸಂದರ್ಶಿಸಿದಾಗ ಆಕೆ ಹುಲಿ ಚರ್ಮವನ್ನು ಧರಿಸಲಾರಂಭಿಸಿದ್ದಳು.

ತೆವಾಟಿಯಾ ಅವರು ಶ್ರದ್ಧಾಳನ್ನು ಕೊನೆಯ ಬಾರಿಗೆ ಭೇಟಿ ಆಗಿದ್ದು 1985 ರಲ್ಲಿ. ಜೈಪುರದಲ್ಲಿ ಸಂಬಂಧಿಕರೊಬ್ಬರ ಮದುವೆಗೆ ಹೋಗಿದ್ದಾಗ ಆಕೆ ಹತ್ತಿರದಲ್ಲೇ ಇದ್ದು ಒಂದು ಪಾಳುಬಿದ್ದಿದ್ದ, ಆಕೆಯ ಶಿಷ್ಯರೊಬ್ಬರು ಅವಳಿಗೆ ದಾನ ಮಾಡಿದ್ದ ಕೋಟೆಯಲ್ಲಿ ವಾಸಿಸುತ್ತಿದ್ದಾಳೆ ಎಂದು ತೆವಾಟಿಯಾ ಅವರಿಗೆ ಗೊತ್ತಾಯಿತು. ಅಷ್ಟೊತ್ತಿಗಾಗಲೇ ಸಕ್ಕರೆ ಕಾಯಿಲೆ ಇತ್ಯಾದಿಗಳಿಂದಾಗಿ ಶ್ರದ್ಧಾ ಗುರುತೇ ಸಿಗದಷ್ಟು ಬದಲಾಗಿದ್ದಳು. ಆದರೂ ತೆವಾಟಿಯಾ ಹೇಳುವಂತೆ ಮೊದಲಿನಷ್ಟೇ ಆತ್ಮೀಯಳಾಗಿ ಅವರನ್ನು ಮಾತನಾಡಿಸಿದಳು.


ಅದಾದನಂತರ ಶ್ರದ್ಧಾಮಾತಾ ಯಾರ ಗಮನಕ್ಕೂ ಬಾರದೆ 1987 ರಲ್ಲಿ ಕೊನೆಯುಸಿರೆಳೆದಳು

▶▶▶

ಬದುಕೆಂಬುದು ಎಂತಹ ಅಚ್ಚರಿಗಳಿಂದ ಕೂಡಿರುತ್ತದೆ ನೋಡಿ. ತೆವಾಟಿಯಾ ಮತ್ತು ವಾಡೆ ಪ್ರಥಮ ಬಾರಿಗೆ ಭೇಟಿ ಆಗುತ್ತಿದ್ದರೂ, ತೆವಾಟಿಯಾ ಅವರಿಗೆ ಶ್ರದ್ಧಾಮಾತಾಳ ಪರಿಚಯ 25 ವರ್ಷಗಳಿಂದ ಇತ್ತು. ಅಷ್ಟೇ ಅಲ್ಲ, ಆಕೆಯೇ ತನ್ನೊಂದಿಗೆ ನೆಹರೂ ಆಪ್ತರಾಗಿದ್ದನ್ನು ತೆವಾಟಿಯಾ ಅವರಿಗೆ ಹೇಳಿದ್ದಳು. ಹಾಗಿದ್ದೂ ನೆಹರೂ ಮತ್ತು ಶ್ರದ್ಧಾಮಾತಾಳಿಗೆ ಗಂಡು ಮಗುವೊಂದು ಜನಿಸಿತ್ತು ಎಂದು ವಾಡೆ ಹೇಳಿದ್ದನ್ನು ಕೇಳಿ ತೆವಾಟಿಯಾ ದಂಗುಬಡಿದಿದ್ದರು!

ಯಾರೀ ಶ್ರದ್ಧಾಮಾತಾ?

ತೆವಾಟಿಯಾ ಅವರು 1952 ರಲ್ಲಿ ಲಂಡನ್ನಿನಲ್ಲಿ ಕಾನೂನು ವಿದ್ಯಾರ್ಥಿಯಾಗಿದ್ದಾಗ ಅವರು ಲಂಡನ್ನಿನ ಪಾರ್ಲಿಮೆಂಟ್ ರಸ್ತೆಯಲ್ಲಿದ್ದ ನಂಬರ್ 48 ಹೊಂದಿದ್ದ ಬೋರ್ಡಿಂಗ್ ಮನೆಯಲ್ಲಿ ವಾಸಿಸುತ್ತಿದ್ದರು. ಅದೇ ಮನೆಯಲ್ಲಿ ಶ್ರದ್ಧಾ ಕೂಡಾ ಒಂದೆರಡು ವರ್ಷ ವಾಸಿಸುತ್ತಿದ್ದಾಗ ಅವರಿಬ್ಬರ ಪರಿಚಯವಾಗಿತ್ತು. ತೆವಾಟಿಯಾ ಅವರು ಹೇಳುವ ಪ್ರಕಾರ "ಶ್ರದ್ಧಾ ಓರ್ವ ಸಂಪ್ರದಾಯಸ್ಥ ಹಿಂದೂ ಮಹಿಳೆಯಾಗಿದ್ದಳು. ನೋಡಲು ಆಕೆ ಅಷ್ಟೇನು ಸುಂದರಿ ಅಲ್ಲದಿದ್ದರೂ ಆಕೆಯ ದನಿ ಅದ್ಭುತವಾಗಿತ್ತು. ಉತ್ತಮ ವಾಗ್ಮಿಯೂ ಆಗಿದ್ದ ಶ್ರದ್ಧಾ ಮೀರಾ ಭಜನೆಗಳನ್ನು ಹಾಡಿದಳೆಂದರೆ ಆಕೆಯ ದನಿಯೇ ಕೇಳುಗರ ಮನಸೂರೆಗೊಳಿಸುತ್ತಿತ್ತು."




ತತ್ವಶಾಸ್ತ್ರದ ಬಗ್ಗೆ ಇಂಗ್ಲಿಷ್ ಮತ್ತು ಹಿಂದಿ ಪುಸ್ತಕಗಳನ್ನು ಅಪಾರ ಸಂಖ್ಯೆಯಲ್ಲಿ ಓದಿದ್ದ ಶ್ರದ್ಧಾಳೊಂದಿಗೆ ಆಗಿನ ಕಾಲದಲ್ಲಿ ತೆವಾಟಿಯಾ ಅವರು ಹಲವಾರು ಬಾರಿ ಚರ್ಚೆಗಳನ್ನು ನಡೆಸಿದ್ದರು.

ತೆವಾಟಿಯಾ ಅವರ ಪ್ರಕಾರ ಶ್ರದ್ಧಾ ಜನಿಸಿದ್ದು ಉತ್ತರ ಪ್ರದೇಶದ ಸುಲ್ತಾನಪುರದಲ್ಲಿ. ಆದರೆ ಅಯೋಧ್ಯೆ ಹತ್ತಿರವಿದ್ದ ಪುಟ್ಟ ಮಾಂಡಲೀಕನನ್ನು ಮದುವೆ ಆಗಿದ್ದ ಶ್ರದ್ಧಾಳ ತಂದೆಯ ಸಹೋದರರಿಗೆ ಶ್ರದ್ಧಾಳನ್ನು ದತ್ತು ಕೊಡಲಾಗಿತ್ತು. ಆಕೆಗೆ 14 ವರ್ಷ ತುಂಬಿದಾಗ ದೂರದ ಸಂಬಂಧಿಯಾಗಿದ್ದ ಮತ್ತು ಆಗ್ರಾದಲ್ಲಿ ವಕೀಲನಾಗಿದ್ದ ಓರ್ವನಿಗೆ ಮದುವೆ ಮಾಡಿಕೊಡಲಾಯಿತು. ಆಕೆಯ ದಾಂಪತ್ಯ ಜೀವನದಲ್ಲಿ ಅದೇನಾಯಿತೋ? ಮದುವೆಯಾದ ಎರಡು ವಾರಗಳ ನಂತರ ತನ್ನ ಗಂಡನನ್ನು ತೊರೆದು ಮಹಾತ್ಮಗಾಂಧಿಯವರ ಆಶ್ರಮದಲ್ಲಿ ಆಶ್ರಯ ಪಡೆದಳು. ಅಲ್ಲಿ ಕೆಲ ಸಮಯ ತಂಗಿದ್ದ ಶ್ರದ್ಧಾ ಆನಂತರ ಹಿಮಾಲಯಕ್ಕೆ ಓಡಿಹೋದಳು. ಆಕೆ ಮತ್ತೆ ಪ್ರತ್ಯಕ್ಷಳಾಗಿದ್ದು ಅವಳಿಗೆ 26 ವರ್ಷ ವಯಸ್ಸಾಗಿದ್ದಾಗ. ಅಷ್ಟೊತ್ತಿಗಾಗಲೇ ಆಕೆ ಸನ್ಯಾಸತ್ವವನ್ನು ಸ್ವೀಕರಿಸಿ ಉತ್ತಮ ವಾಗ್ಮಿಯಾಗಿ ಪರಿವರ್ತನೆಗೊಂಡಿದ್ದಳು.

1948 ರಲ್ಲಿ ಮೊದಲ ಬಾರಿಗೆ ನೆಹರೂ ಅವರನ್ನು ಭೇಟಿಯಾದ ಶ್ರದ್ಧಾ ಪ್ರಧಾನಿಯ ಮೇಲೆ ಎಂತಹ ಪ್ರಭಾವ ಬೀರಿದಳೆಂದರೆ ಆಕೆಯ ಭೇಟಿಗೆಂದು ಕೇವಲ ಹದಿನೈದು ನಿಮಿಷ ಮುಂಚಿತವಾಗಿ ನಿಗದಿ ಮಾಡಿದ್ದರೂ ಆಕೆಯೊಂದಿಗಿನ ಹರಟೆಯಲ್ಲಿ ಮೈಮರೆತ ನೆಹರೂ ಸುಮಾರು ಒಂದೂವರೆ ಗಂಟೆಯನ್ನು ಅವಳೊಂದಿಗೆ ಕಳೆದಿದ್ದರು.

ಅದಾದನಂತರ ಅವರಿಬ್ಬರೂ ಹಲವಾರು ಬಾರಿ ಭೇಟಿಯಾದರು. ಆದರೆ ಆಗತಾನೇ ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದರಿಂದ ಮತ್ತು ಹಲವಾರು ಸಮಸ್ಯೆಗಳು ಎದುರಾಗಿದ್ದರಿಂದ ನೆಹರೂ ಅವರು ತುಂಬ ಸಮಯದ ಒತ್ತಡವನ್ನು ಎದುರಿಸುತ್ತಿದ್ದರು. ಆ ಕಾರಣ ಶ್ರದ್ಧಾಳೊಂದಿಗೆ ಅವರ ಭೇಟಿ ರಾತ್ರಿ ಹತ್ತು ಗಂಟೆಯ ನಂತರವೇ ಸಂಭವಿಸುತ್ತಿದ್ದವು.

ಆ ಭೇಟಿ ಸಂದರ್ಭಗಳಲ್ಲಿ ಏನು ನಡೆಯುತ್ತಿತ್ತು ಎಂದು ಯಾರಿಗೂ ಗೊತ್ತಿಲ್ಲ. ಆದರೆ ಒಂದು ಸುಳಿವನ್ನು ತೆವಾಟಿಯಾ ಅವರಿಗೆ ಶ್ರದ್ಧಾಳೇ ಒಮ್ಮೆ ನೀಡಿದಳು. "ನಾವಿಬ್ಬರೂ ಅವತ್ತೂ ಎಂದಿನಂತೆ ಚರ್ಚೆಯಲ್ಲಿ ತೊಡಗಿದ್ದೆವು. ಹಸ್ತರೇಖಾಶಾಸ್ತ್ರ ಎಷ್ಟು ವಿಚಾರಹೀನ ಎಂದು ನಾನು ವಾದಿಸುತ್ತಿದ್ದೆ. ಆಗ ಆಕೆ "ಪಂಡಿತ್‌ಜಿ ಅವರು ವಿಚಾರ ವಾದಿಗಳು ಎಂದು ನೀನು ನಂಬಿದ್ದೀಯಾ. ಆದರೆ ಅವರೇ ಮಗುವಿನಂತೆ ತಮ್ಮ ಹಸ್ತವನ್ನು ನನಗೆ ತೋರಿಸುತ್ತಿದ್ದರು ಎಂದಿದ್ದಳು" ಎನ್ನುತ್ತಾರೆ ತೆವಾಟಿಯಾ.



ಹಾಗೆಯೇ 1979 ರಲ್ಲಿ ಖುಷ್ವಂತ್ ಸಿಂಗ್ ಅವರು ಶ್ರದ್ಧಾಮಾತಾಳನ್ನು ಸಂದರ್ಶಿಸಿದಾಗ ಆಕೆ "ಔರಂಗಜೇಬ್ ರಸ್ತೆಯಲ್ಲಿರುವ ಬಂಗಲೆಯಲ್ಲಿ ನಾನು ಮತ್ತು ನೆಹರೂ ಪ್ರಥಮ ಬಾರಿ ಭೇಟಿಯಾದಾಗಲೇ ನಮ್ಮಿಬ್ಬರ ನಡುವೆ ಜನ್ಮಾಜನ್ಮಾಂತರ ಸಂಬಂಧ ವಿರುವಷ್ಟು ಸಹೃದಯಿಗಳಾದೆವು." ಎಂದು ಹೇಳಿದ್ದಳು.

ಅದೇ ಸಂದರ್ಶನದಲ್ಲಿ ಆಕೆ ಹೇಳಿದ್ದು: "ಪಂಡಿತ್‌ಜಿ ನನ್ನತ್ತ ಆಕರ್ಷಿತರಾಗಿದ್ದಾರೆ ಎಂಬುದು ನನಗೆ ಗೊತ್ತಾಗಿತ್ತು. ನನ್ನ ವಾಕ್‌ಚಾತುರ್ಯ ಅವರ ಮೇಲೆ ಪ್ರಭಾವ ಬೀರಿತ್ತು, ಇದನ್ನು ನೋಡಿಯೂ (ತನ್ನ ಮುಖದತ್ತ ಬೆರಳು ಮಾಡಿ) ಅವರು ಆಕರ್ಷಿತರಾಗಿದ್ದರು ಎಂಬುದೂ ನಿಜ. ನಾನು ಅವರನ್ನು ಹಲವಾರು ಬಾರಿ ಭೇಟಿಯಾಗಿ ಅವರೊಂದಿಗೆ ಹಲವಾರು ಗಂಟೆಗಳನ್ನು ಕಳೆದೆ. ನಿಧಾನವಾಗಿ ಅವರಲ್ಲಿ ನನ್ನ ಬಗ್ಗೆ ಅನುರಾಗ ಮೂಡಿತು. ನನ್ನ ಮದುವೆ ಬಗ್ಗೆ ಮತ್ತು ನನ್ನ ಗಂಡನ ಬಗ್ಗೆ ಅವರು ಬಹಳಷ್ಟು ಸಲ ಕೇಳಿದ್ದರು. ಒಂದನ್ನಂತೂ ದೃಢವಾಗಿ ಹೇಳಬಲ್ಲೆ. ನಾನು ಸನ್ಯಾಸತ್ವವನ್ನು ಸ್ವೀಕರಿಸದೆ ಸ್ವತಂತ್ರಳಾಗಿದ್ದರೆ, ನೆಹರು ಜೀವನದಲ್ಲಿ ಬಂದುಹೋಗಿದ್ದ ಲೇಡಿ ಮೌಂಟ್ ಬ್ಯಾಟನ್, ಪದ್ಮಜಾ ನಾಯ್ಡು ಮೃಣಾಲಿನಿ ಸಾರಾಬಾಯ್‌ಗಳಂತ ಮಹಿಳೆಯರ ಬದಲಾಗಿ ನನ್ನನ್ನೇ ಮದುವೆ ಆಗುತ್ತಿದ್ದರು. ಆದರೆ ಅದು ಸಾಧ್ಯವಾಗಿರಲಿಲ್ಲ. ನಾನು ಸನ್ಯಾಸಿನಿ ಆಗಿರುವುದರಿಂದಲೂ, ಅವರು ಬ್ರಾಹ್ಮಣರಾಗಿದ್ದುದರಿಂದಲೂ ಅವರ ಹಿಂದೂ ಸಂಸ್ಕೃತಿಯನ್ನು ಎತ್ತಿಹಿಡಿಯಬೇಕು ಎಂದು ನಾನು ಅವರಿಗೆ ಖಡಾಖಂಡಿತವಾಗಿ ಹೇಳಿದ್ದೆ."

"ನಿಮ್ಮಿಬ್ಬರ ಸಂಬಂಧ ಕೇವಲ ತಾತ್ವಿಕ ಸ... ವಾಗಿತ್ತೊ ಅಥವಾ ಅದನ್ನು ಮೀರಿದ್ದ ಸಂಬಂಧವಾ... ಎಂದು ಖುಷ್ವಂತ್ ಸಿಂಗ್ ಶ್ರದ್ಧಾಮಾತಾಳನ್ನು ಕೇ... ಆಕೆ ತಮ್ಮ ನಡುವೆ ದೈಹಿಕ ಸಂಬಂಧವಿರಲಿಲ್ಲ... ಉತ್ತರಿಸಿದಳು. ಆದರೆ ಆಕೆಯ ಉತ್ತರವನ್ನು ... ನಂಬಿರಲಿಲ್ಲ, "ಆಕೆ ಹೇಳಿದ್ದರಲ್ಲೇ ಅವರ ನಡುವೆ ಸ... ವಿತ್ತೆಂದು ಸ್ಪಷ್ಟವಾಗಿ ಗೋಚರಿಸಿತ್ತು" ಎಂದು ... ಹೇಳುತ್ತಾರೆ.

ತೆವಾಟಿಯಾ ಅವರಿಗೆ ಸ್ವತಃ ಶ್ರದ್ಧಾ ಹೇಳಿದ್ದು... ಅವರಿಗೆ ಸಿಕ್ಕಿದ್ದ ಪತ್ರಗಳು, ಎಜಕಿಯಲ್ ದಂಪ... ಆಕೆಯನ್ನು ಹೆರಿಗೆ ಆಸ್ಪತ್ರೆಗೆ ಸೇರಿಸಿದ್ದು... ಇದ... 1949 ರಲ್ಲಿ ನೆಹರೂ ಮತ್ತು ಶ್ರದ್ಧಾಳಿಗೆ ಬೆಂಗಳೂ... ಒಂದು ಗಂಡು ಮಗ ಜನಿಸಿದ್ದನ್ನು ಸ್ಪಷ್ಟಪಡಿಸು...


ಆದರೆ ಆನಂತರ ಆ ಮಗು ಏನಾಯಿತು ಎಂ... ಮಾತ್ರ ಯಾರಿಗೂ ಗೊತ್ತಿರುವಂತಿಲ್ಲ.

ಎಜೆಕಿಯಲ್ ದಂಪತಿಗಳು ಮತ್ತು ವಾಡೆಯ... ಆ ಮಗು ಹುಟ್ಟುವಾಗಲೇ ಪ್ರಾಣ ಕಳೆದುಕೊಂ... ಆದರೆ ಅಂದು ನೆಹರೂ ಅವರ ಆಪ್ತ ಕಾರ್ಯದರ್ಶಿಯ... ಎಂ.ಓ. ಮಥಾಯ್ ಎಂಬಾತನ ಪ್ರಕಾರ ಆ ಹ... ಜೀವಂತವಾಗಿದ್ದು ಆತ ಎಲ್ಲೋ ಕ್ಯಾಥೊಲಿಕ್ ಕ್ರಿಶ್ಚಿ... ಆಗಿ, ತಾನು ನೆಹರೂ ಅವರ ಪುತ್ರ ಎಂಬ ಅ... ಇಲ್ಲದೆ ಜೀವಿಸುತ್ತಿದ್ದಾರೆ.

ಅದು ನಿಜವೇ ಆಗಿದ್ದರೆ, ನೆಹರೂ ಅವ... ಪುತ್ರನಿಗೆ, ಇಂದಿರಾ ಗಾಂಧಿಯ ಆ ತಮ್ಮನಿಗೆ ... ಅರವತ್ತು ವರ್ಷ ವಯಸ್ಸಾಗಿದೆ!



ಟ್ರಯಾಂಗಲ್ ಲವ್ವಲ್ಲಿ ಮೇಘಾ ಮರ್ಡರ್



ಹುಚ್ಚುಪ್ರೇಮಕ್ಕೆ ಹರೆಯದ ಹುಡುಗಿ ಮೇಘಾ ಬಲಿಯಾಗಿದ್ದಾಳೆ. 'ತನಗೆ ದಕ್ಕದವಳು ಇನ್ನಾರಿಗೂ ದಕ್ಕಬಾರದು' ಎಂಬ ವಿಕ್ಷಿಪ್ತ ಹಟಕ್ಕೆ ಬಿದ್ದ ಪ್ರವೀಣ್ ಎಂಬ ಮಜ್ನು ಹಾಡುಹಗಲೇ ಖ್ಯಾತ ಅಯೋಧ್ಯೆ ಹೋಟೆಲಿನಲ್ಲಿ ಮೇಘಾಳನ್ನು ಇರಿದು ಕೊಂದಿದ್ದಾನೆ. ತಾನೂ ಹೊಟ್ಟೆಗೆ ಚುಚ್ಚಿಕೊಂಡು ಆಸ್ಪತ್ರೆ ಪಾಲಾಗಿದ್ದಾನೆ. ಇಷ್ಟಾದ ಮೇಲೂ ಆತನಿಗೆ ತನ್ನ ತಪ್ಪಿನ ಅರಿವಾಗಿಲ್ಲ, ಪಶ್ಚಾತ್ತಾಪವಾಗುತ್ತಿಲ್ಲ. ಬದಲಿಗೆ 'ಇನ್ಮುಂದೆ ಯಾವ ಹುಡುಗಿಯೂ ಯಾರಿಗೂ ಕೈಕೊಡಬಾರದು. ಈ ಪ್ರಕರಣ ಲವ್ ಮಾಡೋ ಹುಡುಗಿಯರಿಗೆ ಪಾಠವಾಗಲಿ' ಎಂದೆಲ್ಲ ಪತ್ರಕರ್ತರ ಮುಂದೆ ಹಲುಬಿದ್ದಾನೆ.

ಐದ್ವರ್ಷದ ಪ್ರೇಮ... ಆದರೆ?

ಮೇಘಾ ಸಾವಂತ್ ಹುಬ್ಬಳ್ಳಿಯ ತಾಳಿಹಾಳದ ರೂರಲ್ ಪಾಲಿಟೆಕ್ನಿಕ್‌ನಲ್ಲಿ ಪ್ರಥಮ ವರ್ಷದ ವಿದ್ಯಾರ್ಥಿನಿ. ಪ್ರವೀಣ್ ತಿರ್ಲಾಪೂರ ಹುಬ್ಬಳ್ಳಿಯ ಕೆಎಲ್‌ಇ ಪಾಲಿಟೆಕ್ನಿಕ್‌ನಲ್ಲಿ ಮೂರನೇ ಸೆಮಿಸ್ಟರ್ ವಿದ್ಯಾರ್ಥಿ. ಇಬ್ಬರೂ ತಡಸ ಗ್ರಾಮದಿಂದ ಟ್ರಾವಲಿಂಗ್ ಮಾಡುತ್ತ ಬಂದವರು.... ಸುಮಾರು ಐದು ವರ್ಷಗಳಿಂದ ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರು. ಈಗ್ಗೆ 2 ವರ್ಷದ ಹಿಂದೆ ತಡಸದಲ್ಲಿ ದೈಹಿಕ ಶಿಕ್ಷಕರಾಗಿದ್ದ ಪ್ರವೀಣ್ ತಂದೆಗೆ ನಿವೃತ್ತಿಯಾದ್ದರಿಂದ ಅವರ ಕುಟುಂಬ ಹುಬ್ಬಳ್ಳಿಗೆ ಶಿಫ್ಟ್ ಆಯ್ತು. ಆಗ ಮೇಘಾ-ಪ್ರವೀಣರ ಪ್ರೇಮ ಪಂದ್ಯಕ್ಕೆ ಮೂರು ವರ್ಷ ತುಂಬಿತ್ತು. ಪ್ರವೀಣ್ ಹುಬ್ಬಳ್ಳಿಗೆ ಶಿಫ್ಟ್ ಆದ ಮೇಲೂ ನಿತ್ಯ ತಡಸದಿಂದ ಹುಬ್ಬಳ್ಳಿಗೆ ಬರುತ್ತಿದ್ದ ಮೇಘಾಳನ್ನು ಸಂಧಿಸುತ್ತಿದ್ದ. ಈ ಪ್ರೇಮಿಗಳಿಬ್ಬರೂ ಮದುವೆಯಾಗಲು ನಿರ್ಧರಿಸಿದರು. ಆದರೆ ಮನೆಯಲ್ಲಿ ಜಾತಿ ಅಡ್ಡ ಬಂತು. ಕೊನೆಗೆ ಪ್ರವೀಣನ ತಂದೆತಾಯಿಗಳು ಒಪ್ಪಿ ಮೇಘಾಳ ತಂದೆತಾಯಿಗಳನ್ನು ಮದುವೆಗೆ ಒಪ್ಪಲು ಹೇಳಿದರು. ಆದರೆ ಅದು ಸಫಲವಾಗಲಿಲ್ಲ. ಇದರಿಂದ ಇಬ್ಬರೂ ಪ್ರೇಮಿಗಳು ನೊಂದುಕೊಂಡರು.



ಮುಂದೆ ಎಂದಿನಂತೆ ಇವರ ವಿದ್ಯಾರ್ಥಿ ಜೀವನ ಮುಂದುವರೆಯಿತು. ಅದೇನಾಯಿತೋ ಗೊತ್ತಿಲ್ಲ, ಮೇಘಾ ತನ್ನ ಕಾಲೇಜಿನ ಸಹಪಾಠಿ ಪುನೀತ್‌ನಿಗೆ ಹತ್ತಿರವಾಗತೊಡಗಿದಳು. ಪುನೀತ್ ಜೊತೆ ಮೇಘಾ ತಿರುಗಾಡುವುದು ಪ್ರವೀಣ್‌ಗೆ ಇರಿಸುಮುರಿಸುಂಟುಮಾಡಿತು. ಒಂದೆರಡು ಸಲ ಈ ಕುರಿತು ಮೇಘಾಗೆ 'ಬುದ್ಧಿ' ಹೇಳಿದ. ಒಮ್ಮೆ 'ವಾರ್ನಿಂಗ್' ಮಾಡಿದ. ಆದರೆ ಮೇಘಾ ತನ್ನಿಷ್ಟದಂತೆ ಪುನೀತ್ ಜೊತೆ ಸುತ್ತುವುದನ್ನು ಬಿಡಲಿಲ್ಲ.

'ತನಗೆ ದಕ್ಕದ ಮೇಘಾ ಪುನೀತ್‌ಗೂ ದಕ್ಕಬಾರದು' ಎಂದು ತಲೆ ಕೆಡಿಸಿಕೊಂಡ ಪ್ರವೀಣ್ ಅನಾಹುತ ಮಾಡಲು ತಯಾರಾದ.

ಅಕ್ಟೋಬರ್ 12 ರಂದು ಎಂದಿನಂತೆ ಮೇಘಾ ತಡಸದಿಂದ ತಾರಿಹಾಳದ ಕಾಲೇಜಿಗೆ ಬಂದಿದ್ದಾಳೆ. ನಂತರ ಪುನೀತ್ ಜೊತೆ ಅಡ್ಡಾಡಲು ಹೋಗಿದ್ದಾಳೆ. ಮೇಘಾಳನ್ನು ಹುಡುಕುತ್ತ ಬಂದ ಪ್ರವೀಣ್ 'ನಿನ್ನೊಂದಿಗೆ ಇಂಪಾರ್ಟೆಂಟು ಮಾತಾಡೊದೈತಿ ಬಾ' ಎಂದು ಮೇಘಾಳನ್ನು ಹಳೆ ಬಸ್‌ಸ್ಟ್ಯಾಂಡ್ ಎದುರಿಗಿರುವ ಅಯೋಧ್ಯೆ ಹೋಟೆಲಿಗೆ ಕರೆದಿದ್ದಾನೆ. ಪುನೀತ್‌ನಿಗೆ ಅಲ್ಲೇ ಕಾಯುವಂತೆ ತಾಕೀತು ಮಾಡಿದ್ದಾನೆ. ಪ್ರವೀಣನಿಗೆ ತಾನು ಪುನೀತ್‌ನನ್ನೇ ಪ್ರೀತಿಸುವುದನ್ನು ಖಡಾಖಂಡಿತವಾಗಿ ಹೇಳಿಬಿಡೋಣ ಎಂದು ನಿರ್ಧರಿಸಿದ ಮೇಘಾ ಪ್ರವೀಣನೊಂದಿಗೆ ಅಯೋಧ್ಯೆ ಹೋಟೆಲಿಗೆ ಹೋಗಿದ್ದಾಳೆ. ಕಾಮನ್ ಹಾಲ್ ಗದ್ದಲವಿರುವುದರಿಂದ ಎಸಿ ರೂಮಲ್ಲಿ ಕೂಡೋಣ ಎಂದು ಮೇಘಾಳನ್ನು ಎಸಿ ಹಾಲ್‌ಗೆ ಕರೆದೊಯ್ದಿದ್ದಾನೆ ಪ್ರವೀಣ್. ವೇಟರ್‌ಗೆ ಸಾಕಷ್ಟು ತಿಂಡಿ ಆರ್ಡರ್ ಮಾಡಿದ್ದಾನೆ. ಎಸಿ ಹಾಲ್‌ನಲ್ಲಿದ್ದ ಇತರ ಕೆಲ ಗ್ರಾಹಕರು ಹೊರಹೋದನಂತರ ಮೇಘಾಳೊಂದಿಗೆ ಕ್ಯಾತೆ ತೆಗೆದಿದ್ದಾನೆ ಪ್ರವೀಣ್. ತಾನು ಪುನೀತ್‌ನನ್ನೇ ಪ್ರೀತಿಸುವುದಾಗಿ ಕಡ್ಡಿ ತುಂಡು ಮಾಡಿದಂತೆ ಮೇಘಾ ಹೇಳಿದ್ದಾಳೆ. ಮೊದಲೇ ಪ್ಲಾನು ಮಾಡಿ ತಂದಿದ್ದ ಹೊಸ ಚಾಕು ಹೊರತೆಗೆದ ಪ್ರವೀಣ್ ಮೇಘಾಳ ಕುತ್ತಿಗೆ ಕೊಯ್ದುಬಿಟ್ಟಿದ್ದಾನೆ. ಯಾವಾಗ ವೇಟರ್‌ಗಳು ಓಡಿಬಂದರೋ ಆಗ ಗಾಬರಿ ಬಿದ್ದ ಪ್ರವೀಣ್ ತಾನೂ ಚುಚ್ಚಿಕೊಂಡಿದ್ದಾನೆ. ಪೊಲೀಸರು ಬಂದು ಇಬ್ಬರನ್ನು ಕಿಮ್ಸ್‌ಗೆ ಒಯ್ದಿದ್ದಾರೆ. ದಾರಿ ಮಧ್ಯದಲ್ಲೇ ಮೇಘಾಳ ಪ್ರಾಣ ಹಾರಿಹೋಗಿದೆ. ಹುಂಬ ಪ್ರವೀಣ ವಿಕೃತಾನಂದದಲ್ಲಿ ಕಿಮ್ಸ್‌ನಲ್ಲಿ ಹುಚ್ಚನಂತೆ ಹಲುಬುತ್ತ ಬಿದ್ದಿದ್ದಾನೆ. ಅನ್ಯಾಯವಾಗಿ ಹದಿನೆಂಟರ ಹರೆಯದ ಹುಡುಗಿಯೊಬ್ಬಳು ಬಲಿಯಾಗಿ ಹೋಗಿದ್ದಾಳೆ.

● ಹುಬ್ಬಳ್ಳಿಯಾಂ...


ನಾರಾಯಣರೆಡ್ಡಿಯವರನ್ನು ಅವಮಾನಿಸಿದ ಕೃಷಿ ಮಿಷನ್

ಸಂಘ ಪರಿವಾರದ ಹಿಂದೂತ್ವ ಸಿದ್ಧಾಂತವನ್ನು ...ಗೆ ತಲುಪಿಸುವುದನ್ನೇ ತನ್ನ ಅಜೆಂಡಾವನ್ನಾಗಿ ...ಡಿಕೊಂಡಿರುವ 'ಕೃಷಿ ಮಿಷನ್' ಎಂಬ ಸರ್ಕಾರದ ...ಸ್ಥೆಗಳ ಅಧ್ವ ರಾಜ್ಯದ ಸಾವಯುವ ಕೃಷಿ ಋಷಿ ...ಯಣರೆಡ್ಡಿಯವರಿಗೆ ಅವಮಾನ ಮಾಡಿದೆ.

...ಸಾವಯುವ ಕೃಷಿಕರಿಗೆಲ್ಲಾ ನಾರಾಯಣರೆಡ್ಡಿ ...ಚಿತರು. ಆಂರ ದಶಕದಲ್ಲಿಯೇ ಸಾವಯುವ ... ಆರಂಭಿಸಿ, ಇದುವರೆಗೆ ನೂರಾರು ರೈತರಿಗೆ ...ರು ಪ್ರೇರಣೆ ನೀಡಿದ್ದಾರೆ. 74 ಹರೆಯದಲ್ಲಿಯೂ ...ದ್ಯಂತ ಓಡಾಡುತ್ತಾ ರೈತರಿಗೆ ಮಾರ್ಗದರ್ಶನ ...ತ್ತಿದ್ದಾರೆ.

...ಖರ್ ಮಾತಿಗೆ ಹೆಸರಾದ ನಾರಾಯಣರೆಡ್ಡಿ ...ದಲಿನಿಂದಲೂ ರೈತರ ಹೆಸರಿನಲ್ಲಿ ಸರ್ಕಾರ ದುಡ್ಡು ...ಲು ಮಾಡುವುದನ್ನು ವಿರೋಧಿಸಿಕೊಂಡೇ ...ವರು. ವಿಚಾರಸಂಕಿರಣವಿರಲಿ, ರೈತರ ಸಭೆ ... ಕೃಷಿ ಇಲಾಖೆಯ ಅಧಿಕಾರಿಗಳಿಗೆ ಇವರು ...ಸ್ವರ ಬರಿಸುವುದು ಸಾಮಾನ್ಯ. ಇಂತಹ ...ಯರನ್ನು ಕೃಷಿ ಮಿಷನ್ ದೂರವಿಟ್ಟು, ರೈತಪರ ... ಮಾಡಲು ಹೊರಟಿದೆ. ಇಲ್ಲಿ 'ರೈತ ಪರ' ...ರೆ 'ಆರೆಸ್ಸೆಸ್ ಪರ' ಎಂದೇ ಅರ್ಥ.

...ಕ್ಕೆ ನಾರಾಯಣರೆಡ್ಡಿ ಅಡ್ಡಗಾಲು ...ಹುತ್ತಾರೆಂದು ಅವರು ಮಿಷನ್ ...ಸ್ಥರಾದರೂ ಅವರನ್ನು ಸಭೆಗೆ ...ಸ್ವನಿಸುತ್ತಲೇ ಇರಲಿಲ್ಲ. ಮಿಷನ್ ... ಭ್ರಷ್ಟಾಚಾರ, ಸ್ವಜನಪಕ್ಷ ...ದಿಂದ ಬೇಸತ್ತ ನಾರಾಯಣರೆಡ್ಡಿ ...ತ್ವಕ್ಕೆ ಈಗ ರಾಜೀನಾಮೆ ...ದು ಬಂದಿದ್ದಾರೆ. ಇದನ್ನು ...ಕೊಳ್ಳುವ ಧೈರ್ಯ ಕೂಡ ... ಸರ್ಕಾರಕ್ಕೆ ಬಂದಿಲ್ಲ. ಹಾಗಾಗಿ ರಾಜೀನಾಮೆಯನ್ನು ...ಡಿ ಹಾಕಿಕೊಂಡು ಕುಳಿತಿದೆ.



ಎಲ್ಲ 'ಆನಂದ'ಮಯ!

...ಮುಖ್ಯಮಂತ್ರಿ ಯಡ್ಡಿ ತೀರ್ಥಹಳ್ಳಿಯ ಪುರು...ತ್ತಮರಾಯ ಎಂಬ ಕಪಟ ಸಾವಯುವ ಕೃಷಿಕನ ...ಷ್ಯ ಆನಂದ ಎಂಬಾತನನ್ನು ರಾಜ್ಯ ಕೃಷಿ ಮಿಷನ್‌ನ ...ಕ್ಷನನ್ನಾಗಿ ಮಾಡಿದ್ದಾರಲ್ಲದೆ ಆತನಿಗೆ ಸಚಿವ ಸಂಪುಟ ...ಯ ಸ್ಥಾನ-ಮಾನವನ್ನೂ ನೀಡಿದ್ದಾರೆ. ಇದನ್ನು ... ತಕ್ಷಣ ರಾಜ್ಯದ ಕೃಷಿಕರನ್ನು ತಮ್ಮ ಕೋಮುವಾದಿ ...ತಕ್ಕೆ ಒಲಿಸಿಕೊಳ್ಳಲು ಹೊಂಚು ಹಾಕಿ ಕುಳಿತಿದ್ದ ...ಪರಿವಾರದ ಹಿರಿ-ಕಿರಿ ತಲೆಗಳೆಲ್ಲಾ ಒಂದಾಗಿ ...ನ್‌ನಲ್ಲಿ ತೂರಿಕೊಂಡಿವೆ.

...ರೈತರಿಗೆ 'ರಾಮ್ ರಾಮ್' ಹೇಳಿಕೊಡುವುದು, ...ವಿನ 'ಮಹತ್ವ'ವನ್ನು ತಿಳಿಸಿಕೊಡುವುದು (ಕೃಷಿಗೆ ...ಕವಾಗಿಯಲ್ಲ, ಹಸುಗಳು ಎಷ್ಟು ಪೂಜ್ಯ ಪ್ರಾಣಿ, ... ಕೋಡಿನಿಂದ ಬಾಲದ ತುದಿಯವರೆಗೆ ಎಲ್ಲೆಲ್ಲಿ ... ದೇವರು ನೆಲೆಸಿದ್ದಾರೆ ಎಂಬುದನ್ನು ತಿಳಿಸುವುದು; ...ಮಾಂಸ ತಿನ್ನುವ ಸಾಬರ ವಿರುದ್ಧ ದ್ವೇಷದ ಬೀಜ ...ವುದು) ಈ ಮಿಷನ್‌ನ ಈಗಿನ ಮುಖ್ಯ ಕಾರ್ಯಕ್ರಮವಾಗಿದೆ. ಇದನ್ನೆಲ್ಲಾ ಬೋಧಿಸಲೆಂದೇ ಸಭೆ ಕರೆದರೆ ನಮ್ಮ ರೈತರು ತಮ್ಮ ಕೆಲಸವನ್ನೆಲ್ಲ ಬಿಟ್ಟಿರುವುದಿಲ್ಲ ಎಂದು ಸರ್ಕಾರದ ಮತ್ತು ಮಿಷನ್‌ನ ಚೆಡ್ಡಿಗಳಿಗೂ ಗೊತ್ತು. ಆದ್ದರಿಂದ ಇವರ ಸಭೆಗಳಲ್ಲಿ ರೈತರು ಭಾಗವಹಿಸುವಂತೆ ಮಾಡಲು ಸರ್ಕಾರದ ಮೂರು ಕಾಸಿನ ಯೋಜನೆಗಳನ್ನು ಈ ಮಿಷನ್ ಮೂಲಕವೇ ರೈತರಿಗೆ ಒದಗಿಸಿ, ಅವರನ್ನು ಆಕರ್ಷಿಸಲಾಗುತ್ತದೆ.

ಎರೇಹುಳ ಗುಂಡಿ ನಿರ್ಮಾಣಕ್ಕೆ ಸಬ್ಸಿಡಿ, ಸಗಣಿ ಗ್ಯಾಸ್ ಗುಂಡಿ ನಿರ್ಮಾಣಕ್ಕೆ ಸಬ್ಸಿಡಿ (ಗಮನಿಸಿ: ಇದು ಕೇಂದ್ರ ಸರ್ಕಾರದ ಯೋಜನೆ), ಅಜೋಳ ಬೆಳೆಸಲು ಸಬ್ಸಿಡಿ ಹೀಗೆ ಸಬ್ಸೀಡಿ ನೀಡುವ ಪುಡಿಗಾಸು ಯೋಜನೆಗಳ ಹೆಸರಿನಲ್ಲಿ ರೈತರ ಮೂಗಿಗೆ ತುಪ್ಪ ಸವರಿ ತಮ್ಮ ಸಿದ್ಧಾಂತದತ್ತ ಆಕರ್ಷಿಸಲಾಗುತ್ತಿದೆ. ಇನ್ನುಳಿದ ಸಮಯದಲ್ಲಿ ಅರ್ಥಂಬರ್ಥ ಸಾವಯುವ ಕೃಷಿಯ ಬಗ್ಗೆ ಪಾಠ ಮಾಡಿ ರೈತರ ದಿಕ್ಕುತಪ್ಪಿಸಲಾಗುತ್ತಿದೆ. ಸಾವಯುವ ಕೃಷಿ ಪರಿವಾರ ಎಂಬ ಸಂಘಟನೆಯನ್ನು ಪ್ರತಿ ಗ್ರಾಮ ಮಟ್ಟದಲ್ಲಿಯೂ ರಚಿಸಿ, ರೈತರ ದಿಕ್ಕು ತಪ್ಪಿಸುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ.

ರಾಜ್ಯದ ರೈತರೆಂದರೆ ಬೆಳೆದಿದ್ದನ್ನೆಲ್ಲಾ ತಾವೇ ತಿನ್ನುತ್ತಾ ಕೃಷಿಯ ಬಗ್ಗೆ ಭಾಷಣ ಬಿಗಿಯುತ್ತಾ ಪ್ರಶಸ್ತಿಗಾಗಿ ಪರದಾಡುವವರಲ್ಲ. ನಮ್ಮ ರೈತರು ತಾವು ಬೆಳೆದಿದ್ದರಲ್ಲಿ ಬಹುತೇಕ ಭಾಗವನ್ನು ಮಾರಿ, ಅದರಿಂದ ಬರುವ ಆದಾಯದಲ್ಲಿಯೇ ಜೀವನ ಸಾಗಿಸುವವರು. ಇವರ ಜೀವನ ಶೈಲಿ, ಕೃಷಿ ರೀತಿಯನ್ನು ಬದಲಾಯಿಸಬೇಕೆಂದರೆ ಸರ್ಕಾರವೇ ವ್ಯವಸ್ಥಿತವಾಗಿ ಕೆಲಸ ಮಾಡಬೇಕಿದೆ. ಈಗ ಬೆಳೆದ ಬೆಳೆಗೇ ಸರಿಯಾದ ರೇಟು ಸಿಗದೆ ರೈತರು ಕಂಗೆಡುತ್ತಿದ್ದಾರೆ. ಸಾಲ ತೀರಿಸಲಾಗದೆ ನೇಣಿಗೆ ಕೊರಳೊಡ್ಡುತ್ತಿದ್ದಾರೆ. ಸರಿಯಾದ ಸಮಯಕ್ಕೆ ಬೀಜ, ಗೊಬ್ಬರ (ಅದೂ ರಾಸಾಯನಿಕ ಗೊಬ್ಬರ, ಸಾವಯುವ ಗೊಬ್ಬರ ನೀಡುವ ಮಾತು ದೂರದ್ದು ಬಿಡಿ) ನೀಡಲಾಗದಿರುವಾಗ ಸರ್ಕಾರ ಕೃಷಿ ಮಿಷನ್ ಮೂಲಕ ಸಾವಯುವ ಕೃಷಿಯೇ 'ಪರಿಹಾರ' ಎಂದು ಪ್ರಚಾರ ಮಾಡುತ್ತಿರುವುದು ಕಪಟನಾಟಕವಾಗಿದೆ.

ನಾಳೆ ಸಾವಯುವ ಕೃಷಿ ಪದ್ಧತಿಯಲ್ಲಿಯೇ ರೈತರು ಕಷ್ಟಪಟ್ಟು ಬೆಳೆ ಬೆಳೆದರು ಎಂದುಕೊಳ್ಳಿ, ಆಗಲೂ ಸರಿಯಾದ ಮಾರುಕಟ್ಟೆ ವ್ಯವಸ್ಥೆ ಇಲ್ಲದೆ ಇದ್ದರೆ ಈಗಿನ ಪರಿಸ್ಥಿತಿಯೇ ಮುಂದುವರೆಯಲಿದೆ. ಒಟ್ಟಾರೆ ಸರ್ಕಾರ ಮಾಡಬೇಕಾದ ಕೆಲಸ ಮಾಡದೆ, ಅರ್ಥಂಬರ್ಥ ವ್ಯವಸ್ಥೆ ರೂಪಿಸಿ ರೈತರನ್ನು ನಡುನೀರಿನಲ್ಲಿ ಕೈಬಿಡುತ್ತಿದೆ.


ಕೃಷಿ ಮಿಷನ್‌ನ ಅಧ್ಯಕ್ಷ ಆನಂದ್ ಒಂದು ರೀತಿಯಲ್ಲಿ ಸರ್ವಾಧಿಕಾರಿ. ರೈತರ ಹೆಸರಿನಲ್ಲಿ ವಿದೇಶಿ ಪ್ರವಾಸ ಕೂಡ ಮಾಡಿಬಂದಿರುವ ಈತನ ಸ್ವಜನಪಕ್ಷಪಾತ ಕಂಡು ರೈತರೆಲ್ಲಾ ದಂಗಾಗಿಹೋಗಿದ್ದಾರೆ. ಅಧಿಕಾರಿಗಳು ಬಾಯಿಗೆ ಬೀಗ ಹಾಕಿಕೊಂಡು ಕೂತಿದ್ದಾರೆ. ಯಡಿಯೂರಪ್ಪ ರೈತರ ಪರ ಹೋರಾಟ ನಡೆಸಿದ್ದನ್ನು (?!) ಭಾವನಾತ್ಮಕವಾಗಿ ರೈತರ ಮುಂದೆ ಬಿಚ್ಚಿಡುತ್ತಾ, ರೈತರಲ್ಲಿ ಸರ್ಕಾರ ವಿರೋಧಿ ಭಾವನೆ ಮೂಡದಂತೆ ಮಾಡುವುದು ಈತನ ಮೊದಲ ಕೆಲಸ. ನಂತರ ಆರೆಸ್ಸೆಸ್ ಸಿದ್ಧಾಂತ ಬೋಧಿಸುವುದು.

'ನಾನು ಪ್ರಾಮಾಣಿಕ' ಎಂದು ತನಗೆ ತಾನೇ ಸರ್ಟಿಫಿಕೇಟ್ ಕೊಟ್ಟುಕೊಂಡು ಓಡಾಡುವ ಈತನ ಪ್ರಕಾರ ರೈತರೆಲ್ಲಾ ಋಷಿಗಳಂತೆ. ಅವರು ಋಷಿಗಳಂತೆಯೇ ಆಸೆ-ಆಮಿಷಗಳಿಲ್ಲದೆ ಬದುಕಬೇಕು ಎಂದು ಬೋಧಿಸುತ್ತಾನೆ. ಆದರೆ ಆ ಋಷಿಗಳನ್ನೇ ಸರ್ಕಾರ ಗುಂಡಿಕ್ಕಿ ಕೊಂದಾಗ, ಅವರಿಗೆ ಬಿತ್ತಲು ಬೀಜ ಕೂಡ ಸರಿಯಾಗಿ ವಿತರಣೆ ಮಾಡದಿದ್ದಾಗ ಈತನಿಗೇನೂ ಅನ್ನಿಸಲಿಲ್ಲ. ಆದರೆ ಹಿಂದೊಮ್ಮೆ ಯಾವಾಗಲೋ ಯಡ್ಡಿ ಕಾಲ್ನಡಿಗೆ ಜಾಥಾ ನಡೆಸಿದ್ದಾಗ ಅವರ ಕಾಲು ಊದಿಕೊಂಡಿದ್ದನ್ನು ನೋಡಿ ಈತನಿಗೆ ದುಃಖ ತಡೆಯಲಾಗಿರಲಿಲ್ಲವಂತೆ. ಇತ್ತೀಚೆಗೆ ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ಇದನ್ನು ಕಣ್ಣೀರಿಡುತ್ತಾ ವರ್ಣಿಸಿ, ರೈತರನ್ನು ಭಾವನಾತ್ಮಕವಾಗಿ ಬ್ಲಾಕ್‌ಮೇಲ್ ಮಾಡಲು ಪ್ರಯತ್ನಿಸಿದ್ದ.

ರೈತರ ಹೆಸರಿನಲ್ಲಿ ಇಂತಹ ಆಟ ಕಟ್ಟುವ ಹಲವಾರು ಸರ್ಕಾರಗಳನ್ನು ನೋಡಿದ್ದ ನಾರಾಯಣರೆಡ್ಡಿ ಈಗ ಈ ಚೆಡ್ಡಿಗಳ ಕೃಷಿ ಮಿಷನ್ ಸಹವಾಸವೇ ಬೇಡ ಎಂದು ಹೊರ ನಡೆದಿದ್ದಾರೆ. ರಾಜೀನಾಮೆ ಅಂಗೀಕರಿಸಿ ಎಂದರೆ 'ನಿಮ್ಮನ್ನು ನಿರ್ಲಕ್ಷ್ಯಮಾಡಿಲ್ಲ' ಎಂದು ಆನಂದ್ ಮತ್ತು ಆತನ ತಂಡ ಅವರ ಮುಂದೆ ಅಂಗಲಾಚುತ್ತಿದೆ. ಆದರೆ ವಾಸ್ತವವಾಗಿ ಇತ್ತೀಚೆಗೆ ವಿಧಾನಸೌಧದ ಆವರಣದಲ್ಲಿ ನಡೆದ ಸಾವಯುವ ಕೃಷಿ ಮಾಡುವ ಪ್ರಮಾಣವಚನ ಸ್ವೀಕರಿಸುವ ಕಾರ್ಯಕ್ರಮಕ್ಕೆ, ರೈತಗೀತೆ ಘೋಷಣೆ ಕಾರ್ಯಕ್ರಮಕ್ಕೆ ನಾರಾಯಣರೆಡ್ಡಿ ಅವರನ್ನು ಕರೆದೇ ಇರಲಿಲ್ಲ. ಅಕಸ್ಮಾತ್ ಅವರು ಆ ಕಾರ್ಯಕ್ರಮಗಳಿಗೆ ಬಂದಿದ್ದರೆ ಅವರು 'ರಾಮ್ ರಾಮ್' ಹೇಳುವುದಿಲ್ಲ ಎಂಬ ಭಯವಿರಬೇಕು ಆನಂದ ಮತ್ತಾತನ ಕೇಸರಿ ಮಿತ್ರರಿಗೆ.

ಮುಗ್ಧ ರೈತರು ಕೃಷಿ ಮಿಷನ್‌ನ 'ರಾಮಭಕ್ತ'ಗೆ ಮರುಳಾಗಿ, ದಿಕ್ಕು ತಪ್ಪದಂತೆ ನೋಡಿಕೊಳ್ಳುವುದು ಈಗ ರೈತಸಂಘದ ಮುಂದಿರುವ ಬಹುದೊಡ್ಡ ಜವಾಬ್ದಾರಿ.

○ ವರದಿಗಾರ



ರೈತ ಗೀತೆ ಸಾಕೇ ಮಿಸ್ಟರ್ ಆನಂದ್?

"ಸಮಾಜದ ಎಲ್ಲ ಸ್ತರದ ಜನತ ರೈತರ ಬಗ್ಗೆ ... [illegible]

[illegible]

ಸಾವಯುವ ಕೃಷಿಯಲ್ಲೂ ಕೇಸರೀಕರಣ

▶ ಕೆ.ಆರ್. ವಿದ್ಯಾಧರ ಅವರ ಲೇಖನಕ್ಕೆ ಪ್ರತಿಕ್ರಿಯೆ

...ಇಡೀ ಕರ್ನಾಟಕದ ... ಇಲ್ಲಿನ ಎಲ್ಲಾ ಲಿಂಗಾಯತ, ಶೂದ್ರ ... ದಲಿತ ಮಠಗಳನ್ನು ಮತ್ತು ಅವುಗಳ ಸ್ವಾಮೀಜಿಯವರನ್ನು ...ವಾಗಿ ಕೇಸರೀಕರಣಗೊಳಿಸಿದ Fascist ಸರಕಾರವೊಂದು ಜನರ ...ಜ ಕೃಷಿಯನ್ನು ಅದರಲ್ಲೂ ಅತ್ಯಂತ ಬಹಿರಂಗವಾಗಿ ಸಾವಯುವ ... - ಕೇಸರೀಕರಣಗೊಳಿಸಿ, ಅದನ್ನೊಂದು ಸರ್ಕಾರಿ ಆಂದೋಲನ ...ಗಿ ಜಾರಿಗೊಳಿಸುತ್ತಿರುವುದನ್ನು ಸಮರ್ಥವಾಗಿ ಲೇಖಕ ಕೆ.ಆರ್. ವಿದ್ಯಾಧರ ... ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ.

...ಇದಕ್ಕೆ ಪೂರಕವಾಗಿ ... [illegible] ... ಸಾವಯುವ ಕೃಷಿ ಪದ್ಧತಿ ... [illegible] ... ಶಿವಮೊಗ್ಗದ ಕೆಲವು ತಾಲೂಕುಗಳಲ್ಲಿ ... [illegible] ... ಅವುಗಳ ಬಗ್ಗೆ ಸಮ್ಮೊಂದಿಗೆ ಹಂಚಿಕೊಂಡ ... [illegible] ... ಅವು ಹೀಗಿವೆ:

...ಶಿವಮೊಗ್ಗದ ... [illegible] ... ರೈತರ ಸಂಘದ ಎಲ್ಲಾ ... [illegible] ... ಅಥವಾ ಸಂಘಪರಿವಾರದ ... [illegible]

- ಸರ್ಕಾರ ಸಾವಯುವದ ಕೃಷಿಗೆ ನೀಡಿದ ಸಹಾಯಧನಕ್ಕೋಸ್ಕರ ಬಹುತೇಕ 'ರಾವ್'-'ಭಟ್'ಗಳು ತಮ್ಮ ಹೊಲಗದ್ದೆಗಳನ್ನು ತಮ್ಮದೇ ಸಂಘಗಳ ಮುಖಾಂತರ ತಮ್ಮವರಿಗೆ ಸರ್ಕಾರದಿಂದ ದೃಢೀಕರಣಗೊಳಿಸುತ್ತಿದ್ದಾರೆ.
- ದಲಿತ/ಹಿಂದುಳಿದ ಕೃಷಿಕರಿಗೆ ಸಾವಯುವ ಕೃಷಿಯ ಬಗ್ಗೆಯಾಗಲಿ, ಅದಕ್ಕೆಂದು ನೀಡುವ ಸಹಾಯ ಧನದ ಬಗ್ಗೆಯಾಗಲಿ ಜಾಗೃತಿ ಇಲ್ಲ ಅಥವಾ ಆ ಮಾಹಿತಿಯನ್ನು ಗೌಪ್ಯವಾಗಿ ಇಡಲಾಗಿದೆ.
- ದೃಢೀಕರಣಗೊಂಡ ಎಷ್ಟೋ ಹೊಲಗದ್ದೆಗಳಲ್ಲಿ ಸಾವಯುವ ಕೃಷಿ ಪದ್ಧತಿಯಲ್ಲಿ ಉಲ್ಲೇಖಿಸಿರುವ ವಿಧಾನಗಳನ್ನು, ಕೃಷಿ ಉಪಕರಣಗಳನ್ನು ಬಳಸದೇ ಇರುವುದು.
- ದೃಢೀಕರಣಗೊಂಡ ನಂತರ, ಬಹುತೇಕ ಕಡೆಗಳಲ್ಲಿ, ರಾಸಾಯನಿಕ ಗೊಬ್ಬರಗಳನ್ನು ಬಳಸುತ್ತಿರುವುದು, ಇತ್ಯಾದಿ.

ಈ ಸಾವಯುವ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡಿರುವ ಬಹುತೇಕರು ದೊಡ್ಡ ಭೂಮಾಲೀಕರೇ. ಸಣ್ಣ ಹಿಡುವಳಿದಾರರು ಇಲ್ಲವೇ ಇಲ್ಲ ಅಥವಾ ಕಡಿಮೆ ಎನ್ನಬಹುದು. ಇಡೀ ಶಿವಮೊಗ್ಗ ಜಿಲ್ಲೆಯ ಸಾವಯುವ ಕೃಷಿ ಸಂಘಗಳಲ್ಲಿ ಸಂಘಪರಿವಾರಿಗಳು ಇರುವುದನ್ನು ನೋಡಿದರೆ, ಖಂಡಿತ ವಾಗಿಯೂ ಈ ರಾಜ್ಯದಲ್ಲಿ ಬರುವ ದಿನಗಳಲ್ಲಿ ಇಡೀ ಕೃಷಿ ಪದ್ಧತಿಯನ್ನೇ ಪುರೋಹಿತಶಾಹಿ ಕೃಷಿ ಪದ್ಧತಿಯನ್ನಾಗಿ ಜಾರಿ ಮಾಡಿ 'ಹಿಂದೂ' ಕೃಷಿ ಪದ್ಧತಿಯ ಜೀವನ ವಿಧಾನವೊಂದು ರೂಪುಗೊಳ್ಳುವ ದುರಂತ ಲಕ್ಷಣ ಸ್ಪಷ್ಟವಾಗಿ ಗೋಚರಿಸುತ್ತಿವೆ. ಆದರೆ ಲೇಖಕರೇ ಹೇಳಿರುವಂತೆ ತಮ್ಮ ಅಡಿಕೆ ತೋಟದ ಕೃಷಿಯಲ್ಲಿ ಪಾಳೇಕರ್ ಅವರ ನೈಸರ್ಗಿಕ ಕೃಷಿ ಪದ್ಧತಿಯಿಂದ ಬಂಪರ್ ಬೆಳೆ ಬರದಿದ್ದರೂ ...ಕಗಳಿಂದ ತೋಟವನ್ನು ಮುಕ್ತಗೊಳಿಸಿರುವುದೇ ಸಮಾಧಾನದ ಸಂಗತಿಯಾಗಿದೆ. ಆದರೆ ಅವರ ಅಭಿಪ್ರಾಯ ಪಾಳೇಕರ್ ಕೃಷಿ ಪದ್ಧತಿಯ ಬಗ್ಗೆ ಅನುಮಾನ ಮೂಡಿಸುವಂತಿದೆ.

ಹಸಿರು ಕ್ರಾಂತಿಯ ವೈಫಲ್ಯವನ್ನು ಎತ್ತಿತೋರಿಸಲು ... [illegible] ... ಸಾವಯುವ ಕೃಷಿ ಪದ್ಧತಿಯ ... [illegible] ...ಗಳನ್ನು ಮತ್ತು ಹೊಸ ಬಂಡವಾಳದ ನೈಸರ್ಗಿಕ ಕೃಷಿ ಪದ್ಧತಿಯ ... [illegible] ... ವೈಜ್ಞಾನಿಕ ಅಧ್ಯಯನ ನಡೆಸಿ, ಸತ್ಯವನ್ನು ಪ್ರಕಟಪಡಿಸಿ ಕೃಷಿ ಪದ್ಧತಿಯಲ್ಲಿನ ಗೊಂದಲಗಳನ್ನು ನಿವಾರಿಸಬಹುದಲ್ಲವೇ? ಅಂದಹಾಗೆ ವಿದ್ಯಾಧರ ಅವರ ಲೇಖನದೊಂದಿಗಿದ್ದ Cartoon the best.

● ಮಾದರ ರಂಗ, ... [illegible]

ನಮ್ಮ ಹುಡುಗಿ ಅವರ ಹುಡುಗ


ಮಂಗಳೂರಿನಲ್ಲಿ ಗುಂಪು ಹಲ್ಲೆ

ಇತ್ತೀಚೆಗೆ ಕುಂದಾಪುರದ ಬಟ್ಟೆ ಮಳಿಗೆಯೊಂದರ ಮುಸ್ಲಿಮ್ ಮಾಲೀಕ ತನ್ನ ಹಿಂದೂ ಮಹಿಳಾ ನೌಕರರನ್ನು ರಂಜಾನ್ ಪ್ರಯುಕ್ತ ಮಧ್ಯಾಹ್ನದ ಊಟಕ್ಕೆ ಕರೆದಿದ್ದರು. ಅಷ್ಟಕ್ಕೇ ಅಪಾರ್ಥ ಕಲ್ಪಿಸಿಕೊಂಡ ಭಜರಂಗಿಗಳು ಅವರ ಮೇಲೆ ಹಲ್ಲೆ ನಡೆಸಿದರು. ಆ ಕುರಿತು ಪತ್ರಿಕೆಯ ಅಕ್ಟೋಬರ್ 10 ರ ಸಂಚಿಕೆಯಲ್ಲಿ ಪ್ರಕಟವಾದ ವರದಿಯ "ಭಜರಂಗಿಗಳೇ ಹಿಂದೂ ಹುಡುಗಿಯರ ಮಾನ ತೆಗೆದರು" ಎಂಬ ತಲೆಬರಹ ಕುಂದಾಪುರದ ಭಜರಂಗಿಗಳ ಮೂರ್ಖ ಹಾಗೂ ಕೊಳಕು ಕೆಲಸವನ್ನು ಯಥಾವತ್ತಾಗಿ ವರ್ಣಿಸುತ್ತದೆ.

ಮೊನ್ನೆ ಮಂಗಳೂರಿನಲ್ಲಿ ಇದೇ ಘಟನೆ ಮರುಕಳಿಸಿದೆ. ಈ ಹಿಂದೆ ಮಂಗಳೂರಿನಲ್ಲಿ ಇಂತಹ ಹಲವು ಘಟನೆಗಳು ನಡೆದಿವೆಯಾದರೂ ಈ ಬಾರಿಯದ್ದರಲ್ಲಿ ಒಂದು ವಿಶೇಷವಿದೆ. ಘಟನೆ ಅದೇ; ಆದರೆ ಪಾತ್ರಗಳು ಅದಲುಬದಲಾಗಿವೆ. ಮೊನ್ನೆ ದಿ. 6 ಮಂಗಳವಾರ ಬೆಳಗ್ಗೆ ಮಂಗಳೂರಿನ ಬಸ್‌ಸ್ಟ್ಯಾಂಡ್ ಬಳಿ ಇರುವ ಸ್ವಾಗತ್ ಹೋಟಲಿನಲ್ಲಿ ಮುಸ್ಲಿಮ್ ಹುಡುಗಿಯೊಬ್ಬಳು ತನ್ನ ಪರಿಚಯದ ಹಿಂದೂ ಹುಡುಗನ ಜೊತೆ ಊಟ ಮಾಡುತ್ತಿದ್ದಳು. ಇದರಲ್ಲಿ ಏನು ವಿಶೇಷವಿದೆ? ಮಂಗಳೂರಿನ ಅತ್ಯಂತ ಜನನಿಬಿಡ ಪ್ರದೇಶದಲ್ಲಿರುವ ಸ್ವಾಗತ್ ಹೋಟಲು ಸದಾ ಗಿರಾಕಿಗಳಿಂದ ಗಿಜಿಗಿಜಿ ಎನ್ನುತ್ತಿರುತ್ತದೆ. ಅಲ್ಲಿ ಹಗಲು ಹೊತ್ತು ಒಬ್ಬ ಹುಡುಗ ಮತ್ತು ಹುಡುಗಿ ಊಟ ಉಪಾಹಾರ ಬಿಟ್ಟು ಇನ್ನೇನು ಮಾಡಲು ಸಾಧ್ಯ? ಇದೂ ಒಂದು ಪ್ರಶ್ನೆಯಾ ಎಂದು ಮೂಗು ಮುರಿಯಬೇಡಿ. ಮಂಗಳೂರು ನಗರದಲ್ಲಿ "ನಮ್ಮ" ಹುಡುಗಿ "ಅವರ" ಹುಡುಗನ ಜೊತೆ ಕಾಣಿಸಿಕೊಳ್ಳುವುದು ಅತಿ ದೊಡ್ಡ ನೈತಿಕ ಸವಾಲು. ಇಂತಹ ಜೋಡಿಗಳು ಕರಾವಳಿಯ ಪತ್ರಿಕೆಗಳು ವರದಿ ಮಾಡುವಂತೆ "ಚಕ್ಕಂದ, ಚೆಲ್ಲಾಟಗಳಲ್ಲಿ ತೊಡಗಿಕೊಂಡಿರುತ್ತವೆ." ಅವು ಒಮ್ಮೊಮ್ಮೆ "ರಾಸಕ್ರೀಡೆ"ಯವರೆಗೂ ಮುಂದುವರಿಯುವುದುಂಟು. ಭಜರಂಗಿಗಳು ಹಾಗೂ ಮಾಧ್ಯಮ-ಎರಡೂ ಒಟ್ಟಾಗಿ ನಡೆಸುವ ಈ ನೈತಿಕ ಪೊಲೀಸ್‌ಗಿರಿಯ ಹಿನ್ನೆಲೆಯಲ್ಲಿ ಮೊನ್ನೆ ಮುಸ್ಲಿಮ್ ಹುಡುಗಿಯೊಬ್ಬಳು ಹಿಂದೂ ಹುಡುಗನ ಜೊತೆ ಮಂಗಳೂರಿನ ಸ್ವಾಗತ್ ಹೋಟೆಲಿನ ಡೈನಿಂಗ್ ರೂಮಿನಲ್ಲಿ ಇದ್ದುದನ್ನು ನೋಡಿ ಸುಮಾರು 40 ಮುಸ್ಲಿಮ್ ತರುಣರ ಗುಂಪು ಹೋಟೆಲನ್ನು ಸುತ್ತುವರಿದು, ಆ ಹಿಂದೂ ಹುಡುಗನಿಗೆ ನಾಲ್ಕೇಟು ಬಾರಿಸಿ, ಹುಡುಗಿಯನ್ನು "ವಶಕ್ಕೆ ತೆಗೆದುಕೊಂಡಿದೆ." ಈ ಧರ್ಮ ಯುದ್ಧದಲ್ಲಿ ಜಯ ಗಳಿಸಿದ ಮುಸ್ಲಿಮ್ ವೀರರು ನಂತರ ಹುಡುಗಿಯ ಹೆತ್ತವರನ್ನೂ ಕರೆಸಿ "ಸೂಕ್ತ ಬುದ್ಧಿವಾದ" ಹೇಳಿ ಹುಡುಗಿಯನ್ನು ಅವರ "ವಶಕ್ಕೆ ಒಪ್ಪಿಸಿದರಂತೆ."

ಅದೇನು ಆ ಸ್ಥಳದ ಮಹಾತ್ಮೆಯೋ, ಇಂತಹ ಹಲವು ಘಟನೆಗಳು ಅಲ್ಲಿ ನಡೆದಿವೆ. ಎರಡು ವರ್ಷಗಳ ಹಿಂದೆ, ಅದೇ ಸ್ಥಳದಲ್ಲಿ ಸ್ವಾಗತ್ ಹೋಟೆಲಿನ ಎದುರು ಇರುವ ಸ್ಟಾರ್ ಟ್ಯೂಟೋರಿ ಯಲ್ಸ್‌ನ ಹಿಂದೂ ವಿದ್ಯಾರ್ಥಿನಿಯರ ಜೊತೆ ಅವರ ಇಬ್ಬರು ಮುಸ್ಲಿಮ್ ಸಹಪಾಠಿ ಹುಡುಗರು ಐಸ್‌ಕ್ರೀಮ್ ತಿನ್ನುತ್ತಿದ್ದುದನ್ನೇ "ಲವ್ ಮಾಡುತ್ತಿದ್ದರು" ಎಂದು ತಿಳಿದು ಭಜರಂಗಿಗಳು ಆ ಹುಡುಗರನ್ನು ರಿಕ್ಷಾದಲ್ಲಿ ಹಾಕಿಕೊಂಡು ಹೋಗಿ ಒಂದು ಅಪಾರ್ಟ್‌ಮೆಂಟ್‌ನ ಬೇಸ್‌ಮೆಂಟ್‌ನಲ್ಲಿ ಯದ್ವಾತದ್ವಾ ಬಾರಿಸಿದ್ದರು. ಈಗ ನಾಲ್ಕು ತಿಂಗಳ ಕೆಳಗೆ, ಸ್ವಾಗತ್ ಹೋಟೆಲಿನ ಪಕ್ಕದಲ್ಲಿರುವ ಗಣೇಶ್ ಪ್ರಸಾದ್ ಹೋಟೆಲಿನಲ್ಲಿ ಹಿಂದೂ ಕುಟುಂಬವೊಂದರ ಜೊತೆ ಅವರ ಅತಿಥಿಯಾಗಿ ಊಟ ಮಾಡುತ್ತಿದ್ದ ಮುಸ್ಲಿಮ್ ಗೃಹಸ್ಥರ ಮೇಲೆ ಹಲ್ಲೆ ನಡೆದಿತ್ತು. ತಮಾಷೆ ಎಂದರೆ ಮಂಗಳೂರಿನ ಕೋಮುಸೌಹಾರ್ದ ವೇದಿಕೆ-ಇಂತಹ ಘಟನೆಗಳ ವಿರುದ್ಧ ಪ್ರತಿಭಟನೆ ನಡೆಸುವುದೂ ಅದೇ ಜಾಗದಲ್ಲಿ.

ಇದೇ ದಿ. 9 ಶುಕ್ರವಾರ ಸಂಜೆ ವೇದಿಕೆ ಅಲ್ಲಿ ಒಂದು ಹಕ್ಕೊತ್ತಾಯ ಸಭೆ ನಡೆಸಿತ್ತು. ಉಪ್ಪಿನಂಗಡಿ ಬಳಿ ಇತ್ತೀಚೆಗೆ ನದಿಯಲ್ಲಿ ಮುಳುಗಿ ಸತ್ತ ಇಬ್ಬರು ಮುಸ್ಲಿಮ್ ತರುಣರು, ಭಜರಂಗಿಗಳಿಂದ ಮಾರಕ ಹಲ್ಲೆಗೊಳಗಾದ ಸುರತ್ಕಲ್‌ನ ಇಬ್ಬರು ಮುಸ್ಲಿಮರು ಹಾಗೂ ತ್ರಿಶೂಲದ ತಿವಿತದಿಂದ ಕಣ್ಣು ಕಳೆದುಕೊಂಡ ಬಂಟ್ವಾಳದ ಮುಸ್ಲಿಮ್ ಹುಡುಗನಿಗೆ ಸೂಕ್ತ ಪರಿಹಾರ ನೀಡುವಂತೆ ಸರ್ಕಾರವನ್ನು ಒತ್ತಾಯಿಸಲು ನಡೆಸಲಾದ ಸಭೆ ಅದು. ಸಭೆಯಲ್ಲಿ



ಮಾತಾಡಿದ ವೇದಿಕೆಯ ರಾಜ್ಯ ಕಾರ್ಯದರ್ಶಿ ಕೆ.ಎಲ್. ಅಶೋಕ್ ಸ್ವಾಗತ್ ಹೋಟೆಲಿನ ಘಟನೆಯನ್ನು ಕಟುವಾಗಿ ಖಂಡಿಸಿದರು. ಈ ಹಿಂದೆ ಹಲವು ಬಾರಿ, ಇದೇ ವೇದಿಕೆಯಲ್ಲಿ ಅಶೋಕ್ ಹಿಂದೂ ಮತಾಂಧ ಶಕ್ತಿಗಳಿಗೆ ಉಗಿದಿದ್ದರು. ಕೋಮು ಸೌಹಾರ್ದ ವೇದಿಕೆ ಮುಸ್ಲಿಮ್ ಮತೀಯವಾದದ ಕುರಿತು ಸದಾ ಮೌನ ವಹಿಸುತ್ತದೆ ಎಂಬ ಅಭಿಪ್ರಾಯವನ್ನು ವೇದಿಕೆಯ ವೈರಿಗಳು ಈಗ ಹುಟ್ಟುಹಾಕಿದ್ದಾರೆ. ಮೊನ್ನೆಯ ಸಭೆಯಲ್ಲಿ ಮುಸ್ಲಿಮ್ ಮತಾಂಧರನ್ನೂ ಅಶೋಕ್ ತಮ್ಮ ಭಾಷಣ[...] ಮುಲಾಜಿಲ್ಲದೆ ಖಂಡಿಸಿದ್ದರಿಂದ ಈ "ಆಸಕ್ತ ವಲಯ" [...] ಭಾರೀ ನಿರಾಶೆಯಾಗಿರಬಹುದು.

ಅಶೋಕ್ ತಮ್ಮ ಭಾಷಣದಲ್ಲಿ ಮುಸ್ಲಿಮ್ ತರು[...] ಈ ಅಕೃತ್ಯವನ್ನು ಖಂಡಿಸುವುದರ ಜೊತೆಗೆ "ನ[...] ಹುಡುಗಿ ಅವರ ಹುಡುಗ" ಎಂಬ ಮನೋಧರ್ಮವ[...] ಸ್ಪಷ್ಟವಾಗಿ ವಿರೋಧಿಸಿದರು. ಈ ಬಿಕ್ಕಟ್ಟು ಯಾವಾಗ[...] ನಮ್ಮ ಹುಡುಗಿ ಅವರ ಹುಡುಗನ ಜೊ[...] ಕಾಣಿಸಿಕೊಂಡಾಗ ಮಾತ್ರ ತಲೆದೋರುತ್ತದೆ. ನ[...] ಹುಡುಗ ಅವರ ಹುಡುಗಿ ಜೊತೆ ಹೋ[...] ಪರವಾಗಿಲ್ಲವಾ? ಹಿಂದೂ ಮತ್ತು ಮುಸ್ಲಿಮ್ ಎರ[...] ಸಮುದಾಯಗಳ ಬಹುತೇಕ ಜನರ ಮಟ್ಟಿಗೆ ಗ[...] ಮಾತ್ರ ವಂಶವನ್ನು ಮುಂದುವರಿಸುವವ; ಹೆ[...] ಅದರಲ್ಲಿ ಯಾವ ಸಕ್ರಿಯ ಪಾತ್ರವೂ ಇಲ್ಲ; ಹೆ[...] ಎಂದರೆ ಗಂಡಿನ ಬೀಜ ಚಿಗುರಿಸಲು ಇರುವ [...] ಮಾತ್ರ. ಮಾನವವಂಶ ಹಾಗೂ ತಳಿಕುರಿತ ಅತ್[...] ಅವೈಜ್ಞಾನಿಕವೂ, ಜೀವ ವಿರೋಧಿಯೂ ಆದ [...] ಗ್ರಹಿಕೆಯೇ "ನಮ್ಮ ಹುಡುಗಿ ಅವರ ಹುಡು[...] ಎಂಬ ಮೂರ್ಖ ಪೂರ್ವಗ್ರಹಿಕೆಗಳಿಗೆ ಕಾರಣವಾಗಿ[...] ಅಶೋಕ್ ಆವತ್ತಿನ ತಮ್ಮ ಭಾಷಣದಲ್ಲಿ ಸ್ವಾಗ[...] ಹೋಟೆಲಿನ ಘಟನೆಯ ಕುರಿತು ಹೇಳುತ್ತ 40-[...] ಜನರ ಗುಂಪು ಒಬ್ಬಿಬ್ಬರನ್ನು ಸುತ್ತುವರಿದು ಆಕ್ರಮ[...] ಮಾಡುವುದರ ಅನಾಗರಿಕತೆಯ ಕುರಿತೂ ಹೇಳಿದ[...] ಇಂತಹ ಆಕ್ರಮಣ ಕೇವಲ ಅನಾಗರಿಕವ[...] ಅಮಾನವೀಯವೂ ಹೌದು. ಒಂದು ಮಗುವಿಗ[...] ಅರ್ಥವಾಗುವ ಈ ಸರಳ ಮಾತನ್ನು ಇವತ್ತು ಮಂಗಳೂ[...] ಉಡುಪಿ, ಕುಂದಾಪುರ ಮುಂತಾದ ಸುಸಂಸ್ಕ[...] ಊರುಗಳಲ್ಲಿ ಸಾರ್ವಜನಿಕ ಸಭೆ ಮಾಡಿ, ಮೈಕ್ ಎದು[...] ನಿಂತು ಹೇಳಬೇಕಾಗಿದೆ!

ಡಾ. ಬಾಲಗೋಪಾಲ್


▶▶▶2

ಅಂಜುಮಾನ್ ಮೇಲಿನ ನಿಷೇಧದ ಪ್ರಕರಣದಲ್ಲಿ ಮತ್ತು ಇತ್ತೀಚೆಗೆ ಕರಾವಳಿಯಲ್ಲಿ ನಡೆದ ಚರ್ಚ್ ಮೇಲಿನ ದಾಳಿಯ ಸಂದರ್ಭದಲ್ಲಿ ಅಖಿಲ ಭಾರತೀಯ ಸತ್ಯಶೋಧನಾ ತಂಡದ ಭಾಗವಾಗಿ ಅವರು ಕರ್ನಾಟಕಕ್ಕೆ ಭೇಟಿ ನೀಡಿದ್ದರು. ಅಲ್ಲದೇ ಈ ನಾಡಿನ ಹಲವು ವಿಶ್ವವಿದ್ಯಾಲಯಗಳಲ್ಲಿ, ಮಾನವ ಹಕ್ಕುಗಳ ಕಾರ್ಯಕರ್ತರ ಶಿಬಿರಗಳಲ್ಲಿ ಭಾಗವಹಿಸಿ ಮಾನವ ಹಕ್ಕು ಮತ್ತು ಸಮಾಜ ಬದಲಾವಣೆಯ ಬಗ್ಗೆ ತಮ್ಮ ಅತ್ಯದ್ಭುತ ವಿಶ್ಲೇಷಣೆಯ ಮೂಲಕ ಮತ್ತು ಮಾರ್ಕ್ಸ್‌ವಾದಿ ಎನ್ನಬಹುದಾದ ತಾತ್ವಿಕ ನೆಲೆಗಟ್ಟಿನಲ್ಲಿ ಉಪನ್ಯಾಸಗಳನ್ನು ನೀಡಿ ಎಲ್ಲರ ಅರಿವಿನ ಎತ್ತರವನ್ನು ಹೆಚ್ಚಿಸಿದ್ದರು. ಅಷ್ಟು ಮಾತ್ರವಲ್ಲ, ಅವರು ಕೋರ್ಟನ್ನೂ ತಮ್ಮ ಹೋರಾಟದ ಕಣವಾಗಿ ಮಾಡಿಕೊಳ್ಳಲು ನಿರ್ಧರಿಸಿದ ಮೇಲೆ ವಕೀಲಿ ಪದವಿಯನ್ನು ಪಡೆದದ್ದೂ ಸಹ ಬೆಂಗಳೂರಿನಲ್ಲಿ.

ಬಾಲಗೋಪಾಲರು ಕೇವಲ ಒಬ್ಬ ಮಾನವ ಹಕ್ಕುಗಳ ಕಾರ್ಯಕರ್ತರಾಗಿದ್ದುದು ಮಾತ್ರವಲ್ಲ, ಒಬ್ಬ ಶ್ರೇಷ್ಠ ಚಿಂತಕರೂ ಮತ್ತು ಸಿದ್ಧಾಂತಕರ್ತರೂ ಆಗಿದ್ದರು. ತುರ್ತು ಪರಿಸ್ಥಿತಿಯ ಕಾಲದಲ್ಲಿ ಪ್ರಭುತ್ವವು ನಾಗರಿಕ ಹಕ್ಕುಗಳನ್ನು ಅಮಾನತ್ತುಗೊಳಿಸಿದ ಸಂದರ್ಭದಲ್ಲಿ ಮರುಜೀವ ಪಡೆದುಕೊಂಡ ನಾಗರಿಕ ಹಕ್ಕುಗಳ ಪರಿಕಲ್ಪನೆಯು ಬಾಲಗೋಪಾಲರು ಈ ವಲಯದಲ್ಲಿ ಕಾಲಿಡುವತನಕ ಹೆಚ್ಚಿನ ಸೈದ್ಧಾಂತಿಕ ಬೆಳವಣಿಗೆಯೇನೂ ಸಾಧಿಸಿರಲಿಲ್ಲ. ಆದರೆ ಬಾಲಗೋಪಾಲರು ಪ್ರಭುತ್ವ ನಡೆಸುವ ಮಾನವ ಹಕ್ಕುಗಳ ಉಲ್ಲಂಘನೆಯ ವಿರುದ್ಧ ಅವಿಶ್ರಾಂತವಾಗಿ ದನಿ ಎತ್ತುತ್ತಲೇ ಕೇವಲ ನಾಗರಿಕ ಹಕ್ಕುಗಳ ಪರಿಕಲ್ಪನೆಯಿಂದ ಮಾತ್ರವೇ ಮನುಷ್ಯರ ಸಂಪೂರ್ಣ ಮಾನವ ಹಕ್ಕುಗಳ ರಕ್ಷಣೆ ಸಾಧ್ಯವಿಲ್ಲವೆಂದು ಮನಗಂಡರು. ಏಕೆಂದರೆ ಮಾನವ ಹಕ್ಕುಗಳ ಉಲ್ಲಂಘನೆ ಕೇವಲ ಪ್ರಭುತ್ವದಿಂದ ಮಾತ್ರವಲ್ಲದೆ ಸಮಾಜದಲ್ಲಿರುವ ವರ್ಗ, ಜಾತಿ, ಲಿಂಗ ಮತ್ತು ಧರ್ಮಗಳಾಧಾರಿತ ತಾರತಮ್ಯಗಳಿಂದ ದತ್ತವಾಗುವ ಅಧಿಕಾರ ಕೇಂದ್ರಗಳಿಂದಲೂ ಸಂಭವಿಸುತ್ತದೆ ಎಂದು ಮಾನವ ಹಕ್ಕುಗಳ ಪರಿಕಲ್ಪನೆಯನ್ನು ಮತ್ತಷ್ಟು ವಿಸ್ತರಿಸಿದರು. ಹೀಗಾಗಿ ಮಾನವ ಹಕ್ಕು ಹೋರಾಟಗಾರರು ಕೇವಲ ಪ್ರಭುತ್ವದ ವಿರುದ್ಧವ ದನಿ ಎತ್ತುವುದು ಮಾತ್ರವಲ್ಲದೆ ಸಮಾಜದೊಳಗಿರುವ ಜಾತಿ, ವರ್ಗ ಸಂಬಂಧ, ಕುಟುಂಬ ಇನ್ನಿತ್ಯಾದಿ ರಚನೆಗಳಿಂದ ಸಂಭವಿಸುವ ಮಾನವ ಹಕ್ಕುಗಳ ಉಲ್ಲಂಘನೆಯ ವಿರುದ್ಧವೂ ದನಿ ಎತ್ತಬೇಕಾಗುತ್ತದೆಂದು ಎಲ್ಲಾ ಮಾನವ ಹಕ್ಕು ಸಂಘಟನೆಗಳಿಗೂ ಮನವರಿಕೆ ಮಾಡಿಕೊಟ್ಟರು. ಹೀಗಾಗಿಯೇ ಹಿಂದೂತ್ವವಾದಿ ಶಕ್ತಿಗಳು ಮತ್ತು ಜಾಗತೀಕರಣದ ಶಕ್ತಿಗಳು ಮಾನವ ಹಕ್ಕುಗಳನ್ನು ವ್ಯವಸ್ಥಿತವಾಗಿ ಹರಣ ಮಾಡುವುದರಿಂದ ಮಾನವ ಹಕ್ಕು ಹೋರಾಟಗಾರರು ಸಹಜವಾಗಿಯೇ ಅದರ ವಿರುದ್ಧ ಹೋರಾಡಬೇಕು ಎಂದು ವ್ಯಾಖ್ಯಾನ ಮಾಡಿದರು. ಈ ಸ್ಪಷ್ಟತೆ ಮಾನವ ಹಕ್ಕು ಹೋರಾಟಗಾರರಿಗೆ ಮಾತ್ರವಲ್ಲ, ಎಲ್ಲಾ ಹೋರಾಟಗಾರರಿಗೂ ಹೊಸ ಸೈದ್ಧಾಂತಿಕ ಶಕ್ತಿಯನ್ನೇ ಒದಗಿಸಿತು.

ಡಾ. ಬಾಲಗೋಪಾಲರನ್ನು ಹಿಂಸೆ ಮತು ಅಹಿಂಸೆಯ ಬಗೆಗಿನ ಚರ್ಚೆಗಳಲ್ಲೂ ವಿಶೇಷವಾಗಿ ನೆನಪಿಸಿಕೊಳ್ಳಲಾಗುತ್ತದೆ. ಸಾಮಾಜಿಕ ಬದಲಾವಣೆಯ ಹೋರಾಟಗಳಲ್ಲಿ ಅದರಲ್ಲೂ ನಕ್ಸಲೀಯ ಹೋರಾಟಗಳು ಬಳಸುವ ಹಿಂಸೆಯನ್ನು ಮಾನವ ಹಕ್ಕುಗಳ ಕಾರ್ಯಕರ್ತರು ಹೇಗೆ ಎದುರಾಗಬೇಕೆಂಬ ಬಗ್ಗೆ ಕೇವಲ ನೇಪಥ್ಯದಲ್ಲಿ ನಡೆಯುತ್ತಿದ್ದ ಚರ್ಚೆಯನ್ನು ಬಾಲಗೋಪಾಲ್ ಅವರು ಮುನ್ನೆಲೆಗೆ ತಂದರು. ಅದರ ಬಗ್ಗೆ ಅವರ ಅಂತಿಮ ದಿನಗಳಲ್ಲಿ ತಳೆದ ನಿಲುವು ಮೊದಲಿಗಿಂತ ಹೆಚ್ಚು ಸಮತೋಲನದಿಂದ ಕೂಡಿರುವುದು ನಿಜವಾದರೂ ಪ್ರಾರಂಭದಲ್ಲಿ ಅದು ಅಷ್ಟು ಸ್ಪಷ್ಟವಾಗಿರಲಿಲ್ಲ. ಯಾವುದೇ ಹೋರಾಟಗಾರರು ಅದರಲ್ಲೂ ಮುಖ್ಯವಾಗಿ ಮಾವೋವಾದಿಗಳು ತಮ್ಮ ಸಂಘರ್ಷದ ಭಾಗವಾಗಿ ನಡೆಸುವ ಹಿಂಸೆ ಅವರ ಉನ್ನತ ಉದ್ದೇಶಗಳ ಕಾರಣಕ್ಕಾಗಿಯೇ ಸಮರ್ಥನೀಯವಾಗಿಬಿಡುವುದಿಲ್ಲ ಮತ್ತು ಹಲವು ಬಾರಿ ಅವರು ನಡೆಸುವ ಬುದ್ಧಿಗೇಡಿ ಹಿಂಸೆಗಳು ಸಾಮಾನ್ಯ ಜನರ ಮೇಲೆ ಪ್ರಭುತ್ವ ಸೃಷ್ಟಿಸುವ ಭೀಭತ್ಸ ಪರಿಣಾಮವನ್ನೇ ಉಂಟುಮಾಡುತ್ತಾದ್ದರಿಂದ ಆ ಹಿಂಸೆಯೂ ಖಂಡನೀಯ ಎಂಬುದು ಅವರ ಪ್ರಾರಂಭಿಕ ನಿಲುವಾಗಿತ್ತು. ಈ ನಿಲುವಿಗಾಗಿ ಅವರು ಹಲವಾರು ಸ್ನೇಹಿತರ ವೈಮನಸ್ಯವನ್ನೂ ಕಟ್ಟಿಕೊಳ್ಳಬೇಕಾಯಿತು. ಆ ಭಿನ್ನಾಭಿಪ್ರಾಯಗಳ ಬೆನ್ನಲ್ಲೇ ಎಪಿಸಿಎಲ್‌ಸಿಯಿಂದ ಹೊರಬಂದು "ಮಾನವ ಹಕ್ಕುಗಳ ವೇದಿಕೆ"ಯನ್ನು ಪ್ರಾರಂಭಿಸಿದರು.

ಆದರೆ ತಮ್ಮ ಪ್ರಾರಂಭಿಕ ನಿಲುವುಗಳಲ್ಲಿ ಇರಬಹುದಾದ ಕೆಲವು ಅತಿರೇಕಗಳನ್ನು ಬಹಳ ಬೇಗನೇ ಬಾಲಗೋಪಾಲ್ ಅವರು ಅರ್ಥ ಮಾಡಿಕೊಂಡರು. ತಮ್ಮ ನಿಲುವುಗಳು ಜನರ ಹೋರಾಟಗಳ ವಾಸ್ತವತೆಗಳ ಅರಿವೇ ಇಲ್ಲದಂಥ "ರೊಮ್ಯಾಂಟಿಕ್ ಅಹಿಂಸಾವಾದ"ವಾಗಿಬಿಡುವ ಅಪಾಯವನ್ನೂ ಅವರು ಮನಗಂಡರು. ಹೀಗಾಗಿಯೇ ಹಿಂಸಾತ್ಮಕ ಹೋರಾಟಗಳನ್ನು ಅನಿವಾರ್ಯ ಮಾಡುವ ಪ್ರಭುತ್ವ ಹಿಂಸೆಯ ಬಗೆಗೆ ಮಾನವ ಹಕ್ಕು ಹೋರಾಟಗಾರರು ತಮ್ಮ ಪ್ರಧಾನ ಗಮನವನ್ನು ಕೇಂದ್ರೀಕರಿಸುವುದು ಉಚಿತವೆಂದು ಅವರು ಇತ್ತೀಚಿನ ವರ್ಷಗಳಲ್ಲಿ ಕಂಡುಕೊಂಡಿದ್ದರು. ಅದೇ ರೀತಿ ಒಂದು ಆದರ್ಶ ಸಮಾಜವನ್ನು ಆಶಯವಾಗುಳ್ಳ



ಹಿಂಸಾತ್ಮಕ ಹೋರಾಟಗಳು ತಮ್ಮ ಆಚರಣೆಯಲ್ಲೂ ಅಂಥಾ ಆದರ್ಶವನ್ನು ಪಾಲಿಸಬೇಕೆಂಬುದು ಅವರ ಆಗ್ರಹವಾಗಿತ್ತು. ಹಿಂಸಾತ್ಮಕ ಹೋರಾಟಗಳಾಗಲೀ ಅಹಿಂಸಾತ್ಮಕ ಹೋರಾಟಗಳಾಗಲೀ ಜಾಗತೀಕರಣದ ಈ ಕಾಲಘಟ್ಟದಲ್ಲಿ ಸರ್ಕಾರದ ಯಾವುದೇ ಜನ ವಿರೋಧಿ ನೀತಿಗಳನ್ನು ಆಮೂಲಾಗ್ರವಾಗಿ ಹಿಮ್ಮೆಟ್ಟಿಸುವಲ್ಲಿ ವಿಫಲವಾಗುತ್ತಿರುವುದೇಕೆ ಎಂಬುದರ ಬಗ್ಗೆ ಅವರು ಸದಾ ಕಳವಳಗೊಳ್ಳುತ್ತಲೇ ಪರ್ಯಾಯ ಹೋರಾಟ ಮಾರ್ಗವೇನಿರಬಹುದೆಂಬ ವಿಶ್ಲೇಷಣೆಯಲ್ಲಿ ತೊಡಗಿರುತ್ತಿದ್ದರು. ವಿಪರ್ಯಾಸವೆಂದರೆ ಜನರ ಬದುಕು ಮತ್ತು ಹೋರಾಟಗಳೊಡನೆ ಯಾವುದೇ ಸಾವಯವ ಸಂಬಂಧವಿರದ ಕರ್ನಾಟಕದ ಹಲವು ಬುದ್ಧಿಜೀವಿಗ[...] ಬಾಲಗೋಪಾಲರು ಮುಂದಿಟ್ಟ ಈ ಸಮಸ್ಯಾತ್[...] ಸಂದರ್ಭವನ್ನು ಅರ್ಥವೇ ಮಾಡಿಕೊಳ್ಳದೆ ಅವರಿಗೆ 'ನಕ್ಸ[...] ಬೆಂಬಲಿಗ' ಎಂಬ ಹಣೆಪಟ್ಟಿಯನ್ನೇ ಕಟ್ಟಿಬಿಟ್ಟಿದ್ದರು.

ಭಾರತ ಸರ್ಕಾರದ ಯೋಜನಾ ಆಯೋಗ "ನಕ್ಸ[...] ಹಿಂಸೆಯ ಮೂಲಗಳ" ಬಗ್ಗೆ ಅಧ್ಯಯನ ನಡೆಸಿ ವರ[...] ನೀಡಲು ನೇಮಿಸಲಾಗಿದ್ದ ಸಮಿತಿಯಲ್ಲಿ ಬಾಲಗೋಪಾಲ[...] ಸದಸ್ಯರಾಗಿದ್ದರು. ಈ ಸಮಿತಿಯು ನಕ್ಸಲ್ ಹಿಂಸೆಯನ[...] ಪ್ರಭುತ್ವ ದಮನದ ಮೂಲಕ ಹತ್ತಿಕ್ಕುವುದನ್ನು ಸಾರಾಸಗಟಾ[...] ವಿರೋಧಿಸಿದೆಯಲ್ಲದೆ ನಕ್ಸಲರ ಹಿಂಸಾತ್ಮಕ ಹೋರಾಟವ[...] ಅನಿವಾರ್ಯ ಮಾಡಿದ ದೇಶದ ಊಳಿಗಮಾನ[...] ಪದ್ಧತಿಯನ್ನು ನಿವಾರಿಸದ ಪ್ರಭುತ್ವವನ್ನೇ ಅದ[...] ಹೊಣೆಯನ್ನಾಗಿಸಿದೆ. ಹಾಗೂ ನಕ್ಸಲ್ ಹೋರಾಟದಿಂ[...] ರೈತಾಪಿ ಜನತೆಗೆ ಊಳಿಗಮಾನ್ಯ ಶೋಷಣೆಯಿಂದ ವಿಮು[...] ಸಿಕ್ಕಿರುವುದನ್ನು ಮರೆಯಬಾರದೆಂದು ಎಚ್ಚರಿಸಿದೆ. ಹೀಗಾ[...] ನಕ್ಸಲ್ ಹೋರಾಟದ ಮೂಲ ಕಾರಣವಾದ ಸಾಮಾಜಿ[...] ಹಾಗೂ ಆರ್ಥಿಕ ಸಮಾನತೆಯನ್ನು ಇಲ್ಲದಂತೆ ಮಾಡಲು[...] ಕ್ರಮಗಳನ್ನು ಹಾಕಿಕೊಳ್ಳುವುದು ಮತ್ತು ನಕ್ಸಲರೊಂದಿ[...] ಮಾತುಕತೆಗೆ ಮುಂದಾಗುವುದು ಅಗತ್ಯವೆಂದು ಸಲಹ[...] ಮಾಡಿದೆ. ಆದರೆ ಇಂದು ಯುಪಿಎ ಸರ್ಕಾರ ಈ[...] ಎಲ್ಲಾ ಸಲಹೆಗಳತ್ತ ಗಮನ ಹರಿಸದೆ "ನಕ್ಸಲ್ ದಮನ"ದ[...] ಹೆಸರಲ್ಲಿ ಸ್ವತಂತ್ರ ಭಾರತದ ಇತಿಹಾಸದಲ್ಲೇ ಕಂಡರಿಯದ[...] ರಕ್ತಪಾತಕ್ಕೆ ಮುಂದಾಗುತ್ತಿದೆ. ಪ್ರಭುತ್ವ ದಮನ[...] ಸಂವಿಧಾನವನ್ನು ಗಾಳಿಗೆ ತೂರುತ್ತಿರುವ ಈ ಸಂದರ್ಭದಲ್ಲಿ ಡಾ. ಬಾಲಗೋಪಾಲ್ ನಿಧನರಾಗಿರುವುದು ದೇಶದ ಮಾನವ ಹಕ್ಕುಗಳ ಸಂರಕ್ಷಣೆಗೆ ಅತಿ ದೊಡ್ಡ ನಷ್ಟವನ್ನುಂಟುಮಾಡಿದೆ.

ಅದೇನೇ ಇದ್ದರೂ ಬಾಲಗೋಪಾಲ್ ಮಾತ[...] ನುಡಿದಂತೆ ನಡೆದವರು. ಬಾಲಗೋಪಾಲರ ಸರಳ ಜೀವನ[...] ಬೆರಗು ಹುಟ್ಟಿಸುವಂತದ್ದು. ಯೂನಿವರ್ಸಿಟಿ[...] ಅಧ್ಯಾಪಕನಾಗುವುದೇ ಜೀವನದ ಪರಮ[...] ಧ್ಯೇಯವಾಗಿಬಿಡುತ್ತಿರುವ ಈ ಸಂದರ್ಭದಲ್ಲಿ ಇದ್ದ[...] ಪ್ರೊಫೆಸರ್‌ಗಿರಿಯನ್ನೂ ಮತ್ತು ತಮ್ಮ ಅಕಾಡೆಮಿಕ್ ವಿದ್ವತ್[...] ಕೊಡಮಾಡಬಹುದಾಗಿದ್ದ ಎಲ್ಲಾ ಸುಖ, ಸೌಕರ್ಯಗಳನ್ನೂ ಬಾಲಗೋಪಾಲ್ ಶೋಷಿತ ಜನತೆಯ[...] ಮಾನವಹಕ್ಕುಗಳಿಗಾಗಿ ಹೋರಾಡಲು ಬಿಟ್ಟುಕೊಟ್ಟರು ಮತ್ತು ಅದನ್ನು ದೊಡ್ಡ ತ್ಯಾಗವೆಂಬಂತೆ ಬಣ್ಣಿಸುವುದನ್ನು ಅಸಹ್ಯಸಿಕೊಳ್ಳುತ್ತಿದ್ದರು. ಅದು ಭಾರತದ ಸಂದರ್ಭದಲ್ಲಿ ಒಬ್ಬ ಬುದ್ಧಿಜೀವಿ ಮಾಡಬೇಕಾದ ಕರ್ತವ್ಯ ಎಂದು ಬಣ್ಣಿಸುತ್ತಿದ್ದರು.

▶▶▶

ಂಕೇಶರ ಶ್ರೇಷ್ಠ ಕತೆಗಳಲ್ಲಿ ಒಂದಾಗಿರುವ ...ಲ್ಲಿ ಒಂಟಿಯಾಗಿದ್ದಾಗ ಅಸಹಾಯಕತೆಯಲ್ಲಿ ...ರುವ ಮನುಷ್ಯ ಗುಂಪಿನಲ್ಲಿ ಪಶುವಿನಂತೆ ...ತರ ವಿಪರ್ಯಾಸದ ಚಿತ್ರಣವಿದೆ. ಆ ಕತೆಯಲ್ಲಿ ...ೆ ಹೆಸರಿಲ್ಲ, ಗುಂಪಿಗೆ ಹೆಸರು, ವಿಳಾಸ, ...ಣೆ, ಗುರುತು ಚಹರೆಗಳಿರುವುದಿಲ್ಲ, ನೈತಿಕ ...ಮತ್ತು ಅದರ ಜೊತೆಗೇ ಬರುವ ಕ್ರೌರ್ಯ ...ಗುಂಪಿನ ಗುಣಗಳು. ಆದರೆ ಆ ಗುಂಪಿನ ...ನ್ನೂ, ಪ್ರತಿಯೊಬ್ಬಳೂ ತನ್ನ ಹುಸಿಯುವ, ...ವ ದೇಹದಲ್ಲಿ ಏಕಾಂಗಿಗಳು. ಗುಂಪು-ಅದನ್ನು ...ಜಾತಿ, ರಾಜಕೀಯ ಪಕ್ಷ, ಸಂಘಟನೆ, ಸರ್ಕಾರ ... ಯಾವುದೇ ಹೆಸರಿನಿಂದ ಕರೆದರೂ ಲಂಕೇಶರ ...ಆಸಹನೀಯ ಒಂಟಿತನದ ಬಡಪಾಯಿಗಳನ್ನು ...ಸೃಷ್ಟಿಸುತ್ತದೆ: ಮೊನ್ನೆ ಮಂಗಳೂರಿನ ಘಟನೆಯಲ್ಲೂ ...ದಿದ್ದಲ್ಲವೆ? 50 ಜನರ ಗುಂಪಿನ ಆಕ್ರಮಣಕ್ಕೆ ...ಆ ಹಿಂದೂ ಹುಡುಗ ಏಕಾಂಗಿಯಾಗಿ ಮತ್ತು ...ಮಾತ್ರನಾಗಿ ಅದನ್ನು ಅನುಭವಿಸಿದ. ಆಗ ...ಸ್ತ್ರಾತ ಹಿಂದೂ ಸಮುದಾಯ ಅವನ ಜೊತೆ ...ಆ ಮುಸ್ಲಿಮ್ ಹುಡುಗಿಯೂ ತನ್ನ ಅವಮಾನ ...ಯಾಗಿದ್ದಳು. ಗುಜರಾತಿನಲ್ಲಿ ಹಿಂಸೆಗೆ ಒಳಗಾದ ... ಮುಸ್ಲಿಮನೂ ಏಕಾಂಗಿಯಾಗಿಯೇ ಅದನ್ನು ...ಸಿದ. ಹಿಂಸಾಕೃತ್ಯಗಳನ್ನು ನಡೆಸುವವರಿಗೆ ... ಎಂಬುದಿಲ್ಲ, ಹಾಗೆಯೇ ಹಿಂಸೆಯನ್ನು ಅನುಭ...ಕ್ಕೂ ಜಾತಿಮತಗಳ ಭೇದವಿಲ್ಲ. ಕುಂದಾಪುರ ...ಗಳೂರುಗಳಲ್ಲಿ ನಡೆದ ಘಟನೆಗಳಿಂದ ಹಿಂದೂ ...ಮುಸ್ಲಿಮ್ ಮತಾಂಧತೆಗಳ ನಡುವೆ ಏನೂ ... ಎಂಬುದು ಸ್ಪಷ್ಟವಾಗುತ್ತದೆ.

...ಗಳೂರಿನ ಸ್ವಾಗತ್ ಹೋಟೆಲಿನಲ್ಲಿ ನಡೆದ ... ಹಲ್ಲೆಯನ್ನು ನಡೆಸಿದ್ದು ಪಾಪ್ಯುಲರ್ ಫ್ರಂಟ್‌ನ ...ರು ಎಂದು ಕೆಲವು ಪತ್ರಿಕೆಗಳು ವರದಿ ... ಆದರೆ ಆ ಸಂಘಟನೆಯ ದ.ಕ. ಜಿಲ್ಲಾಧ್ಯಕ್ಷ ...ದ್ ಅದನ್ನು ನಿರಾಕರಿಸಿದ್ದಾರೆ. ಆ ಘಟನೆಯನ್ನು ...ವರ ಜೊತೆಗೆ ಅವರು ಪಾಪ್ಯುಲರ್ ಫ್ರಂಟ್‌ಗೆ ... ಯಾವುದೇ ಅಜೆಂಡಾ ಇಲ್ಲ ಎಂದು ...ದ್ದಾರೆ).

● ಜಿ. ರಾಜಶೇಖರ

...ರ ಬಾಳಸಂಗಾತಿ ವಸಂತಲಕ್ಷ್ಮಿ ಸಹ ಪತ್ರಕರ್ತರು ...ಮಾನವ ಹಕ್ಕುಗಳ ಬಗೆಗೆ ಕಾಳಜಿ ಉಳ್ಳವರು. ...ಒಬ್ಬನೇ ಮಗ ಪ್ರಭಾತ್ ಈಗ ಪಿಯುಸಿ ... ಹೀಗೆ ಸಂಸಾರಸ್ಥರಾದರೂ ವಕೀಲಿ ವೃತ್ತಿ ...ಸಿದ ಮೇಲೆ, ಬಡ ಮತ್ತು ಶೋಷಿತ ಜನತೆಯ ...ಕ, ಅವರು ಹಲವಾರು ಕೇಸುಗಳನ್ನು ಫೀಸಿಲ್ಲದೆ ...ವರು ಬಾಲಗೋಪಾಲ್. ಏಕೆಂದರೆ ಅವರು ... ಮೂರು ಸಾವಿರಕ್ಕಿಂತ ಹೆಚ್ಚಿನ ಆದಾಯ ...ಬಾಗದಂತೆ ತಮ್ಮ ಸ್ವಂತ ಖರ್ಚನ್ನು ...ಗೊಳಿಸಿಕೊಂಡಿದ್ದರು. ಇದು ನಮ್ಮ ನಡುವಿನಲ್ಲಿ ... ಹಲವು ಬಾಯಿಬಡುಕ ಗಾಂಧಿವಾದಿ ...ಗಳ ಬದುಕಿನ ಶೈಲಿಗೆ ಹೋಲಿಸಿಕೊಂಡರೆ ...ಸರಳವಾದದ್ದು ಎಂದು ಯಾರಿಗಾದರೂ ...ಗುತ್ತದೆ. ವಕೀಲಿ ವೃತ್ತಿ ಪ್ರಾರಂಭಿಸಿದ ಮೇಲೆ ... ಪ್ರತಿ ಶನಿವಾರ ಮತ್ತು ಭಾನುವಾರಗಳನ್ನು ...ದಾದರೂ ಸತ್ಯ ಶೋಧನೆಗೆ ಅಥವಾ ...ಮುಗಳಿಗೆ ಹಾಜರಾಗಲು ಮೀಸಲಿಡುತ್ತಿದ್ದರು. ...ನ ರಜಾ ವೇಳೆಯಲ್ಲಿ ಇನ್ನಿತರ ಮಾನವ ಹಕ್ಕು ...ಗಳೊಡಗೂಡಿ ಛತ್ತೀಸ್‌ಘಡ್, ಕಾಶ್ಮೀರ, ಈಶಾನ್ಯ ...ಜ್ಯತ್ಯಾದಿ ಕಡೆಗಳಲ್ಲಿ ವಾರಗಟ್ಟಲೆ ಸಂಚರಿಸಿ ...ದಮನದ ಬಗ್ಗೆ ಜನಜಾಗೃತಿ ಮೂಡಿಸುತ್ತಿದ್ದರು. ...ಗಾಗಿ ಮುಂದೆ ಬಾಲಗೋಪಾಲ್ ಎಂಬ ವ್ಯಕ್ತಿ ...ನೆ ಇದ್ದರು ಎಂಬುದನ್ನೇ ಮುಂದಿನ ಪೀಳಿಗೆ ... ಪಡಬಹುದಾದಂಥ ಅದ್ಭುತ ಮತ್ತು ...ದ ವ್ಯಕ್ತಿ ಡಾ. ಬಾಲಗೋಪಾಲ್. ಸಾಮಾನ್ಯವಾಗಿ ...ಾಗದ ನಷ್ಟ" ಎಂಬುದು ಕ್ಲೀಷೆಯಾಗಿಬಿಟ್ಟಿರುವ ... ಆದರೆ ಡಾ.ಬಾಲಗೋಪಾಲರ ಸಾವು ಮಾತ್ರ ... ತುಂಬಲಾಗದ ನಷ್ಟವನ್ನೇ ಉಂಟುಮಾಡಿದೆ. ... ಈ ಜಾಗವನ್ನು ಭರ್ತಿ ಮಾಡುವ ಇನ್ನೊಬ್ಬ ... ವ್ಯಕ್ತಿ, ದೇಶದಲ್ಲಿ ಯಾರೂ ಇಲ್ಲ.


... ಅಮಾಯಕ ಅಥವಾ ಅಪರಾಧಿ ಪಕ್ಷ...ಕ್ಕೆ ಬಳಲುವ ಮಧ್ಯಮ ವರ್ಗದ ಪ್ರಜ್ಞಾವಂತರು ...ಬುದ್ಧಿಜೀವಿಗಳು ತಮ್ಮ ದ್ವಂದ್ವಗಳನ್ನು ಮೀರಿ ... ಜನರಿಗಾಗಿ ಅವರ ಮಾನವ ಹಕ್ಕುಗಳಿಗಾಗಿ ... ತಾವೇ ಅರ್ಪಿಸಿಕೊಂಡರೆ ಸಮಾಜದಲ್ಲಿ ...ಶೈಯನ್ನೂ, ಮಾನವೀಯತೆಯನ್ನು ಉಳಿಸಲು ...ಬದ್ಧ ಕೊಡುಗೆಗಳನ್ನು ನೀಡಬಹುದೆಂಬುದಕ್ಕೆ, ...ಗೋಪಾಲ್ ಉದಾಹರಣೆ. ಬಾಲಗೋಪಾಲರ ... ಸತ್ಯ ಅವರು ನೀಡಿದ ಪ್ರಜ್ಞೆಯ ಹಾದಿಯನ್ನು ...ದಾದರೂ ನೋಡಿಕೊಳ್ಳುವುದೇ ಅವರಿಗೆ ...ವಾದ ಅತಿ ದೊಡ್ಡ ಶ್ರದ್ಧಾಂಜಲಿ. ●

ವಿನಯಾ



ಕರ್ನಾಟಕದಲ್ಲಿ ಗೋಕರ್ಣ ಸೀಮೆಯು ಅತಿ ಹೆಚ್ಚು ಕತೆಗಾರರನ್ನು ಹಡೆದ ತಾಣವೆನಿಸುತ್ತಿದೆ. ಮೊದಲಿಗೆ ಇಲ್ಲಿಂದ ಯಶವಂತ ಚಿತ್ತಾಲರು ಬಂದರು; ಬಳಿಕ ಜಯಂತ ಕಾಯ್ಕಿಣಿ, ವಿವೇಕ ಶಾನುಭಾಗ, ಶ್ರೀಧರ ಬಗಾರ, ಅಶೋಕ ಹೆಗಡೆ ಮುಂತಾದವರು; ಈಗ ಇವರ ಬೆನ್ನಹಿಂದೆ ಸುನಂದಾ ಕಡಮೆ, ವಿನಯಾ, ಸಂದೀಪ ನಾಯಕ, ರಾಜೀವನಾಯಕ. ಅಘನಾಶಿನಿ ಹೊಳೆಯು ಕಡಲನ್ನು ಕೂಡುವ ಬಳಿ ಇರುವ ನಾಡುಮಾಸ್ಕೇರಿಯ ವರಾದ ವಿನಯಾ, ಈತನಕ ಮೂರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವೆಂದರೆ, 'ಬಿರುಗಾಳಿ' (2002) 'ನೂರು ಗೋರಿಯ ದೀಪ' (2007) ಎಂಬ ಎರಡು ಕವನ ಸಂಕಲನ; 'ಊರ ಒಳಗಣ ಬಯಲು' ಎಂಬ ಕಥಾಸಂಕಲನ (2008).

ವಿನಯಾ ಮೂಲತಃ ಒಬ್ಬ ಕವಿ. ಅವರು ಲೋಕದ ಯಾವ ವಸ್ತುವನ್ನು ಕುರಿತೂ ಕವಿಯಾಗಿಯೇ ಪರಿಭಾವಿಸುತ್ತಾರೆ ಮತ್ತು ಅದನ್ನು ಕವಿತೆಯಾಗಿಯೇ ಅಭಿವ್ಯಕ್ತಿಸಲು ಯತ್ನಿಸುತ್ತಾರೆ. ಅವರ ಮುನ್ನುಡಿಗಳೂ ಕವಿತೆಯಂತೆಯೇ ಇವೆ. ಅವರ ಕತೆ ಗಳಲ್ಲಿರುವ ಗದ್ಯವೂ ಅವರ ಕವಿತೆಯ ವಿಸ್ತರಣೆಯಂತಿದೆ. ಕವಿತೆ ಬಹುಶಃ ಅವರ ಬರಹದ ಭಾಷೆ. ಕವಿತೆಯನ್ನು ಕುರಿತು ಅವರ ಕೆಲವು ಗ್ರಹಿಕೆಗಳು ಹೀಗಿವೆ: "ಕವಿತೆ ನನಗೆ ಎಂದೂ ಅನ್ಯವಲ್ಲ, ಅದು ನಾನೇ. ನನ್ನನ್ನು ನನ್ನೊಳಗಿನ ಬದುಕನ್ನು ಕಾಣಲು ಕಟ್ಟಲು ಸಿಕ್ಕತಾಣ"; "ಕವಿತೆ ಬರೆ ಯುವುದೆಂದರೆ, ಮನದ ಮಾತು ಗಳನು ಅದರೆಲ್ಲ ರಕ್ತ ಮಾಂಸ, ವಾಸನೆ, ಒಜ್ಜೆಗಳೊಂದಿಗೆ ಕಾದಿಡು ವುದು.. ನನ್ನೊಳಗಿನ ನಾನು ಅನವರತ ಸಾಯುವ, ಹುಟ್ಟುವ ಚೋದ್ಯಕ್ಕೆ ನಾನೇ ಸಾಕ್ಷಿಯಾಗಿರುವ ವಿಸ್ಮಯ"; ಈ ಹೇಳಿಕೆಗಳು ಕವಿತೆಯನ್ನು ತನ್ನ ತಾನು ಕಂಡುಕೊಳ್ಳುವ ಮಾಧ್ಯಮ ಆಗಿಸಿಕೊಂಡಿರುವುದರ ದ್ಯೋತಕ ವಾಗಿವೆ. ಆದರೆ ಇಷ್ಟೊಂದು ಪರ್ಸನಲ್ ಆಗಿ ಪರಿಭಾವಿತವಾಗಿರುವ ಅವರ ಕವಿತೆಯು, ನಿಜದಲ್ಲಿ ತನ್ನ ಪೆಣ್ತುಡಿತಗಳಿಂದ ಸಾಮಾಜಿಕವೂ ಆಗಿಬಿಟ್ಟಿದೆ. ಸೂಕ್ಷ್ಮಸಂವೇದನೆಯ ಎಲ್ಲ ಲೇಖಕರಲ್ಲಿ ವೈಯಕ್ತಿಕ ಮತ್ತು ಸಾರ್ವಜನಿಕ ಎಂಬ ಆಯಾಮಗಳು ಬೆಸುಗೆಯರಿಯದಂತೆ ಕೂಡಿಕೊಂಡಿರುತ್ತವೆಯಷ್ಟೆ. ಹೀಗಾಗಿ ಇಲ್ಲಿ ಘೋಷಣೆಯಂತೆ ಕಾಣುವ ಸಾಲುಗಳೂ ಪ್ರಾಮಾಣಿಕವಾಗಿ ಹುಟ್ಟಿದ ಸಂಕಲ್ಪಗಳಾಗಿವೆ. ಕವಿಗೆ ಲಯದ ಮೇಲಿನ ಹಿಡಿತವು ("ನಮ್ಮೊಳಗೆ ಉರಿವ ದೊಂದಿಯಂಥ ಕನಸು, ಆ ಬೆಳಕಲ್ಲಿ ಆಡುವದು ನನ್ನ ಕೂಸು") ಕೂಡ ಅದು ತನ್ನ ಎಲ್ಲೆ ಮೀರದಂತೆ ತಡೆದಿದೆ.



ವಿನಯಾ ಕೊಂಚ ಅತಿಸೂಕ್ಷ್ಮ ಎನ್ನಬಹುದಾದ ಭಾವುಕ ಮನಸ್ಸಿನ ಕವಿ. ಅವರ ಕಾವ್ಯವು ಪರಿಸರದಲ್ಲಿರುವ ವೈರುಧ್ಯ ಮತ್ತು ವಿಷಮತೆಗಳಿಗೆ ತೀವ್ರವಾಗಿ ಮಿಡಿಯುತ್ತದೆ; ಬದುಕಿನ ಚೆಲುವಿಗೆ ಪಡುವ ಸಂಭ್ರಮಗಳಿಂದಲೂ, ಲೋಕದ ಕಾರ್ಪಣ್ಯಗಳಿಗೆ ಪಡುವ ದುಗುಡಗಳಿಂದಲೂ ಅದು ಕೂಡಿದೆ. ಸಂಗಾತಿಯ ಸಂಗದ ಅನುಭವವನ್ನು ಕಾಣಿಸುವಾಗ ವಿನಯಾ ಅಕ್ಕಸಂತೆಯೂ, ಪರಿವರ್ತನೆಯ ಕೆಚ್ಚನ್ನು ಕಾಣಿಸುವಾಗ (ಮೊದಲ ಘಟ್ಟದ) ಸಿದ್ಧಲಿಂಗಯ್ಯನಂತೆಯೂ ಕಾಣುತ್ತಾರೆ. ಒಬ್ಬ ಕವಿಯಲ್ಲಿ ಪರಂಪರೆಯ ಹಲವು ಕಾಲದೇಶಗಳ ಪ್ರೇರಣೆಗಳು ಮೈದೋರುವ ಈ ಪರಿ ಆಶ್ಚರ್ಯಕರವಾಗಿದೆ. ವಿನಯಾ ಅವರ ಮೊದಲ ಸಂಕಲನವು ಬೆರಗು ಮತ್ತು ಸಂಭ್ರಮ ಪ್ರಧಾನವಾಗಿದ್ದರೆ, ಎರಡನೆಯದು ವಿಷಾದ ಮತ್ತು ದುಗುಡ ಪ್ರಧಾನವಾಗಿದೆ. ಇದಕ್ಕೆ ಕಾರಣ, ಕವಿತೆ ಬದುಕಿನ ವಾಸ್ತವಿಕತೆಗೆ ಹೆಚ್ಚು ಮಿಡಿಯುತ್ತ ಹೋಗಿರುವುದು. ಅವರ ಕವನದ ನಾಯಕಿಯೊಬ್ಬಳು ಒಮ್ಮೆ ಮನೆಯ ದೇವರ ಪಟಗಳನ್ನೆಲ್ಲ ಹೊರಹಾಕಿ ಜಳಕ ಮಾಡಿ ನಿರಾಳವಾಗಿ, ಮಗಳ ಪಾಟಿಚೀಲ ನೋಡುತ್ತಾಳೆ. ಅದರಲ್ಲಿ ಗಣಪತಿಯ ಚಿತ್ರವೊಂದು ಕೂತು ಅಣಕಿಸುತ್ತದೆ! ತನ್ನನ್ನೂ ಒಮ್ಮೆ ಜಿಗುಟಿಕೊಂಡು ನೋಡಬಲ್ಲ ಯಾವ ಸಂವೇದನೆಯೂ ಏಕಮುಖಿ ಆಗಿರುವುದಿಲ್ಲ.

ವಿನಯಾ ಹೊಟ್ಟೆಯೊಳಗಿನ ಕರುಳನ್ನು ಕಿತ್ತು ಹೊರಗಿಟ್ಟಂತೆ ಬರೆಯುವ ಕವಿ. ಆರ್ದ್ರತೆ ಮತ್ತು ಆರ್ತತೆ ಅವರ ಬರೆಹದ ಲಕ್ಷಣ. ಹೊಸತಲೆಮಾರಿನಲ್ಲಿ ಹೀಗೆ ಬರೆಯುತ್ತಿರುವ ಮತ್ತೊಬ್ಬ ಕವಿಯೆಂದರೆ ಎನ್.ಕೆ. ಹನುಮಂತಯ್ಯ. ಕಷ್ಟವೆಂದರೆ, ಲೋಕದ ವಿಷಮತೆಗೆ ಅತಿಯಾಗಿ ತಲೆಗೊಡುವ ಎಲ್ಲ ಬರೆಹವೂ ಭಾರವಾಗುತ್ತದೆ. ಬೆರಗು ಕಡಿಮೆಗೊಳ್ಳುತ್ತ ಹೋಗುತ್ತದೆ. ಆದರೆ ಬೆರಗನ್ನು ಉಳಿಸಿಕೊಂಡಿರುವ ವಿನಯಾ ಅವರಿಗೆ ಕವಿತೆ ಕಟ್ಟಲು ದೊಡ್ಡ ಚಿಕ್ಕವಸ್ತುಗಳೂ ಸಾಕು. 'ಮನೆಯಿಂದ ಮನೆಗೆ' ಅವರ ಉತ್ತಮ ಕವಿತೆಗಳಲ್ಲಿ ಒಂದು. ಕೆಎಸ್‌ನ ಅವರ ಇದೇ ಕವಿತೆ ಜತೆ ಹೋಲಿಸಿದರೆ, ತಲೆಮಾರಿನ ಅಂತರ ತಿಳಿಯುತ್ತದೆ. ವಿನಯಾ ಅವರ ಎರಡೂ ಸಂಕಲನಗಳಲ್ಲಿ ತುಂಬ ಫ್ರೆಶ್ ಆಗಿರುವ ನೂರಾರು ಧ್ವನಿ ಪೂರ್ಣ ಸಾಲುಗಳನ್ನು ಓದುವಾಗ, ಅವರ ಸ್ವಂತಿಕೆಯ ಸ್ವರೂಪ ಖಚಿತವಾಗುತ್ತದೆ.

ಕವಿತೆಯನ್ನು ಪ್ರಧಾನ ನುಡಿಗಟ್ಟಾಗಿಸಿಕೊಂಡಿರುವ ವಿನಯಾ, ಪ್ರಾಸಂಗಿಕವಾಗಿ ಎಂಬಂತೆ ಕತೆಗಳನ್ನು ಬರೆದಿದ್ದಾರೆ. ಆದರೆ ಅವು ಕೂಡ ಅವರ ಗದ್ಯಶಕ್ತಿಯನ್ನು ಸಾಬೀತುಪಡಿಸಿವೆ. ಗದ್ಯವನ್ನೂ ಕವಿತೆಯಂತೆ ಬರೆಯುವುದರ ಕಷ್ಟವೆಂದರೆ, ಅದು ರೂಪಕದ ಭಾಷೆಯಲ್ಲಿ ಉಸಿರುಗಟ್ಟುವಂತೆ ಭಾಸವಾಗುವುದು; ಗದ್ಯಕ್ಕೆ ಬೇಕಾದ ನಿರಾಳತೆ ಮತ್ತು ಬೌದ್ಧಿಕತೆಯ ಆಯಾಮಗಳು ಹ್ರಾಸಗೊಳ್ಳುವುದು. ವಿನಯಾ ಕತೆಗಳ ವಿಶೇಷತೆಯೆಂದರೆ, ಇಲ್ಲಿ ಮೈದಳೆದು ಬರುವ ಚೈತನ್ಯಶೀಲ ಮಹಿಳೆಯರ ಪಾತ್ರಗಳು; ಆದರೆ ಈ ಜೀವಗಳನ್ನು ಬಾಳಿಸದ ಸಮಾಜದ ಕಾಠಿಣ್ಯವನ್ನೂ ಕತೆಗಳು ಕಾಣಿಸುತ್ತವೆ. ಇಲ್ಲಿನ ಕತೆಗಳನ್ನು ಜೀವನ ಪ್ರೀತಿಯನ್ನೂ ದುಡಿಮೆಯನ್ನೂ ಮೌಲ್ಯವಾಗಿಸಿಕೊಂಡಿರುವ, ಆದರೆ ವ್ಯವಸ್ಥೆಯ ತಾರತಮ್ಯದ ಆವಿಗೆಯಲ್ಲಿ ನಲುಗುವ ಮಹಿಳೆಯರ ಆತ್ಮಕಥನಗಳೆಂದೂ ಕರೆಯಬಹುದು. 'ಸ್ವಯ' 'ಕಡಿತನಕ ಕಾಯೊ' ಇಲ್ಲಿನ ಅತ್ಯುತ್ತಮ ಕತೆಗಳು. ವಿನಯಾ ಕೆಲವೊಮ್ಮೆ ಹಿರಿದಾದ ವಸ್ತುವನ್ನು ಕತೆಯಲ್ಲಿ ಹುದುಗಿಸಲು ಯತ್ನಿಸುತ್ತಾರೆ. ಜತೆಗೆ ಅವರು ಕವಿತೆಯಂತೆ ಸಣ್ಣ ಘಟನೆಯನ್ನು ಕುಶಲತೆಯಿಂದ ಅರಳಿಸಿ ಕಿರುಗತೆಗಳನ್ನೂ ಬರೆಯಬಲ್ಲರು. ಈ ಕಿರುಗತೆಗಳು ಕವಿತೆಯಂತೆ ಹೆಚ್ಚು ಸಾಂದ್ರವಾಗಿವೆ. ಪರಿಣಾಮಕಾರಿಯಾಗಿವೆ. ಆದರೆ ಅವುಗಳಿಗೆ ಮಾಸ್ಕೇರಿಯ ಲೋಕವನ್ನು ಹಿಡಿವ ತ್ರಾಣವಿಲ್ಲ, ದೊಡ್ಡಕತೆಗಳಲ್ಲಿ ಮಾಸ್ಕೇರಿಯ ಭಾಷೆಯು ಪಾತ್ರಗಳ ಮಾತುಕತೆಯ ಮೂಲಕ ಪ್ರಕಟವಾಗುತ್ತದೆ. ಆಗ ಅದು ಕಡಲಬದಿಯ ಬಾಳಿನ ಸಾಂಸ್ಕೃತಿಕ ಕಸುವೆಲ್ಲವನ್ನು ಮೈದೆಗೆದು ತೋರುತ್ತದೆ. ಆದರೆ ಅದೇ ಭಾಷೆಯು ಕತೆಯ ನಿರೂಪಣೆಗೂ ಬಳಕೆಯಾಗುವ ಕಡೆ ಕತೆಯ ಹರಿವಿಗೆ ತೊಡರೊಡ್ಡಿದಂತೆ ಕಾಣುತ್ತದೆ. ಕತೆಯ ವಿಷಯದಲ್ಲಿ ವಿನಯಾ [illegible] ಪ್ರಯೋಗಗಳನ್ನು ಮಾಡುತ್ತಿರುವವರು. ಇವು ಅವರು ಕತೆಗೆ ತಕ್ಕ ರೂಪವೊಂದನ್ನು ಹುಡುಕುತ್ತಿರುವ ಅವಸ್ಥೆಯನ್ನು ಸೂಚಿಸುತ್ತಿವೆ. ಅದರಲ್ಲೂ ವಿವರಗಳು ಇಡಿಕಿರಿ... ಕತೆಗಳನ್ನು ಕಾಣುವಾಗ, ಅವು ಕಾದಂಬರಿ ರೂಪಕ್ಕೆ ಹಂಬಲಿಸುತ್ತಿವೆ ಎಂದು ಅನಿಸುತ್ತದೆ. ಸಮಸ್ಯೆಯೆಂದರೆ, ನಿರುದ್ದಿಶ್ಯವಾಗಿ ಮುಗಿವ ಕತೆಗಳೂ ಇಲ್ಲಿ ಸೇರಿರುವುದು. ಪತ್ರಿಕೆಗಳ ಮತ್ತು ಸೆಮಿನಾರಿಗರ ಒತ್ತಡಕ್ಕೆ ಬಲಿಯಾಗದೆ ಉಳಿಯುವುದಕ್ಕೆ ಎಲ್ಲ ಪ್ರತಿಭಾವಂತ ಲೇಖಕರು ಎಚ್ಚರ ವಹಿಸಬೇಕಿದೆ.

ಧಾರವಾಡ ಸಮೀಪದ ಆಳ್ನಾವರ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿ ಆಗಿರುವ ವಿನಯಾ, ಅತ್ಯುತ್ತಮ ವಾಗ್ಮಿ ಕೂಡ. ಸೆಮಿನಾರುಗಳಲ್ಲಿ ಅವರು ಪರಿಣಾಮಕಾರಿಯಾಗಿ ವಿಚಾರ ಮಂಡನೆ ಮಾಡುತ್ತಾರೆ. ಸ್ತ್ರೀಸಂವೇದನೆಯ ದೃಷ್ಟಿಯಿಂದ ಲೋಕವನ್ನೂ ಸಾಹಿತ್ಯವನ್ನೂ ನೋಡುತ್ತ ಮಹಿಳೆಯ ವಿಷಯದಲ್ಲಿ ನಡೆಯುವ ತಾರತಮ್ಯವನ್ನು ಸೂಕ್ಷ್ಮವಾಗಿ ವಿಶ್ಲೇಷಿಸುತ್ತಾರೆ. ನಮ್ಮ ದೈನಿಕ ವರ್ತನೆ ಮಾತು ಬರೆಹಗಳಲ್ಲಿ ನಮಗೇ ಅರಿಯದಂತೆ ಹುದುಗಿಕೊಂಡಿರುವ ಜೆಂಡರ್ ಬಯಾಸುಗಳನ್ನು ಹೊರಗೆಡಹಲು ಇಂತಹ ಚಿಂತನೆಯ ಅಗತ್ಯವಿದೆ. ಹೊಸತಲೆಮಾರಿನ ಕೆಲವು ಲೇಖಕರಲ್ಲಿ, ನಿರ್ದಿಷ್ಟ ಪ್ರಕಾರಕ್ಕೆ ಅದರಲ್ಲೂ ಕಾವ್ಯಕ್ಕೆ ವಿಚಿತ್ರವಾದ ನಿಷ್ಠೆಯೂ, ಇತರೆ ಪ್ರಕಾರಗಳ ಬಗ್ಗೆ ಅಸಡ್ಡೆಯೂ ಇರುವುದುಂಟು. ಇದಕ್ಕೆ ಹೋಲಿಸಿದರೆ, ವಿನಯಾ ತರಮತವಿಲ್ಲದೆ ಹಲವು ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವರು; ಬಿಡಿಯಾಗಿ ಪ್ರಕಟವಾಗಿರುವ ಅವರ ಲೇಖನಗಳು ಅವರೊಬ್ಬ ಒಳ್ಳೆಯ ವಿಮರ್ಶಕಿ ಕೂಡ ಎಂದು ರುಜುವಾತುಪಡಿಸುತ್ತಿವೆ. ಅದರಲ್ಲೂ ಕನ್ನಡ ವಿಮರ್ಶೆಗೆ ಸ್ತ್ರೀಸಂವೇದನ ನೆಲೆಗಳ ಮತ್ತಷ್ಟು ಪ್ರವೇಶದ ಜರೂರಿದೆ; ಈ ಮೂಲಕ ನಮ್ಮ ದೊಡ್ಡದೊಡ್ಡ ಲೇಖಕರನ್ನು ಮರುಪರಿಶೀಲನೆಗೆ ಒಳಪಡಿಸುವ ಕೆಲಸದ ಜರೂರಿದೆ. ಇದನ್ನು ವಿನಯಾ ಮತ್ತವರ ಸಂಗಾತಿಗಳು ಆರಂಭಿಸಿದ್ದಾರೆ. ಶಂಕೆಯೆಂದರೆ, ಈ ಸ್ತ್ರೀಸಂವೇಧನೆಯೊಂದನ್ನೇ ಅತಿಯಾಗಿ ಆವಾಹಿಸಿಕೊಂಡರೆ, ಅದು ನೋಟವನ್ನೆಲ್ಲ ತಾನೇ ಆವರಿಸಿಕೊಂಡು, ಬದುಕನ್ನೂ ಬರೆಹವನ್ನೂ ನೋಡಲು ಬೇಕಾದ ಇತರೆ ಆಯಾಮಗಳನ್ನು ಕಳೆದುಬಿಡುವುದೇ ಎಂಬುದು.

ವಿನಯಾ ಬಹಳ ಗಂಭೀರ ಲೇಖಕಿ. ಪರಿಸರವು ಬದಲಾಗಬೇಕು ಎಂಬ ತುಡಿತವು ಅವರ ಬರೆಹಕ್ಕೆ ಒಂದು ಆಕ್ಟಿವಿಸ್ಟ್ ಗುಣವನ್ನೂ ಎರೆದುಬಿಟ್ಟಿದೆ. ಅವರು ತಮ್ಮ ಇಡೀ ವ್ಯಕ್ತಿತ್ವವನ್ನು ತೆತ್ತುಕೊಂಡು ಬರೆಯುತ್ತಾರೆ. ಅವರ ಕತೆ ಮತ್ತು ಕವನಗಳಲ್ಲಿ ಬರುವ ನಾಯಕಿ (ನಿರೂಪಕಿ) ಕೂಡ ಭಾವಭರಿತರು; ದುಗುಡೆಯರು. ಅವರ ಒಟ್ಟು ಬರೆಹದಲ್ಲೇ ಭಾವುಕತೆಯ ಹರಿದಾಟವಿರುವ ಕಾರಣ, ಅದರ ಅಭಿವ್ಯಕ್ತಿಗೆಂದು ಭಾಷೆಯೂ ಭಾವಾವೇಶದಿಂದ ಚಾರ್ಜ್ ಆಗಿದೆ. ಇದರಿಂದ ಬರೆಹಕ್ಕೆ ಓದುಗರನ್ನು ತಮ್ಮ ತೆಕ್ಕೆಯಲ್ಲಿ ಸೆಳೆದುಕೊಂಡು ಹೋಗುವ ಮತ್ತು ಆತಂಕದಲ್ಲಿ ಅದ್ದುವ ಗುಣವೂ ದೊರಕಿಕೊಂಡಿದೆ. ಇದರಿಂದ ಬರೆಹಕ್ಕೆ ಒಂದು ಬಗೆಯ ಹೇರಿಕೆ ಬಂದುಬಿಟ್ಟಿದೆ. ಲೇಖಕಿ ಭಾವನಾತ್ಮಕತೆಯನ್ನು ಕೊಂಚ ಹೆಚ್ಚಾಗೇ ಎಕ್ಸ್‌ಪ್ಲಾಯ್ಟ್ ಮಾಡುತ್ತಿದ್ದಾರೆ ಅನಿಸುತ್ತದೆ. ಇಲ್ಲಿ ತಕ್ಷಣಕ್ಕೆ ತಮ್ಮ ಸಹಜ ವಿನೋದಪ್ರಜ್ಞೆಯಿಂದ ಸುನಂದಾ ಕಡಮೆಯವರು ವಸ್ತುವನ್ನು ಹಗುರವಾಗಿ ನಿರ್ವಹಿಸಿ ಹುಟ್ಟಿಸುವ ಒಳನೋಟಗಳು ನೆನಪಾಗುತ್ತವೆ.

ಎತ್ತರಕ್ಕೂ ಬಹುಮುಖಿಯಾಗಿಯೂ ಬೆಳೆಯುವ ಎಲ್ಲ ಕುರುಹುಗಳನ್ನು ಪ್ರಕಟಿಸಿರುವ ಹೊಸತಲೆಮಾರಿನ ಲೇಖಕರಲ್ಲಿ ವಿನಯಾ ಒಬ್ಬರು. ಹಲವು ಪ್ರಕಾರದಲ್ಲಿ ತೊಡಗಿಕೊಳ್ಳುವುದು, ಕೆಲವೊಮ್ಮೆ ಯಾವುದರಲ್ಲೂ ಆಳವಾಗಿ ಬೇರುಬಿಡದ ಚಿಮ್ಮುವಿಕೆ ಕೂಡ ಆಗಬಹುದು. ಈ ಸಮಸ್ಯೆ ಸದ್ಯ ಇಲ್ಲಿ ಗೋಚರಿಸುತ್ತಿಲ್ಲ. [illegible] ಬರೆಯುವ ಮತ್ತು ಏನನ್ನೂ ಬರೆದರೂ ಅಲ್ಲಿ ತಮ್ಮ ಅಸ್ಮಿತೆಯ ಛಾಪನ್ನು ಹಾಕಬಲ್ಲ [illegible] ಹಲವು ಪ್ರಕಾರಗಳನ್ನು ಸಂಭಾವಿಸುವ [illegible] [illegible] ●

ಸಹಜಾಭಿವ್ಯಕ್ತಿಯನ್ನು ಪ್ರೀತಿಸುವ ಕವಿತೆಗಳ


ಜ್ಯೋತಿ ಗುರುಪ್ರಸಾದ್ ತಮ್ಮ ಕಾವ್ಯ ಯಾನದ ಆರಂಭದಲ್ಲೇ ಐದು ಪುರಸ್ಕಾರಗಳನ್ನು ತಮ್ಮ 'ಬಿಸಿ' ಸಂಕಲನಕ್ಕೆ ಪಡೆದುಕೊಂಡು ಯಶಸ್ಸು ಕಂಡವರು. ಆದಾಗಿ ಐದು ವರ್ಷಗಳ ನಂತರ 'ಮಾಯಾ ಪೆಟ್ಟಿಗೆ' ಸಂಕಲನವನ್ನು ಪ್ರಕಟಿಸಿದ್ದಾರೆ. ಈ ಸಂಕಲನಕ್ಕೆ ಸಿಕ್ಕಿರುವ ಮಾನ್ಯತೆ ಕೂಡ ಗಮನಾರ್ಹವಾಗಿದೆ. ಜ್ಞಾನಪೀಠ ಪುರಸ್ಕೃತ ಲೇಖಕರಾದ ಯು. ಆರ್. ಅನಂತಮೂರ್ತಿಯವರು ಇದಕ್ಕೆ ಮುನ್ನುಡಿ ಬರೆದಿದ್ದಾರೆ. ಕಿ. ರಂ. ನಾಗರಾಜ ಅವರ ನೇತೃತ್ವದ ಅಧ್ಯಯನ ಮಂಡಲ ಇದನ್ನು ಪ್ರಕಟಿಸಿದೆ.

ತೀವ್ರ ಆತ್ಮನಿಷ್ಠ ನಿಲುಮೆಯನ್ನು ಹೊಂದಿರುವ 90 ಕವಿತೆಗಳು ಈ ಸಂಕಲನದಲ್ಲಿವೆ. ತಮ್ಮ ದೈನಿಕದ ಹಲವಾರು ಅನುಭವಗಳನ್ನು, ಅನಿಸಿಕೆಗಳನ್ನು, ಹಂಬಲಗಳನ್ನು ಜ್ಯೋತಿ ತಮ್ಮ ಕಾವ್ಯದಲ್ಲಿ ಮಂಡಿಸಿದ್ದಾರೆ. ಅಮೃತಾ ಪ್ರೀತಮ್, ಅಕ್ಕ ಮಹಾದೇವಿ ಮುಂತಾದವರ ಮಾದರಿಯನ್ನು ಮೆಚ್ಚಿಕೊಳ್ಳುವ ಜ್ಯೋತಿಯವರು ಇಲ್ಲಿನ ತಮ್ಮ ಕವಿತೆಗಳಲ್ಲೂ ಅಂತಹದೊಂದು ಅಂತರಂಗ ಶೋಧದ ಪ್ರಯತ್ನ ಮಾಡಿದ್ದಾರೆ.

ಪ್ರೇಮವನ್ನು ಅದರ ದೈನಿಕತೆಯಲ್ಲಿ, ಹಾಗೆಯೇ ಅದರ ದೈವಿಕತೆಯಲ್ಲಿ ಪರಿಭಾವಿಸುವ, ಆ ಮೂಲಕ ತಮ್ಮೊಳಗಿನ ತಳಮಳವನ್ನು ಪ್ರಕಟಪಡಿಸುವ ಹಾದಿ ಜ್ಯೋತಿಯವರ ಕಾವ್ಯದಲ್ಲಿ ಮುಖ್ಯವಾಗಿ ಗೋಚರವಾಗುತ್ತಿದೆ. ಈ ಕವಿತೆಗಳಲ್ಲಿರುವ ಅನುರಕ್ತಿಗೆ ಅರ್ಪಣಾ ಮನೋಭಾವವಿದೆ. ಪ್ರೇಮದ ಧ್ಯಾನ, ಅದರ ನೆನಪು ಉಂಟು ಮಾಡುವ ಭರವಸೆ, ನಿರಾಸೆ ಮುಂತಾದವುಗಳನ್ನು ಹೆಚ್ಚಿನ ಚಮತ್ಕಾರಗಳ ಗೋಜಿಲ್ಲದೆ ಇಲ್ಲಿ ಮಂಡಿಸಲಾಗಿದೆ. ಜ್ಯೋತಿಯವರ ಕಾವ್ಯಾಭಿವ್ಯಕ್ತಿ ಎಷ್ಟು ನಿರಾಳವಾಗಿದೆಯೆಂದರೆ ಕೆಲವು ಸಲ ಅದು ಅನಿಸಿಕೆಗಳ ಮಂಡನೆ ಮಾತ್ರವಾಗಿಬಿಟ್ಟಿರುವ ಮಿತಿಗೊಳಗಾಗಿದೆ.

ಹಾಗೆಂದು ಆ ಮಂಡನೆಯಲ್ಲಿ ಉಡಾಫೆಯ ಧೋರಣೆಯೇನೂ ಇಲ್ಲ. ತಾನು ಒಲಿದಂತೆ ಹಾಡುವ ಕೆಚ್ಚು ಇಲ್ಲಿನ ಬಹುಪಾಲು ಕವಿತೆಗಳಲ್ಲಿ ಸಹಜವಾಗಿ ಅಭಿವ್ಯಕ್ತವಾಗಿದೆ.

"ಇದು
ನಾನು ಬರೆದದ್ದಲ್ಲ
ನನ್ನಿಂದ ಬರೆಸಿಕೊಂಡದ್ದು
ಎಂದು ಆಗ ನಿಮಗೆ ತಿಳಿಯಬಹುದು
ಹಾಗೂ
ಇದು ಕದ್ದು ಬರೆದ ಪ್ರೇಮ ಪತ್ರವಲ್ಲ-



ಮಾಯಾ ಪೆಟ್ಟಿಗೆ (ಕವಿತೆಗಳು)
ಲೇ : ಜ್ಯೋತಿ ಗುರುಪ್ರಸಾದ್
ಪುಟ : 152, ಬೆಲೆ : 90/-
ಪ್ರ: ಅಧ್ಯಯನ ಮಂಡಲ,
ಬಸವನಗುಡಿ, ಬೆಂಗಳೂರು

ಉಳಿವಿಗಾಗಿ ಹೋರಾಟ
ಎಂದೂ ಕೂಡ...." (ಮುಖ್ಯ ವಾಹಿನಿ, ಪು. 66)

ಈ ಸಾಲುಗಳಿಗೆ ಮೊದಲಿರುವ ಪಂಕ್ತಿಯಲ್ಲಿ ಕವಿ, ತನ್ನ ಅಭಿಪ್ರಾಯವನ್ನು ತಿಳಿಸಲು ಬರೆದ ಕಾಗದವನ್ನು ಅಂಚೆಗೆ ಹಾಕದೆ ಹೀಗೆ ಪದ್ಯವನ್ನಾಗಿಸುವ ಕಾರಣವನ್ನು ಸುಂದರವಾಗಿ ವಿವರಿಸಿದ್ದಾರೆ. ಈ ಸಂಕಲನದ ಬಹುಪಾಲು ಕವಿತೆಗಳ ಹಿಂದಿರುವ ಮನೋಭಾವ ಹಾಗೂ ಕಾರಣವನ್ನು ಈ ಸಾಲುಗಳು ಹೇಳುತ್ತಿವೆ ಎಂದುಕೊಳ್ಳಬಹುದು.

ಕವಿಗೆ ಕೆಲವು ವಿಹ್ವಲತೆಗಳಿವೆ. ಕೆಲವು ಆಶಯಗಳಿವೆ. ಅವು ನಿತ್ಯಜೀವನದ ಒಡನಾಟದ ಒಳತೋಟಿಯಲ್ಲಿ ಸಂಭವಿಸುವಂತಹವು. ಅವುಗಳನ್ನು ವ್ಯಕ್ತಪಡಿಸುವುದು ಕೂಡ ವ್ಯಕ್ತಿತ್ವದ ಅಸ್ಮಿತೆಯನ್ನು ಪ್ರತಿಪಾದಿಸುವ ಒಂದು ಬಗೆ. ಚನ್ನಮಲ್ಲಿಕಾರ್ಜುನನ ಹಂಬಲ ಹಾಗೂ ಆರಾಧನೆಯೆಂಬುದು ಅಕ್ಕ ಮಹಾದೇವಿಗೆ ತನ್ನ ಅಸ್ತಿತ್ವ ಸ್ವಾತಂತ್ರಕ್ಕೆ, ಸ್ವಯಮಿಕೆಯ ಅಭಿವ್ಯಕ್ತಿಗೆ ಒಂದು ಹತಾರ. ತನ್ನ ತೀವ್ರಾನುರಕ್ತಿ ಐಹಿಕ ವಿಧಾನಗಳಿಂದ ಈಡೇರುವಂತಾದ್ದಲ್ಲ ಎಂಬುದನ್ನು ಜಗತ್ತಿಗೆ ಪ್ರಕಟಪಡಿಸಲಿಕ್ಕಾಗಿಯೇ ಅಕ್ಕ ಮಹಾದೇವಿ 'ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ' ಗಂಡನಿಗೆ ತನ್ನನ್ನು ಅಂಕಿತಗೊಳಿಸಿಕೊಳ್ಳುತ್ತಾಳೆ. ಇದು ಮೀರಾ ಮಟ್ಟಿಗೂ ನಿಜ.

ಆಧುನಿಕ ಕಾಲಘಟ್ಟದಲ್ಲಿ ಬರೆದ ಅಮೃತಾ ಪ್ರೀತಮ್ ಅಥವಾ ಕಮಲಾ ಸುರಯ್ಯಾ ಕೂಡ ತಮ್ಮ ವ್ಯಕ್ತಿತ್ವದ ಅಥೆಂಟಿಸಿಟಿಯ ಪ್ರತಿಪಾದನೆಗಾಗಿ ಪ್ರೇಮವನ್ನು ಒಂದು ಮಾರ್ಗವಾಗಿ ಬಳಸಿಕೊಂಡದ್ದನ್ನು ಕಾಣುತ್ತೇವೆ. ಆದರೆ ಅದು ಕೇವಲ ಪ್ರೇಮಾಕಾಂಕ್ಷೆಯಲ್ಲ ಎಂಬುದು ಸಾಹಿತ್ಯದ ಅಭ್ಯಾಸಿಗಳಿಗೆ ಗೊತ್ತಿರುವ ವಿಷಯ.

"ಪ್ರೇಮಿಯಾದೆ ಎಂದುಕೊಂಡೆ
ಪ್ರೇಮ ಮುಗಿಯಲಿಲ್ಲ
ತಾಯಿಯಾದೆ ಎಂದುಕೊಂಡೆ
ಆಸೆ ಮುಗಿಯಲಿಲ್ಲ
ವೈರಾಗ್ಯ ಬಂತೆಂದುಕೊಂಡೆ
ನಿನ್ನ ರಾಗವೊಂದುಳಿದು
ಇನ್ನೆಲ್ಲ ದಿಕ್ಕುಗಳಲ್ಲೂ ವಿರಾಗ ಕೇಳುತ್ತಿದೆ" (ಹುಚ್ಚಿಯ ಹಾಡು, ಪು. 76)

ಪ್ರೇಮದಲ್ಲಿ ಇಷ್ಟು ತನ್ಮಯತೆ ಇರುವ ಕವಿಗೆ ಪ್ರೇಮದ ಮತ್ತೊಂದು ಮುಖವೂ ತಿಳಿದಿದೆ-

"ಇತಿಹಾಸ ಓದುತ್ತಿರುವೆ ಮಹಾರಾಯ
ಮಾಡಿರುವುದನ್ನು ಸ್ಮರಿಸುತ್ತಿರುವೆ
ತಾಜ್‌ಮಹಲ್ ಎಂದರೆ
ಮೃತ ಮಮ್ತಾಜ್‌ಳಿಗೆ –
ಅಮೃತಶಿಲೆಯ ಗೋರಿ;
ಪ್ರೇಮದ ತಮಾಷೆ! (ಭೂತ ದಯೆ, ಪು. 11)

ಪ್ರೀತಿಯನ್ನು ಪ್ರೀತಿಸುವುದು, ಪ್ರೀತಿಯಲ್ಲಿ ತನ್ನನ್ನು ಐಕ್ಯಗೊಳಿಸಿಕೊಳ್ಳಲು ತಹತಹಿಸುವುದು, ಪ್ರೀತಿಯನ್ನು ದೈವಿಕಗೊಳಿಸಿ ಆ ಮೂಲಕ ಅದಕ್ಕೆ ಉನ್ನತ ಆಯಾಮ ತರಲು ಬಯಸುವುದು ಈ ಸಂಕಲನದಲ್ಲಿರುವ ಹೆಚ್ಚಿನ ಕವಿತೆಗಳಲ್ಲಿ ಕಂಡುಬರುವ ವಿಷಯವಾಗಿದೆ. ಹೀಗಿದ್ದೂ 'ಮಾಯಾ ಪೆಟ್ಟಿಗೆ'ಯ ಕವಿತೆಗಳನ್ನು ವಿರಹ ಕಾವ್ಯ ಎಂದುಬಿಡಲು ಸಾಧ್ಯವಾಗುವುದಿಲ್ಲ. ದಿವ್ಯ ಪ್ರೇಮದ ಹಂಬಲದ ಒಳದನಿಯಲ್ಲಿ ನಿನಾದಿಸುತ್ತಿರುವ ಅಸ್ಮಿತೆ ಹುಡುಕಾಟವನ್ನು ಇಲ್ಲಿನ ಯಶಸ್ವಿ ಕವಿತೆಗಳು ಸ್ಪಷ್ಟವಾಗಿ ಪ್ರಸ್ತುತಪಡಿಸುತ್ತಿವೆ.

ತಾಯಿಯ ಬಗ್ಗೆ, ತಂದೆಯ ಬಗ್ಗೆ, ತಮ್ಮನ ಹೆಂಡತಿಯ ಬಗ್ಗೆ, ಬೆಳೆದ ಮಗನ ಬಗ್ಗೆ, ಆತ್ಮೀಯ ಬಗ್ಗೆ, ಮನೆಯ ಬಗ್ಗೆ ಬರೆದ ಆಪ್ತ ನುಡಿಚಿತ್ರಗಳ ಕವಿತೆಗಳೂ ಈ ಸಂಕಲನದಲ್ಲಿವೆ. ಅಪ್ಪನ ಬಗ್ಗೆ ಬರೆದಿರುವ ಕವಿತೆಯ 'ಹಗ್ಗ ಬದಲಾಯಿಸುವ ಒಂದು ಅವಕಾಶ ತೆಗೆದುಕೊಳ್ಳಲೇ ಇಲ್ಲ ಅಪ್ಪ ಎಂಬ ಸಾಲುಗಳು ಹುಟ್ಟಿಸುವ ಧ್ವನಿ ಅರ್ಥಪೂರ್ಣವಾಗಿದೆ. ಅದೇ ರೀತಿ ತೇಜಸ್ವಿಯ ಬಗ್ಗೆ, ಅಮೃತಾ ಪ್ರೀತಂ ಬಗ್ಗೆ ಬರೆದಿರುವ ಕವ ಇಷ್ಟವಾಗುತ್ತವೆ.

"ಹೆಣ್ಣಾದರೆ ಸಾಕೆಂದರು ರಾಧೆಗೆ
ಆದರೆ ಅವಳು ಹಾಡಾಗುವೆನೆಂದಳು
....
ಹಾಡಾಗದೆ ರಾಧೆಯಿಲ್ಲ
ಹಾಡದೆ ಕೃಷ್ಣನಿಲ್ಲ ..." (ಹಾಡು, ಪು. 32)

ಇಂತಹ ಪಂಕ್ತಿಗಳು ಪ್ರೇಮವೊಂದರ ಹಂಬಲವನ್ನು ಮಂಡಿಸುವ ಸಂದರ್ಭದಲ್ಲೇ ಸಮ ನಿರ್ಧರಿಸಿರುವ 'ಹೆಣ್ಣು ಪಾತ್ರ' ನಿರ್ವಹಣೆಯ ಪರಿಧಿಗಳನ್ನು ನಿರಾಕರಿಸುವ ರೂಪಕಾತ್ಮಕತೆ ಪಡೆದುಕೊಂಡಿವೆ.

ಈ ಸಂಕಲನದ ಕವಿತೆಗಳ ಯಶಸ್ಸು ಒಂದೇ ತೆರನಾಗಿಲ್ಲ. "ಆಪ್ತರೊಬ್ಬರು ಬಿಂಕಬಿನ್ನಾಣಗಳಿಲ್ಲದ ತಮಗೇ ಆಡಿಕೊಂಡಂತಹ ಮಾತನ್ನು ನಾವು ಕೇಳಿಸಿಕೊಂಡಾಗ ತಲೆದೂಗುವಂತೆ ಜ್ಯೋತಿಯವ ರಚನೆಗಳು ನಮ್ಮ ಮೌನದ ಸಮ್ಮತಿಗೆ ಎದುರಾಗುತ್ತವೆ" ಎಂದು ಅನಂತಮೂರ್ತಿಯವ ತಮ್ಮ ಮುನ್ನುಡಿಯಲ್ಲಿ ಬರೆದಿದ್ದಾರೆ. ಬಹುಶಃ ಆಪ್ತರ ಮೌನ ಸಮ್ಮತಿಗಾಗಿಯೇ ಇಲ್ಲಿ ತಮ್ಮ ಕ ರಚನೆಯನ್ನು ಮಾಡಿದಂತಿರುವ ಜ್ಯೋತಿಯವರ ಪ್ರಯತ್ನ ಸಫಲವಾಗಿದೆ.

ಸಾರ್ಥಕ ಕವಿತೆಯೆಂದರೆ ಜೀವನ ಸತ್ಯದ ಅ ಎಂಬ ಸೂಚನೆಯನ್ನು ಕಿಸಾ ಗೌತಮಿಯ ಕತೆಯ ಮೂಲಕ ಈ ಸಂಕಲನದಲ್ಲಿನ 'ಉತ್ತಮ ಕವಿತೆಯ ಜ್ಯೋತಿಯವರು ನೀಡಿದ್ದಾರೆ. ಅವರ ಕವಿತೆಗಳ ಉದ್ದೇಶವೂ ಅದೇ ಇರಬೇಕು. ಮಾತಿನ ಬೆಡಗಿ ಬದುಕನ್ನು ಬಗೆವಾಟವೇ ಮುಖ್ಯವೆಂದು ಹೊರಟಿರುವ ಕವಿಯ ನಿಲುವು ಹಾಗೂ ಕಾವ್ಯ ನಮ್ಮ ಮೆಚ್ಚುಗೆ ಗಳಿಸಿಕೊಳ್ಳುತ್ತದೆ.


● ಡಾ. ಬಂಜಗೆರೆ ಜಯಪ್ರಕ

ಕೈಗಳೇ ತ್ರಿಶೂಲವಾದ ದೇಶದಲ್ಲಿ

1
ನಾವು ಈ ದೇಶದ ನಿಜ ವಾರಸುದಾರರು
ಅಂದುಕೊಂಡವರಿಂದ ಆಕಾರ ತಿದ್ದಿಸಿಕೊಂಡು
ಚರಿತ್ರೆಯ ನಿಜ ಅಕ್ಷರಗಳ ಮೂಲೆಗೊತ್ತಿ
ದೇಶಭಕ್ತಿಯ ಬೇರುಬಿಟ್ಟು ಹೆಮ್ಮರವಾಗಿಸಿ
ಓದುವವರ ತಡೆದು ತಾವೇ ಮಾತಾಡಿ ಇದು ಸತ್ಯ ಎಂದು ಕೂಗಿ
ಝುಂಡಾ ಹಾರಿಸಿ ಜೈಕಾರ ಹಾಕುವುದ ಕೇಳಿಸಿಕೊಳ್ಳುತ್ತಲೇ
ಬೆಳಗಾಗುವುದರಲ್ಲಿ ಈ ದೇಶದ
ಎಷ್ಟೋ ಜನರ ಕೈಗಳು ತ್ರಿಶೂಲವಾಗುತ್ತವೆ!

2
ರಾತ್ರಿ ಗಂಡ ಮುಟ್ಟಿದಲ್ಲೆಲ್ಲಾ ಕೈ ಚುಚ್ಚಿ ರಕ್ತ ಒಸರಿ
ಆತಂಕದಿ ಇನ್ನೆಂದೂ ನಿನ್ನ ರಾತ್ರಿಗೆ
ಜತೆಯಾಗಲಾರೆ ಎಂದು ಹೆಂಡತಿ ಬಿಕ್ಕಳಿಸುತ್ತಾಳೆ!
ಮುದ್ದಿಸಿ ಕೈ ತುತ್ತನ್ನಿಟ್ಟ ಅಪ್ಪನ ಅದೇ ಕೈಗಳು ಇಂದು
ಮುಟ್ಟಲು ಬಂದರೆ
ಕೊಲ್ಲುವ ಭಯವಾಗಿ ಮಗು ಚಿಟಾರನೆ ಚೀರುತ್ತದೆ!

3
ಕೈ ತ್ರಿಶೂಲವಾಗದವರನ್ನೆಲ್ಲಾ ದೇಶದ್ರೋಹಿಗಳೆಂದು
ತೀರ್ಮಾನಿಸಲಾಗುತ್ತದೆ
ಅಂತಹವರ ಇಲ್ಲವಾಗಿಸಬೇಕೆಂದು ಫರ್ಮಾನು ಹೊರಡುತ್ತದೆ



ಈಗ ಕಮ್ಮಾರನ ಕುಲುಮೆಯೆದುರು ಅವರು ಸಾಲು ನಿಂತಿದ್ದಾರೆ
ಕಮ್ಮಾರ ತಿದಿ ಒತ್ತುತ್ತಲೇ ಕೈ ಕೆಂಪಗೆ ಕಾಯಿಸಿ
ಸುತ್ತಿಗೆಯಿಂದ ಕೊಡುವ ಒಂದೊಂದು ಏಟಿಗೂ ಅಮ್ಮಾ ಎಂದು
ಅರಚುತ್ತಾರೆ!
ತನ್ನ ಕೈ ತ್ರಿಶೂಲವಾಗದ ಕಮ್ಮಾರನಿಗೂ ಗೊತ್ತು
ತಾನು ಮೊನಚುಗೊಳಿಸಿದ ಕೈಗಳೇ ತನ್ನ ಹಿರಿದು ಕೊಲ್ಲಲಿವೆ
ಎಂದು

4
ಯುದ್ಧ ಆರಂಭವಾಗುತ್ತದೆ
ಬೆರಳುಳ್ಳ ಕೈನವರ ನಾಶಕ್ಕೆ ಸೈನ್ಯ ಸಜ್ಜಾಗುತ್ತದೆ
ಸಿಕ್ಕವರು ಬಲಿಯಾಗುತ್ತಾರೆ. ಸ್ವತಃ ತಾಯಂದಿರೂ ಕೂಡ
ಎಷ್ಟೋ ಜನ ಉಸಿರು ಬಿಗಿದು ಬಚ್ಚಿಟ್ಟುಕೊಳ್ಳುತ್ತಾರೆ
ಹಸುಗೂಸುಗಳನ್ನು ತಾಯಂದಿರು ಮುಚ್ಚಿಟ್ಟುಕೊಳ್ಳುತ್ತಾರೆಂದು
ಇವರು ಜೈಕಾರ ಹಾಕುತ್ತಾರೆ.
ಗಂಟಲು ಒಣಗಿ ನೀರಿಗಾಗಿ ಹಾಹಾಕಾರ ಏಳುತ್ತದೆ
ಗುಟುಕು ನೀರಿಗೆ ತುತ್ತು ಕೂಳಿಗೆ ಕೈಗಳಿಗಾಗಿ ತಡಕಾಡುತ್ತಾರೆ
ಮತ್ತದೇ ಅಳಿದುಳಿದ ಜೀವಗಳ ಕೈಗಳೇ
ನೀರನ್ನಿತ್ತು ಕೂಳನ್ನಿತ್ತು ದೇಶಭಕ್ತರನ್ನೆಲ್ಲಾ
ನಮ್ಮವರೆಂದು ಕಾಪಿಡುತ್ತಾರೆ
ಈಗ ಮತ್ತವರು ದೇವರಲ್ಲಿ ತಮ್ಮ ಮೊದಲ ಕೈ
ನೀಡೆಂದು ಮೊರೆಯಿಡುತ್ತಾರೆ.
ತಾವೇ ಫರ್ಮಾನು ಹೊರಡಿಸಿದ ದೇಶದ್ರೋಹಿಗಳ ಪಟ್ಟಿಯಲ್ಲಿ
ತಮ್ಮದೇ ಹೆಸರು ನೊಂದಾಯಿಸಲು ಸಾಲು ನಿಂತಿದ್ದಾರೆ!



● ಅರುಣ್ ಜೋಳದ ಕೂಡ್ಲಿ

...ಚುಂಚನಗಿರಿ ಸ್ವಾಮಿಗೆ ಒಂದು ಸಜೇಶನ್ ಕೊಡ್ತೀನಿ...

...ದು ಅತಿವೃಷ್ಟಿಯ ಸುದ್ದಿಯಿಂದ ಇನ್ನು ಹೊರ ...ಸ್ಸಿ. ಎಲ್ಲವನ್ನು ಕಳೆದುಕೊಂಡು ಪರದಾಡುವ ... ಬಗ್ಗೆ ಗಾಢವಾಗಿ ಯೋಚಿಸುತ್ತಿದ್ದ ಕಾಳಮಾವ ...ನೇ ಲೊಚಗರೆಯುತ್ತಿದ್ದ. ಇದ್ಯಾಕೆ ಎಂದು ...ಕೇಳಿದರೆ,

...ನ್ನ ಏನೇನು ಕೇಳಬೇಕಾಗ್ಯದೊ ನೋಡ ...ೊ" ಎಂದ.

...ಟ್ಟೆಪುರಾಣ

► ಬಿ. ಚಂದ್ರೇಗೌಡ

...ಯಾದತಂತೆ ಕಣ ಮಾವ" ಎಂದಳು.

...ಾರೇ ಹೇಳಿದೋರು ನಿಂಗೆ?" ಎಂದ ಉಗ್ರಿ.

...ಟಿ ಆಫೀಸಲ್ಲಿ ಮಾತಾಡ್ತಯಿದ್ರು ಕಂಡ್ರ. ಸ್ಕಟ್ರಿ ...ು ಹೇಳತಿದ್ದ ಯಲ್ಲಾರು ಕೇಳತಿದ್ರು" ಎಂದಳು.

...ೀಡೇ, ಪ್ರಳಯಾಯ್ತದೆ ಅಂತ ಹತ್ತೊರಸದ ...ದರಿಸಿದ್ರು. ಆಯ್ತೇ, ಈಗ್ಲು ಅಂಗೆ ಹೆದರುಸ್ತ ...ದನ್ನೆಲ್ಲ ನಂಬಕ್ಕೆ ಹೋಗಬ್ಯಾಡ" ಎಂದ ಉಗ್ರಿ. ...ವು ಚಿಕ್ಕುಡಗರಾಗಿದ್ದಾಗ್ಲು ಅಂಗೆ ಹೆದ್ರಿಸಿದ್ರು ...ಕ್ರಾಂತಿ ಹಬ್ಬದಾಗ ಭೂಮಿ ದಬ್ಬಾಯ್ಕತ್ತದೆ ... ಅಂಗೇನು ಆಗ್ಲೇಯಿಲ್ಲ."

...ಯ ಅಂದ್ರೇನು ಗೊತ್ತೇನೆ? ಈಗ ಉತ್ತರ ...ದಲ್ಲಿ ಆಯ್ತಲ್ಲಾ ಅದೇ ಪ್ರಳಯ. ಅಂದ್ರೆ ...ು. ಅಂಗೆ ಅಲ್ಲಿ ಇಲ್ಲಿ ಆಯ್ತಾಯಿರತದೆ. ಇಡೀ ...ಪ್ರಳಯಾಗೊ ಕಾಲ ಇನ್ನ ಬಂದಿಲ್ಲ" ಎಂದ

...ರಡೊರ್ಷಕ್ಕೆ ಆದತಂತೆ ಕಂಡ್ಡಾ. ಸಮುದ್ರ ಉಕ್ಕಿ ...ಿ. ಯಲ್ಲಾ ಮುಳಿಗೋಯ್ತರ್ರಂತೆ."

...ಗೆಷ್ಟೇ ವಯಿಸು?"

...ಗೊತ್ತಿಲವೇನ್ಲ? ಮುವತ್ತೈದಾಯ್ತು."

...ಗೆ ಮುವತ್ತೈದು. ನನಿಗೂ ಅಷ್ಟೆಯಾ. ...ನಿಗೆ ಯಪ್ಪತ್ತೆಂಟು. ಸೀರಮಾವನಿಗೆ ಯಪ್ಪತ್ತು ...ಮುವತ್ತೇಳು. ಹೋಟ್ಟು ಚಿಕ್ಕಣ್ಣನಿಗೆ ನಲವತ್ತೇಳು. ... ಹೆಚ್ಚು ಕಮ್ಮಿ ಜೀವನ ಅನುಭವಿಸಿದ್ದಿವಿ. ...ಗ್ಲೋ ಪ್ರಳಯ ಆದ್ರು ಏನು ಹೆದರಬೇಕಾಗಿಲ್ಲ ... ಎಂದ ಉಗ್ರಿ.

...ಗ್ಲೆ ಭೂಮಿ ಬಾಯಿ ಬುಡ್ತಪ್ಪ ನಾನಂತು ಇಳುದು ...ುತ್ತಿನಿ" ಎಂದ ಸೀರ.

"ಪ್ರಳಯಾಯ್ತದೆ ಅಂತ ಹೆದರಸೊ ಸೂಳೆಮಕ್ಕಳಿಗೆ ಸೀರ ಮಾವನಂಗೇ ಉತ್ತರ ಕೊಡಬೇಕು ಕಣೆ. ಯಾರೂ ಇಲ್ಲಿ ಇರಕ್ಕೆ ಬಂದೋರಲ್ಲ, ಅದ ತಿಳಕಬೇಕು."

"ಇಲ್ಲೇ ಇರೋರಂಗೆ ಹೆದ್ರಿ ಸಾಯ್ತರಲ್ಲ ಹೇಳು."

"ಬಾಚಿ ಬಳುದು ಗುಡ್ಡೆ ಹಾಯ್ಕಂಡಿರೋರು ಅಂಗೆದರತರೆ ಕಣೇ. ಅದೇ ಏನೂ ಇಲ್ದೋರು ಇದ್ದೊಟ್ಟು ದಿನಾಯ್ತು ಅಂತ ಬದುಕ್ತ ಅವ್ರುರೆ."

"ಬದುಕೇ ಕೊಚುಗಂಡೊದೋರು ಯಂಗೆ ಬದುಕಬೇಕೋ ಉಗ್ರಿ?" ಎನ್ನುತ್ತಾ ವಾಟಿಸ್ಸೆ ಬಂದ.

"ಸರ್ಕಾರ ಯಲ್ಲಾನೂ ಮಾಡಿ ಕೊಡ್ತದಂತಲ್ಲ ತಗೊ. ಬೆಂಗಳೂರಲ್ಲೇ ಏಳುನೂರು ಕೋಟಿ ಕಲೆಕ್ಟಾಗಿದ್ದತಂತೆ."

"ಏಳುನೂರು ಕೋಟಿಯಲ್ಲ, ಏಳು ಸಾವುರ ಕೋಟಿ ಬೇಕಾದ್ರೆ ಕಲೆಕ್ಟಾಯ್ತದೆ. ಆದ್ರೆ ಸರಕಾರ ಸರಿಯಾಗಿಲ್ಲವಲ್ಲ ಹೇಳು."

"ಸರಕಾರೇನಾಗ್ಯದ್ಲ?"

"ಈಸ್ವರಪ್ಪ ಅನ್ನೊ ಮಿನಿಷ್ಟ್ರು ನೆರೆ ಹಾವಳಿ ಕಾಸು ತಿಂದ್ರೆ ನಾವು ಸುಮ್ಮನಿರದಿಲ್ಲ ಅಂದವುನಂತೆ. ಅಲ್ಲಿಗೇನಾಯ್ತು? ಅಂತ ಕಾಸು ತಿನ್ನ ಜನಗಳೂ ಅವ್ರುರೆ ಅಂದಂಗಾಯ್ತು, ಅದರಲ್ಲೂ ಅವ್ರುರ ಪಾರ್ಟಿಲೆ ಅಂತ ಜನವ್ರುರೆ ಅನ್ನದು ಸಾಬೀತಾಯ್ತು" ಎಂದ ವಾಟಿಸ್ಸೆ.

"ಈಶ್ವರಪ್ಪ ಹೇಳೊ ಮಾತ ತಗದಾಕಂಗಿಲ್ಲ ಕಣೊ ವಾಟಿಸ್ಸೆ."

"ನಾನೇಳತಯಿರದು ಅದ್ನೆ ಅಲವೇನೊ ಉಗ್ರಿ. ಈ ಹಿಂದೆ ಇದೇ ಬಿಜೆಪಿ ಜನ ರಾಮಮಂದಿರ ಕಟ್ಟತಿವಿ ಅಂತ ಶ್ರಿರಾಮನ ಪೋಟ ತಂದು ಮಾರಿದ್ರು. ಆ ದುಡ್ಡೇನಾಯ್ತು? ರಾಮಮಂದಿರ ಕಟ್ಟತಿವಿ ಅಂತ ದುಡ್ಡು ಕಲೆಕ್ಟ್ ಮಾಡಿದ್ರು. ಆ ದುಡ್ಡೇನಾಯ್ತು?"

"ಅದ್ವಾನಿ ಕಟ್ಟತಿನಿ ಅಂದವುನೆ."

"ಅವುನ ಮಾತು ಎಲ್ಲಿಗೋಯ್ತದೆ ಅಂದ್ರೇ ಅದೇ ಹಳೆ ಗಾದೆ ಮಾತಿಗೋಯ್ತದೆ ಕಣೊಉಗ್ರಿ. ಈ ನಮ್ಮ ಸೀರ ಚಿಗಪ್ಪನಂಥೋನು ನಾನು ಸಾಯದೆಯಿದ್ರೆ ಒಂದಲ್ಲಾ ಒಂದಿನ ಮಾಡ್ತೇ ಮಾಡ್ತೀನಿ ಅಂತ ಹೇಳೋನಂತೆ ಅಂಗಾಯ್ತು ಅದ್ವಾನಿ ಹೇಳಕೆ. ಅವುನ ಮಾತನು ನಂಬ್ತಿಯಲ್ಲೊ ಉಗ್ರಿ."

"ಅವುನ ಮಾತು ಬ್ಯಾಡ, ಈಶ್ವರಪ್ಪನ ಮಾತ ನಂಬುಬವುದಲ್ಲವೆ?"

"ಅವುನು ಕೊಟ್ಟರೊ ಎಚ್ಚರಿಕೆ ಮಾತಿನ ಹಿಂದಿನ ಅನುಮಾನವ ನಂಬಲೇಬೇಕು. ಅದ್ಕೆ ಈಗ ನಾನೊಂದು ಸಜೇಶನ್ ಕೊಡಣ ಅಂತಾ ಯಿದ್ದಿನಿ."

"ಯಾರಿಗೇ?"

"ಮೊದಲ್ನೆದಾಗಿ ನಮ್ಮ ಚುಂಚನಗಿರಿ ಸ್ವಾಮಿಗೆ. ನಾನು ಕೊಡೊ ಸಜೇಶನ್ ಏನಪ್ಪಾ ಅಂದ್ರೆ, ನೀವು ಬೇಕಾದೋಟು ಬಿಲ್ಡಿಂಗ್ ಕಟ್ಟಿದಿರಿ, ಬೂತ ಬಂಗ್ಲೆ ಕಟ್ಟಿದ್ದಿರಿ, ಕಾಂಪ್ಲೆಕ್ಸ್ ಕಟ್ಟಿದಿರಿ, ಕ್ವಾಟ್ರಸ್ ಕಟ್ಟಿದ್ದಿರಿ, ಮುವತ್ತ ವರ್ಷ ಪಿಡಬ್ಲುಡಿ ಇಲಾಖೆ ಮಂತ್ರಿಯಾಗಿದ್ದೋನಿಗೆ ಎಷ್ಟು ಅನುಭವ ಇರಬವುದೊ ಅಷ್ಟು ಅನುಭವ ನಿಮಗಿದೆ. ಆದ್ರಿಂದ ಐದು ಸಾವುರ ಮನೆ ನೀವೇ ಕಟ್ಟಿಕೊಟ್ಟು ಅದೇ ಮಾಮೂಲಿ ಬಿಜೆಎಸ್ ನಗರ ಅಂತ ಹೆಸುರು ಮಡಗಿ ಬನ್ನಿ ಅಂತ ಸಜೇಶನ್ ಕೊಡನಾ ಅಂತಾ ಇದ್ದಿನಿ ನೀನೇನೇಳ್ತಿ ದ್ವಡಪ್ಪ?"

"ಬಿಜೆಎಸ್ ನಗರ ಅಂದ್ರೇನ್ಲಾ?" ಎಂದಳು ಜುಮ್ಮಿ.

"ಇದೇನಕ್ಕ ಹಿಂಕೇಳ್ತಿ, ಬೆಳ್ಳೂರು ಕ್ರಾಸಿಂದ ಹಿಡಿದು ಆದಿಚುಂಚನಗಿರಿವರಿಗೂ ಎಲ್ಲಿ ನೋಡು ಬಿಜೆಎಸ್ ಕಾಣ್ತದೆ. ಅದೇನು ಅಂತ ಕೇಳ್ತಿಯಲ್ಲಾ ನೀನು. ಬಿಜೆಎಸ್ ಅಂದ್ರೆ ಬಾಲಗಂಗಾಧರ ಸ್ವಾಮಿ ಅಂತ ಕಣಕ್ಕ."



"ಅಂಗೆ ಅನ್ನು. ನಾನಿದೇನಪ್ಪ ಇಂಗ್ಲೀಸೆಸುರು ಅಂತೀನಿ."

"ಒಂದು ವೇಳೆ ಚುಂಚನಗಿರಿ ಸ್ವಾಮಿಗಳೇನಾರ ನೀವೇ ಮನೆಕಟ್ಟಿ ಕೊಡಿ ಅಂತ ಸರಕಾರಕ್ಕೆ ಹತ್ತು ಕೋಟಿ ಕೊಟ್ರೆ ಅಧಿಕಾರಿ ಗಳು ಮನೆಕಟ್ಟಿಗತ್ತದೆ ವರತು ಬಡವರ ಮನಿಯಾಗದಿಲ್ಲ."

"ನಿಜ ಕಣೊ ವಾಟಿಸ್ಸೆ. ಬೆಂಗಳೂರಲ್ಲಿ ಯಾವುದಾದ್ರು ದ್ವಡ್ಡ ಬಂಗ್ಲೆ ನೋಡಿದ್ರೆ, ಅದ್ಯಾರದು ಆಗಿರದಿಲ್ಲ, ಸರಕಾರದಲ್ಲಿರೊ ಯಾವುದೋ ಅಧಿಕಾರಿದೊ, ಇಂಜಿನಿಯರ್‌ದೊ ಆಗಿರತದೆ."

"ಇಂಜಿನೀರ್‌ಗೇನೋ ಸಂಬಳ ಬತ್ತದೆ, ಕಟ್ಟಿಗತ್ತನೆ. ರಾಜಕಾರಣಿ ಗ್ಯಾವ ಸಂಬಳ ಬಂದತ್ಲ? ಅವುರ ಮನೆ ನೋಡಿದ್ದಿಯಾ?" ಎಂದ ಸೀರ.

"ಪರವಾಗಿಲ್ಲ ನಮ್ಮ ಚಿಗಪ್ಪ ರಾಜಕಾರಣಿಗಳ ಮನೆ ವಾಚ್‌ಮಾಡ್ಯವುನೆ ಅಂದಂಗಾಯ್ತು, ನೋಡ ಚಿಗಪ್ಪ ಯಾವತ್ತು ಅಧಿಕಾರಿಗಳೂ ರಾಜಕಾರಣಿಗಳೂ ಕ್ಲೋಜ್ ಫ್ರೆಂಡಾಗಿರತರೆ. ಆದ್ರಿಂದ ಇಲ್ಲಿ- ಅವ್ರುರಿಬ್ರಗೂ ಶಿಕ್ಷೆ ಆದದ್ದೇಯಿಲ್ಲ, ಅದ್ಕೆ ನನಗೆ ಈ ಪ್ರವಾಹದ ಪರಿಹಾರದ ಬಗ್ಗೆ ಡವುಟಾಗ್ಯದೆ. ಅದ್ಕೆ ನಾನು ಏಸ್ನೂ ಕೊಡಕ್ಹೋಗಲಿಲ್ಲ."

"ಆಹಹ, ಮಹಾ ಕೊಡತ್ತಿದ್ದೆ ನೋಡು ನೀನು" ಎಂದಳು ಜುಮ್ಮಿ.

"ಅಕ್ಕವ್, ಎಡೂರಪ್ಪನ ಐದು ಲಕ್ಷ ನನ್ನ ಐದು ರೂಪಾಯಿಗೆ ಸಮ. ಎಡೂರಪ್ಪನಿಗೆ ಐದು ಲಕ್ಷ ಯಾವ ಕಡಿಂದ್ಲೋ ಬಂದಿರೋ ಒಂದು ಸೂಟ್‌ಕೇಸಾದ್ರೆ, ನನ್ನ ಐದು ರೂಪಾಯಿ ನನ್ನ ಮರದ ಕಾಯಿ. ಆ ಮರಕೆ ನನ್ನೆಂಡ್ತಿ ನಿರೂದವುಳೆ. ಗ್ವಬ್ಬರ ಹಾಕ್ಯವುಳೆ. ಸ್ವತಃ ನಾನೇ ಮರಹತ್ತಿ ಕೆಡವಿ, ಸುಲ್ದು ನಿನ್ನಂಥೋರಿಗೆ ಮಾರಿರತಿನಿ. ಆದ್ರಿಂದ ನನ್ನ ಐದು ರೂಪಾಯಿ ಹೆಚ್ಚೊ, ಎಡೂರಪ್ಪನ ಐದು ಲಕ್ಷ ಹೆಚ್ಚೊ ಅಂತ ನೀನೇ ಹೇಳಕ್ಕ. ಬ್ಯಾಡ ನಮ್ಮ ದ್ವಡಪ್ಪನೆ ಹೇಳ್ಳಿ" ಎಂದ ವಾಟಿಸ್ಸೆ.

"ಕಷ್ಟದಲ್ಲಿರೊ ಜನಗಳ ದುಡ್ನೂ ತಿಂತರೆ ಅನ್ನದಾದ್ರೆ ಇನ್ನೇನೇಳನಾ. ಇನ್ನಂತಾ ಜನಿದ್ದರೂ ಅಂತ."

"ಯಂಥಾ ಜನ ಅಂದ್ರೆ ನೀನೆ ನೋಡ್ತಯಿದ್ದಿಯಲ್ಲಾ ದ್ವಡಪ್ಪಾ, ಕರ್ನಾಟಕದ ಮಣ್ಣು ಮಾರಿ ಕೋಟ್ಯಾಂತ್ರಪಾಯಿ ಸಂಪಾದನೆ ಮಾಡಿರೊ ಜನಾರ್ದನ ರೆಡ್ಡಿ ತಿರುಪ್ತಿ ತಿಮ್ಮಪ್ಪನಿಗೆ ಐವತ್ತು ಕೋಟಿ ರೂಪಾಯಿ ಕಿರೀಟ ಮಾಡಿಸಿಕೊಟ್ಟ. ಅವುನು ಪ್ರವಾಹ ಬಂದು ಬಳ್ಳಾರಿ ಕೊಚಗಂಡೋದ್ರು ಕಣ್ಣುಕಾಣದೋನಂಗೆ, ಕಿವಿ ಕೇಳದೋನಂಗೆ ಅವುನೆ."

"ಅವುಂದೋಗ್ಲೊ ಈ ಎಡೂರಪ್ಪ ಆಂಧ್ರದಲ್ಲಿರೊ ರಾಘವೇಂದ್ರನ ಮಠಕ್ಕೆ ಹತ್ತುಕೋಟಿ ಕೊಡ್ತನಲ್ಲ ಹೇಳು. ಅದೇನು ನಮ್ಮ ರಾಜ್ಯದ ಮಠವೇ? ಹೋಗ್ಲಿ ಆ ಮಠಕ್ಕಿರೊ ಆದಾಯ ವೆಷ್ಟು? ಚಿನ್ನ, ಬೆಳ್ಳಿ ಎಷ್ಟು ಅನ್ನದು ಎಡೂರಪ್ಪನಿಗೆ ಗೊತ್ತಿದ್ದತೇ? ಗೊತ್ತಿದ್ರೂ ಕೊಟ್ಟದ್ರೆ ಇವುನು ರೆಡ್ಡಿಗಿಂತ ಕಡಿಯಾದೋನು ಅಂತ್ಲೆ ಲ್ಯಕ್ಕ."

"ಇದನ್ನೆಲ್ಲ ಯೋಚನೆ ಮಾಡಿ. ನಾನು ಒಂದು ತೀರ್ಮಾನಕ್ಕೆ ಬಂದಿದ್ದೀನಿ ಕಣೊ ಉಗ್ರಿ. ಯಾರಿಗಾದ್ರು ಸಹಾಯ ಮಾಡಬೇಕು ಅನ್ನದಾದ್ರೆ ಅವುರಡ್ರಸ್ ತಿಳಕಂಡು ಎಂ.ಓ. ಮಾಡನಾ ಅಂತಾ ಇದ್ದಿನಿ ಐ ಯಾಮ್ ಕರಟ್."

"ಎಂ.ಓ. ತಗಳನು ನಿನ್ನಂಥೋನೆ ಆಗಿದ್ರೆ?"

"ಇನ್ನ ವಳ್ಳೆದು. ಒಂದಿನ ಕುಡುದು ನೀರಲ್ಲಿ ವದ್ದಾಡಿದಂಗೆ ಮಜಾ ಮಾಡ್ಲಿ. ಹೆಲುಮ ತಲುಪೋದು ಮುಖ್ಯ." ●

...ದ ಅಧಿಕಾರಿ

...ರಂಥ ಅನೇಕರು ಇನ್ನೂ ವಿವಿಧ ಇಲಾಖೆಗಳಲ್ಲಿ ಇರುವುದರಿಂದಲೇ ಆಡಳಿತ ಅನ್ನುವುದು ...ದೆ, ಹೇಗೋ ಕೆಲಸಗಳು ನಡೆದುಕೊಂಡು ಹೋಗುತ್ತಿವೆ. ನಮ್ಮ ವಾಣಿಜ್ಯ ತೆರಿಗೆ ...ು ಬಗ್ಗೆ ನೀವು ಕೇಳಿರಬಹುದು. ಈ ಇಲಾಖೆ, ಲೋಕೋಪಯೋಗಿ ಇಲಾಖೆ, ಕಂದಾಯ, ... ಮತ್ತು ಅಬ್ಕಾರಿ ಮನುಷ್ಯರನ್ನು ಪಶುಗಳನ್ನಾಗಿಸುವ ಇಲಾಖೆಗಳು. ಇವುಗಳೊಂದಿಗೆ ... ಇಲಾಖೆ ಭ್ರಷ್ಟತೆಯಲ್ಲಿ ಸ್ಪರ್ಧಿಸತೊಡಗಿದೆ. ಆದರೆ ಮುಂಚಿನಿಂದಲೂ ಖದೀಮರ ರಂಗ ... ತೆರಿಗೆ ಇಲಾಖೆ.

... ಇಲಾಖೆಯಲ್ಲೂ ಕೆಲವು ಚಾರಿತ್ರ್ಯವುಳ್ಳವರು, ಸೂಕ್ಷ್ಮ ಮನಸ್ಸಿನ ಮನುಷ್ಯರು ಇದ್ದಾರೆ. ...ವುದರಿಂದಲೇ ಅಷ್ಟಿಷ್ಟು ತೆರಿಗೆ ಸಂಗ್ರಹವಾಗುತ್ತಿದೆ. ನಾನು ಬರೆಯಲಿರುವ ವ್ಯಕ್ತಿಯ ...ಲ್ಲಿ ನಮೂದಿಸುವುದು ಬೇಡ. ಇವರು ಈ ಇಲಾಖೆಯಲ್ಲಿ ಗಣ್ಯ ಅಧಿಕಾರಿ; ಈತ ...ಕರಾಗಿದ್ದರಿಂದಲೇ ಆಗಾಗ ವರ್ಗಾ ಆಗುತ್ತಿರುತ್ತಾರೆ. ಇವರು ಎಷ್ಟು ಸ್ವಾಭಿಮಾನಿ ಎಂದರೆ ... ಬರುವುದಕ್ಕೆ ಕೂಡ ಕಚೇರಿಯ ಕಾರು ಬಳಸುತ್ತಿರಲಿಲ್ಲ. ಸೈಕಲ್ ಮೇಲೆ ಬರುತ್ತಿದ್ದರು, ...ಮೇಲೆ ಮನೆಗೆ ಹೋಗುತ್ತಿದ್ದರು. ಇದನ್ನು ನೋಡಿದ ಅವರ ಕೈಕೆಳಗಿನ ಅಧಿಕಾರಿಗಳಿಗೆ ...ಯಿತು. ಅವರೆಲ್ಲ ಸೇರಿ ಮಾತಾಡಿಕೊಂಡು ತಮ್ಮ ಬಾಸ್ ಕಂಡರು.


...ು ವಿಶೇಷ. ಎಲ್ಲರೂ ಒಟ್ಟಿಗೇ ಬಂದಿದ್ದೀರಲ್ಲ" ಅಂದರು ಬಾಸ್.

...ಲ್ಲ ಸಾರ್, ನಮ್ಮಲ್ಲಿ ಎಲ್ಲರಲ್ಲೂ ಸ್ಕೂಟರ್, ಮೋಟರ್‌ಬೈಕು, ಕಾರು ಇವೆ; ನೀವು ದಿನಾ ...ಮೇಲೆ ಬಂದುಹೋಗ್ತಿದ್ದೀರಿ. ಇದು ನಮಗೆಲ್ಲ ಒಂದು ರೀತಿಯಲ್ಲಿ ಅವಮಾನಕರ. ... ತಾವು ಕೊನೇಪಕ್ಷ ಸ್ಕೂಟರನ್ನಾದರೂ ಬಳಸಬೇಕು. ನೋಡುವ ಜನಕ್ಕೆ ನಮ್ಮೆಲ್ಲರಿಗೆ ...ವಾಗುತ್ತದೆ."

...ದರೆ.... ನಿಮಗೆಲ್ಲ ನಾನು ಸೈಕಲ್ ಬಳಸೋದು ನೋಡಿ ಅವಮಾನವಾಗ್ತಿದೆ. ಹೇಗೋ ...ಸ್ಕೂಟರ್ ತಗೊಂಡೆ ಅನ್ನಿ, ಅದಕ್ಕೆ ಪೆಟ್ರೋಲ್ ಹಾಕಿಸೋರು ಯಾರು? ಅದಿರಲಿ. ನಿಮಗೆ ...ವಾಗದಿರೋ ಹಾಗೆ ಒಂದು ಕೆಲಸ ಮಾಡೋಣ" ಎಂದು ತಮ್ಮ ಕಚೇರಿಯ ಸಹಾಯಕನನ್ನು ..."ನೋಡಪ್ಪ, ನೀನಿನ್ನು ನನ್ನ ಸೈಕಲ್ ತಗೊಂಡ್‌ಬಿಡು" ಎಂದು ಅವನಿಗೆ ಸೈಕಲ್

... ಸರಿಹೋಯಿತೆಂದು ಸಹೋದ್ಯೋಗಿಗಳು ಹೊರಬಂದರು. ಅವರಿಗೆ ಆಶ್ಚರ್ಯ ಕಾದಿತ್ತು, ...ಡ ಅವರ ಬಾಸ್ ಬಿಟಿಎಸ್ ಬಸ್ಸಿನಲ್ಲಿ ಬರತೊಡಗಿದರು.

...ಕ್ಕೆ ಓದೋರ್ಥವಾಗಿ ಈ ಬಗೆಯ ಹಸಮಾರಿತನ ಇಲ್ಲದಿದ್ದರೆ ನೈತಿಕ ಆತ್ಮಹತ್ಯೆ ಕಟ್ಟಿಟ್ಟದ್ದು,



ಬಾರ್ಸಿಲೋನಾ ನೋಡಿ

ಈ ದೇಶಕ್ಕೆ ಏನಾಗಿದೆ ಎಂಬುದು ನಿಮಗೆ ಗೊತ್ತು. ಇಲ್ಲಿ ಎಲ್ಲ ರೋಗದ ಮೂಲ ಚರಿತ್ರಹೀನತೆ ಮತ್ತು ಕಲಬೆರಕೆ. ಮನುಷ್ಯನ ಚಾರಿತ್ರ್ಯ ಮತ್ತು ವಸ್ತುಗಳ ಗುಣಮಟ್ಟವನ್ನು ಕಾಪಾಡಿಕೊಂಡೊಡನೆ ದೇಶ ಚೇತರಿಸಿಕೊಳ್ಳತೊಡಗುತ್ತದೆ. ನಿಮ್ಮ ಶಿಕ್ಷಣ, ವ್ಯಾಪಾರ, ವೈದ್ಯಕೀಯ, ಕಾಮಗಾರಿ- ಎಲ್ಲ ಸರಿಹೋಗುತ್ತವೆ. ಇದು ಕೇವಲ ಹೇಳಿಕೆಯಲ್ಲ, ಕೆಲವು ದೇಶಗಳತ್ತ ಕಣ್ಣು ಹಾಯಿಸಿದರೆ ಇದು ಗೊತ್ತಾಗುತ್ತದೆ. ಸ್ಪೇನ್ ದೇಶ ನೋಡಿ. ಕೇವಲ ಹತ್ತು ವರ್ಷದ ಹಿಂದೆ ಇಡೀ ಯುರೋಪಿನಲ್ಲೇ ಬಡದೇಶವಾಗಿತ್ತು ಸ್ಪೇನ್. ಅಂತರ್ಯುದ್ಧ, ಸರ್ವಾಧಿಕಾರ, ಫ್ರಾಂಕೋ ಎಂಬ ದುಷ್ಟನ ದಬ್ಬಾಳಿಕೆ- ಎಲ್ಲ ಸೇರಿಕೊಂಡು ಸ್ಪೇನ್ ದಿವಾಳಿಯೆದ್ದಿತ್ತು. ಫ್ರಾಂಕೋ ಸತ್ತಮೇಲೆ ಬೇರೊಬ್ಬ ಸರ್ವಾಧಿಕಾರಿ ಬರಲಾಗಲಿಲ್ಲ, ಅಲ್ಲಿಯ ದೊರೆ ಕೂಡಾ ಜವಾಬ್ದಾರಿಯಿಂದ ವರ್ತಿಸಿದ. ಗೊಂದಲವಿದ್ದರೂ ರಕ್ತಪಾತವಾಗಲಿಲ್ಲ. ಕ್ರಮೇಣ ಪ್ರಜಾಪ್ರಭುತ್ವ ಚಿಗುರತೊಡಗಿತು. ಆರು ವರ್ಷದ ಹಿಂದೆ ಫಿಲಿಪ್ ಗೊಂಜಾಲಿಸ್ ಎಂಬ ಸೋಷಲಿಸ್ಟ್ ಪ್ರಧಾನಿಯಾದ; ಸೋಷಲಿಸಂನ ಸಿದ್ಧಾಂತಕ್ಕೆ ಅಂಟಿಕೊಳ್ಳದೆ ಜನತೆಯ ಆಶೋತ್ತರಗಳನ್ನು ಅವಲಂಬಿಸಿ ಸ್ವಚ್ಛ, ದಕ್ಷ ಆಡಳಿತ ನೀಡಿದ. ಇವತ್ತು ಸ್ಪೇನ್ ಆರ್ಥಿಕವಾಗಿ ಸಾಮಾಜಿಕವಾಗಿ ತಲೆಯೆತ್ತಿ ನಡೆಯುತ್ತಿರುವ ದೇಶ.




ಇಡೀ ಯೂರೋಪ್‌ನಲ್ಲಿ ಅತ್ಯಂತ ವರ್ಣರಂಜಿತ, ಭಾವುಕತೆಯ ಜನರನ್ನುಳ್ಳ ಸ್ಪೇನ್ ಲೋರ್ಕಾ ತರಹದ ಕವಿಗಳನ್ನು, ಪಿಕಾಸೋ ತರಹದ ಚಿತ್ರಕಲಾವಿದರನ್ನು ರೂಪಿಸಿತು; ಹಾಗೆಯೇ ಸ್ಪಾನಿಷ್ ಭಾಷೆ ದಕ್ಷಿಣ ಅಮೆರಿಕಾ, ಮೆಕ್ಸಿಕೋ, ಕೊಲಂಬಿಯಾ, ಚಿಲಿ ಮುಂತಾದ ರಾಷ್ಟ್ರಗಳಲ್ಲಿ ಪ್ರತಿಭಾವಂತ ಸಾಹಿತಿಗಳನ್ನು ಬೆಳೆಸಿತು. ಅದೆಲ್ಲ ಇರಲಿ... ಮುಂದಿನ ವರ್ಷ ಬಾರ್ಸಿಲೋನಾದಲ್ಲಿ ಒಲಂಪಿಕ್ ಪಂದ್ಯಗಳನ್ನು ನಡೆಸಲಿರುವ ಸ್ಪೇನ್ ಅತ್ಯಂತ ಸಂಭ್ರಮದಿಂದ ಸಿದ್ಧವಾಗತೊಡಗಿದೆ. ಹುಮ್ಮಸ್ಸು ತುಂಬಿದ ಜನತೆ ತಮ್ಮ ರಾಜಧಾನಿ ಮ್ಯಾಡ್ರಿಡ್ ಮತ್ತು ಬಾರ್ಸಿಲೋನಾದಲ್ಲಿ ಕಟ್ಟುತ್ತಿರುವ ಕಟ್ಟಡಗಳು, ಅತಿಥಿಗೃಹಗಳು ಜನರನ್ನು ಚಕಿತಗೊಳಿಸಲಿವೆ.

ಅಲ್ಲಿ ಹಲವೇ ವರ್ಷಗಳಲ್ಲಿ ಸಾಧ್ಯವಾದದ್ದು ಇಲ್ಲಿ ನಾಲ್ಕು ದಶಕಗಳಲ್ಲೂ ಸಾಧ್ಯವಾಗಿಲ್ಲ. ಅತ್ಯಂತ ಬಡದೇಶಗಳಲ್ಲಿ ಒಂದಾಗಿರುವ ಭಾರತ ಎಲ್ಲ ಶಿಸ್ತು, ಹುಮ್ಮಸ್ಸು, ಕೆಲಸದ ರೋಮಾಂಚನ ಕಳೆದುಕೊಂಡು ಕರುಣಾಜನಕ ರೀತಿಯಲ್ಲಿ ಮುಂದುವರೆಯುತ್ತಿದೆ. ಇಲ್ಲಿಯ 'ಗಣ್ಯ'ರು ಇಡೀ ದೇಶದ ದಾರಿತಪ್ಪಿಸಿ ತಿಂದುಹಾಕುತ್ತಿದ್ದಾರೆ.

-ಡಿಸೆಂ...ರ್ 29,1991

ನೆರೆಸಂತ್ರಸ್ತ ಪರಿಹಾರ ನಿಧಿಗೆ ಸಂತಾಪ!

ಸಾಂಸ್ಕೃತಿಕ ನಗರ ಎಂದೇ ಕರೆಸಿಕೊಳ್ಳುವ ಮೈಸೂರಿನಲ್ಲಿ ಇತ್ತೀಚೆಗೆ ಕೋಮುಗಲಭೆ ನಡೆಯಿತಲ್ಲಾ... ಪ್ರಭಾವೀ ಸಾಹಿತಿಗಳು ಹಾಗೂ ಸಂಸ್ಕೃತಿ ಪ್ರತಿಪಾದಕರು ಇದೀ ಘಟನೆಯಲ್ಲಿ ಅಪರಾಧಿ ಯಾರು ಎಂಬ ತಾತ್ವಿಕ ಚರ್ಚೆಯಲ್ಲಿ ತಲ್ಲೀನರಾಗಿದ್ದರು. ಆದರೆ ಕೂದಲು ಸೀಳುವ ಪರಿಶೀಲನೆ ಸಂತರವೂ ನಿರ್ದಿಷ್ಟ ಉತ್ತರ ದೊರೆಯದಿದ್ದುದಕ್ಕೋ ಅಥವಾ ತಮ್ಮ ಮನಸ್ಥಿತಿಗೆ ಒಪ್ಪದ ಒಂದು ಸಣ್ಣ ವಿಷಯವನ್ನೂ ಘನಘೋರ ಎಂದು ಪರಿಗಣಿಸುವ ಸ್ವಭಾವದಿಂದಾಗಿ ಅಂಥವರೊಡನೆ ಹೊಂದಾಣಿಕೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಗುವುದನ್ನು ತಾಳಲಾರದೆಯೋ ಏನು ಕತೆಯೋ.... ಸಾಂಸ್ಕೃತಿಕನಗರದ ಬುದ್ಧಿಜೀವಿಗಳು ದಿವ್ಯಮೌನ ವಹಿಸಿದ್ದರು. ಇಂತಹ ಕ್ರಿಯೆ ಇತರರಲ್ಲಿ ಸಾಂಸ್ಕೃತಿಕ ನಗರಿಯೇ ಕೋಮಾ ಸ್ಥಿತಿಯಲ್ಲಿದೆ ಎಂಬ ಅನುಮಾನ ಮೂಡಿಸಿರಲಿಕ್ಕೂ ಸಾಕು.



▶ ಎಚ್.ಎಲ್. ಕೇಶವಮೂರ್ತಿ

ಕೋಮು ಸೌಹಾರ್ದತೆಯ ಆಶಯಗಳನ್ನು ಹೃದಯದಲ್ಲಿಟ್ಟುಕೊಂಡಿರುವ ಕೆಲವು ಸಂಘಟನೆಗಳು ಮೈಸೂರಿನ ಗಲಭೆ ಕುರಿತಂತೆ ಸತ್ಯಶೋಧನೆಯಲ್ಲಿ ತೊಡಗಿದ್ದು ಅದರ ವರದಿ ಕಳೆದ ಭಾನುವಾರ ಮೈಸೂರಿನಲ್ಲಿ ಬಿಡುಗಡೆ ಆಯಿತು. ಸಾಂಸ್ಕೃತಿಯ ನಗರಿಯ ಪ್ರತಿಷ್ಠಿತ ಭುದ್ಧಿಜೀವಿಗಳು ಇದೊಂದು ಕ್ಷುಲ್ಲಕ ಕಾರ್ಯಕ್ರಮ ಎಂದು ಪರಿಗಣಿಸಿಯೋ ಅಥವಾ ಪೂರ್ವ ನಿಯೋಜಿತ ಕಾರ್ಯಭಾರದ ಒತ್ತಡದಿಂದಾಗಿಯೋ ಸಭಾಂಗಣದ ಆವರಣಕ್ಕೆ ತಲೆ ಹಾಕದೆ ಪ್ರತ್ಯೇಕತೆಯನ್ನು ಕಾಪಾಡಿಕೊಂಡರು. ಇದು ಅವರು ತುರ್ತು ನಿಗಾ ಘಟಕದಿಂದ ಹೊರಗೆ ಬಂದಿಲ್ಲವೆಂಬುದರ ಸೂಚಕವಾಗಿದೆಯ ಎಂಬ ಅನುಮಾನ ಮೂಡಿಸುವಂತಿತ್ತು.

ವರದಿ ಬಿಡುಗಡೆಯ ಮುನ್ನ ಅಗಲಿದ ಮಾನವಹಕ್ಕುಗಳ ಹೋರಾಟಗಾರ ಬಾಲಗೋಪಾಲ್ ಹಾಗೂ ಉತ್ತರ ಕರ್ನಾಟಕದಲ್ಲಿ ರಾಕ್ಷಸೀ ನೆರೆ ಹಾವಳಿಗೆ ತುತ್ತಾಗಿ ಅಸುನೀಗಿದ ನೂರಾರು ಅಮಾಯಕರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಈ ಶ್ರದ್ಧಾಂಜಲಿ ಪಟ್ಟಿ ಅಪೂರ್ಣ ಎಂದು ಕೆಲವರಿಗೆ ಅನ್ನಿಸಿ ಇನ್ನೊಂದು ಹೆಸರನ್ನು ಸೇರಿಸಬೇಕು ಅನ್ನಿಸಿತಂತೆ. ಅದೆಂದರೆ....

ನೆರೆಹಾವಳಿ ನಿಂತಿದೆ. ಪರಿಹಾರ ನೆರೆ ಭೋರ್ಗರೆಯುತ್ತಿದೆ. ಪತ್ರಿಕೆ, ಟಿವಿ ಎಲ್ಲಿ ನೋಡಿದರೂ ಅದೇ ಸುದ್ದಿ.

ಮುಖ್ಯಮಂತ್ರಿ, ಮಂತ್ರಿಗಳ ಪಾದಯಾತ್ರೆ!

'ತೆರೆದ ಜೀಪಿನಲ್ಲಿ ಹೋದರೂ ಇದು ಪಾದ ಯಾತ್ರೆ!'

ಮಠಾಧೀಶರೂ ಡಿಟೋ

ಸಿನಿಮಾ ತಾರೆಯರು.. ಅವರೂ ಮನೆಮನೆ ಹೊಸ್ತಿಲು ತುಳಿದರು!

ಸಂಘಟನೆ ನಾಯಕರು ಮಾಡಿದ್ದೂ ಅದೇ!


ಸಹಾಯಧನ ಸಂಗ್ರಹಿಸಲು ಅದೇನು ಉತ್ಸಾಹ!

ಯಡ್ಯೂರಪ್ಪ, ಶೋಭಾ ಕರಂದ್ಲಾಜೆ, ಅಶೋಕ್, ಕಟ್ಟಾಸುಬ್ರಹ್ಮಣ್ಯ ನಾಯ್ಡು, ಅನಂತ್‌ಕುಮಾರ್ ಸಹಾಯ ಬೇಡಿದರು ಸರಿ. ಅವರು ಪರಿಹಾರ ನಿಧಿಗೆ ನೀಡಿದ್ದೆಷ್ಟು ಎಂಬುದು ಕೆಲವರ ತಕರಾರು. ಇವರಿನ್ನೂ ಇಂತಹ ನಿಧಿ ಸಂಗ್ರಹಕ್ಕೆ ಹೊಸಬರು ಎಂದು ಕಾಣುತ್ತದೆ. ಯಾವುದೇ ಪರಿಹಾರ ನಿಧಿ ಸಂಗ್ರಹವನ್ನೇ ಪರಿಗಣಿಸಿ. ಮುಂದಾಳತ್ವ ವಹಿಸಿಕೊಂಡವರು ಯಾವತ್ತೂ ಕೈಯ್ಯಿಂದ ಹಣ ನೀಡಿದ್ದ ಉದಾಹರಣೆಗಳಿಲ್ಲ! ಬೇರೆಯವರ ಜೇಬಿಗೆ ಕೈಹಾಕುವುದೇ ಅಂತಹವರ ಸಿದ್ಧಾಂತ! ಅನುಮಾನ ಉಳ್ಳ ವಾಚಕರಿಗಾಗಿ ಪಿ. ಸಾಯಿನಾಥ್ ಅವರು ಬರೆದಿರುವ ಲೇಖನದಲ್ಲಿನ ಒಂದು ಘಟನೆಯನ್ನು ಇಲ್ಲಿ ಸ್ಮರಿಸಿಕೊಳ್ಳಲಾಗಿದೆ.

ಹರಿಯಾಣದಲ್ಲಿ ವಿಧಾನಸಭೆ ಚುನಾವಣೆ ನಡೆಯುತ್ತಿದೆ. ನಲವತ್ತೆರಡು ಹಾಲಿ ಸದಸ್ಯರು ಮರುಚುನಾವಣೆ ಬಯಸಿದ್ದಾರೆ. ಹಾಳಾದ ಚುನಾವಣಾ ಆಯೋಗದ ಕಾಟ ನೋಡಿ. ಆಸ್ತಿ ಘೋಷಣೆ ಮಾಡಿಕೊಳ್ಳಲೇಬೇಕಲ್ಲ, ಅದನ್ನೂ ಅಷ್ಟೊ ಇಷ್ಟೊ ಮಾಡಿದ್ದಾರೆ. ಕೊಟ್ಟರೋ ಲೆಕ್ಕದಲ್ಲೇ 2004 ರಿಂದ 2009 ರ ವರೆಗಿನ ಐದು ವರ್ಷಗಳಲ್ಲಿ ಅವರು ಗಳಿಸಿರುವ ಸರಾಸರಿ ಸಂಪತ್ತು ಕೇವಲ 480 ಲಕ್ಷ ರೂಪಾಯಿಗಳದ್ದು ಮಾತ್ರ! ಅಂದರೆ ಪ್ರತಿ ತಿಂಗಳಿಗೆ 8 ಲಕ್ಷ ರೂಪಾಯಿ ಅಂದರೆ ಪ್ರತಿ ಒಂದು ಗಂಟೆಗೆ ಒಂದು ಸಾವಿರದ ಒಂದು ನೂರು ರೂಪಾಯಿ ಹಾಗಾಯಿತು!

ಹಣದ ದಂಧೆಗೆ ಇದಕ್ಕಿಂತ ಉತ್ತಮ ಉದ್ಯೋಗ ಇದೆಯ!

ಲೇಖಕರು ವ್ಯಂಗ್ಯವಾಗಿ ಹೇಳುತ್ತಾರೆ: ಪ್ರತಿಯೊಬ್ಬರೂ ಶಾಸಕರಾಗಲೇಬೇಕು ಎಂದು ಸಂವಿಧಾನಕ್ಕೆ ತಿದ್ದುಪಡಿ ತರಬೇಕಾಗಬಹುದು!



ಇದೇ ಲಹರಿಯಲ್ಲಿ ಮುಂದುವರೆದರೆ ಪ್ರತಿಯೊಬ್ಬರಿಗೂ ಕನಿಷ್ಠ ಪಕ್ಷ ನೆರೆ ಪರಿಹಾರ ನಿಧಿ ಸಂಗ್ರಹದ ಅವಕಾಶವಾದರೂ ಕಡ್ಡಾಯ ದೊರೆಯಬೇಕು!

ಇಂತಹ ಮಹಾನುಭಾವರೇ ಆಡಳಿತದಲ್ಲಿ ಪಿತಗರಿಯುತ್ತಿರುವಾಗ... ನೆರೆ ಸಂತ್ರಸ್ತ ಪರಿಹಾರ ನಿಧಿಗೂ ಸಂತಾಪ ಸೂಚಿಸಿದ್ದರೆ ಒಳ್ಳೆಯದಿತ್ತೇನೋ ಅಂತ.....

ನೊಬೆಲ್ ಪ್ರಶಸ್ತಿಯೋ ಅಥವಾ.....

ಬರಾಕ್ ಒಬಾಮಾ ಅವರಿಗೆ ಈ ಸಾಲಿನ ನೊಬೆಲ್ ಶಾಂತಿ ಪ್ರಶಸ್ತಿ ದೊರೆತಿದೆ.

ಪ್ರಶಸ್ತಿ ಅಂದರೆ ಆರೋಪ. ಇದು ಇದ್ದೇ ಇರುತ್ತೆ. ಅದಲ್ಲ ವಿಷಯ. ಈ ಪ್ರಶಸ್ತಿ ಬರಾಕ್ ಒಬಾ ಮುಜುಗರ ತಂದಿದೆಯಂತೆ. ಹಾಗಿದ್ದ ಮೇಲೆ ತಿರ ಬಹುದಿತ್ತಲ್ಲ ಅನ್ನಬಹುದು. ಚಿಕ್ಕವಯಸ್ಸಿಗೆ ದ ದೊಡ್ಡ ಪ್ರಶಸ್ತಿ ತಿರಸ್ಕರಿಸುವುದು ಅಷ್ಟು ಸುಲಭ

ಬೊಗಳೆ ಮಾತಿಗೆ ಸಿಕ್ಕ ಪ್ರಶಸ್ತಿ ಇದು. ಹೇಳ ಯಾವುದನ್ನೂ ಸಾಧಿಸಿಲ್ಲ ಎಂದು ಕೆಲವರ ಆರ

ಬುರುಡೆ ಬಿಡೋದೆ ಅಳತೆ ಗೋಲಾಗಿದ್ದರೆ ದೇಶದ ರಾಜಕಾರಣಿಗಳಿಗೆ ಅದು ಯಾವಾಗ ಸಿಗಬೇಕಿತ್ತು, ನಮ್ಮವರ ಪ್ರಾವೀಣ್ಯತೆ ಒಬಾ ಇರಲಿಕ್ಕಿಲ್ಲ, ಹೀಗಿದ್ದರೂ ಇದನ್ನು ಅವರಿಗೇ ನೀ ಉದ್ದೇಶ ಏನಿರಬಹುದು?

ಅಮೆರಿಕ ದೊಡ್ಡ ಅಣ್ಣ, ಅವನು ಹೇಳಿದ್ದಕ್ಕೆ ತಲೆ ಬಾಗಬೇಕು. ವಿರೋಧ ವ್ಯಕ್ತಪಡಿಸಿದರೆ ಬಾ ಸಿದಿತ, ದಿಗ್ಬಂಧನಗಳನ್ನು ಎದುರಿಸಬೇಕು. ಇ ಅಪಾಯಗಳಿಂದ ಪಾರಾಗಲು ನಾರ್ವೆಯನ್ನರು ರುವ ಸಂಚು ಇರಬೇಕು. ಯಾಕೆಂದರೆ ಶಾಂತಿ ಅಂತ ಒಂದು ಬಂದನಂತರ ಬಾಂಬು ಹಾಕ್ತೀನಿ ಬೆದರಿಸೋ ಹಾಗಿಲ್ಲ, ಏನೋ ಒಂದು ರೀ 'ಶಾಂತಿ ಪ್ರಶಸ್ತಿ ಅಂಜಿಕೆ' ಕಾಡುತ್ತೆ, ಮುಂದುವರ ಅನ್ನಿ, ಬಾಂಬ್ ಪ್ರಶಸ್ತಿ ವಿಜೇತ ಆಗ್ತಾನೆ! ಇ ಇಕ್ಕಟ್ಟಿಗೆ ಸಿಕ್ಕಿಸಲೇ ಇದನ್ನು ನೀಡಿರಬಹುದೇನೊ ಅಥವಾ....

ನೊಬೆಲ್ ಪ್ರಶಸ್ತಿ ಪ್ರಕಟಣೆಗೆ ಕೆಲವು ದಿ ಮೊದಲು ಇಗ್ನೋಬೆಲ್ ಪ್ರಶಸ್ತಿ ಪ್ರಕಟ ಆಗಿದೆ. ಅ ಶಾಂತಿ ಪ್ರಶಸ್ತಿಯೂ ಇದೆ. ಈ ಸಾಲಿನಲ್ಲಿ ಸ್ವಿಟ್ಜರ್‌ಲೆಂಡ್ ತಂಡಕ್ಕೆ ದೊರೆತಿದೆ. ಯಾವ ಫನಂ ಸಂಶೋಧನೆಗಾಗಿ ಅಂದರೆ..... ತಲೆಬುರುಡೆ ಬಿಯರ್ ತುಂಬಿದ ಬಾಟಲಿಯಿಂದ ಹೊ ಕೊಳ್ಳುವುದು ಉತ್ತಮವೋ ಅಥವಾ ಖಾಲಿ ಬಿ ಬಾಟಲಿಯಿಂದ ಹೊಡೆಸಿಕೊಳ್ಳುವುದು ಉತ್ತಮ ಎಂಬ ಸಂಶೋಧನೆಗೆ! ಆ ತಂಡ ದೀರ್ಘ ಸಂ ಧನೆಯ ನಂತರ ಖಾಲಿ ಬಿಯರ್ ಬಾಟಲ್ ಗಟ್ಟಿಯ ರುತ್ತಾದರೂ ಎರಡೂ ರೀತಿಯ ಬಾಟಲ್‌ಗಳ ತಲೆಬುರುಡೆ ಬಿಚ್ಚಬಹುದು ಎಂದು ತಿಳಿಸಿದೆ. ಅ ಈ ಪ್ರಶಸ್ತಿ!

ಇಲ್ಲಿ ಇಗ್ನೋಬೆಲ್ ಪ್ರಶಸ್ತಿ, ಅಲ್ಲಿ ನೊಬೆಲ್ ಪ್ರ

ನೊಬೆಲ್ ಪ್ರಶಸ್ತಿಯನ್ನೂ ಇಗ್ನೋಬೆಲ್ ಗುಂ ಸೇರಿಸುವ ಪ್ರಯತ್ನವಾ ಇದು....

ಎಲ್ಲರೂ ಸಮಾನರು, ಆದರೆ ಕೆಲವರು ಹೆಚ್ಚು ಸಮಾನರು!

ಮೊದಲು ಸಿನಿಮಾದಲ್ಲಿ ಎಕ್ಸ್‌ಟ್ರಾ ಆಗಿದ್ದು ಈಗ ಜ್ಯೋತಿಷಿಯಾಗಿ ಟಿವಿಯಲ್ಲಿ ಮುಖ್ಯ ಪಾತ್ರ ವಹಿಸುತ್ತಿರುವ ನರೇಂದ್ರ ಶರ್ಮನ ಮರ್ಮ ಚೆನ್ನಾಗಿ ತೆರೆದಿಟ್ಟರುವಿರಿ (ಲಂಕೇಶ್ 21-10-2009).

ಈ ಶರ್ಮನಂತೆಯೇ ಬೆಂಗಳೂರಿನ ಹೆಚ್ಚಿನ ಜ್ಯೋತಿಷಿಗಳು ತಮಿಳುನಾಡಿನ ಮೂಲೆಗಳಲ್ಲಿರುವ ದೇವಸ್ಥಾನಗಳಿಗೆ ಗಿರಾಕಿಗಳನ್ನು ಪೂರೈಸುವ ಕಮೀಷನ್ ಏಜೆಂಟ್‌ಗಳೆಂದು ಬಹುಜನರಿಗೆ ಗೊತ್ತಿಲ್ಲ. ನಮ್ಮ ಬೆಳಗಾವಿ ನಗರದ ಡಾಕ್ಟರ್‌ಗಳು ಪ್ಯಾಥಲಾಜಿ ಲ್ಯಾಬ್‌ಗಳೊಂದಿಗೆ ಕಮೀಷನ್‌ನ ಒಳಒಪ್ಪಂದ ಮಾಡಿಕೊಂಡು ಬಕ್ರಾ-ರೋಗಿಗಳನ್ನು ಲ್ಯಾಬ್‌ಗಳಿಗೆ ಒದಗಿಸಿದಂತೆ, ಬೆಂಗಳೂರಿನ ಜ್ಯೋತಿಷಿಗಳು ತಮಿಳುನಾಡಿನ ದೇವಸ್ಥಾನಗಳೊಂದಿಗೆ ಒಳಒಪ್ಪಂದ ಮಾಡಿಕೊಂಡು ಬಕ್ರಾ-ಭಕ್ತರನ್ನು ಒದಗಿಸಿ ಲಕ್ಷಾಂತರ ಬೋಳಿಸುತ್ತಾರೆ. ಕರ್ನಾಟಕದ ಪವಿತ್ರ ಕ್ಷೇತ್ರಗಳಲ್ಲಿ ಈ ಕಮೀಷನ್ ವ್ಯವಸ್ಥೆ ಇನ್ನೂ ಶುರುವಾಗದಿರುವುದರಿಂದಾಗಿ ಬೆಂಗಳೂರಿನ ಜ್ಯೋತಿಷಿಗಳಿಗೆ, ಪಾಮಾಚಾರಿಗಳಿಗೆ, ತಮಿಳುನಾಡಿನ ಕ್ಷೇತ್ರಗಳೇ ಹೆಚ್ಚು ಪ್ರಿಯ. ದೇವೇಗೌಡರು ಹಾಗೂ ಯಡ್ಡಿ ಆಗಾಗ ತಮಿಳುನಾಡಿಗೆ ಹೋಗುವುದು ಜ್ಯೋತಿಷಿಗಳಿಂದಾಗಿಯೇ.



ಈ ಸೈಡ್ ಆಕ್ಟರ್-ಕಮ್-ಜ್ಯೋತಿಷಿ ನರೇಂದ್ರ ಶರ್ಮನ ಬುರುಡೆಗೆ ನನ್ನ ಒಬ್ಬ ಮಿತ್ರನೂ ಬಲಿಯಾಗಿದ್ದಕ್ಕೆ ನಾನೇ ಸಾಕ್ಷಿ. ಜ್ಯೋತಿಷ್ಯದ ಹುಚ್ಚಿದ್ದ ನನ್ನ ಮಿತ್ರ - ಮಂಗಳೂರು ಕಡೆಯ ಶೆಟ್ಟಿ, ಬೆಳಗಾವಿಯಲ್ಲಿ ಪ್ಲೇಸ್‌ಮೆಂಟ್ ಏಜನ್ಸಿ ನಡೆಸಿಕೊಂಡಿದ್ದಾತ - ಒಂದು ದಿನ ನನ್ನೆದುರಿನಲ್ಲೇ ಆ ಶರ್ಮನ ಟಿವಿ ಕಾರ್ಯಕ್ರಮಕ್ಕೆ ನೇರ ಕರೆ ಮಾಡಿ ಕೇಳಿದ "ನನ್ನ ಆರೋಗ್ಯ ಆಯುಷ್ಯ ಹಾಗೂ ವ್ಯವಹಾರದ ಭವಿಷ್ಯ ಹೇಗಿದೆ?" ಎಂದು. ಆಗ ಅವನಿಗೆ ಶರ್ಮ ಹೇಳಿದ್ದು "ನಿಮ್ಮ ಆರೋಗ್ಯ ಆಯುಷ್ಯ ತುಂಬಾ ಚೆನ್ನಾಗಿದೆ. 85 ವರ್ಷ ಆರೋಗ್ಯವಂತರಾಗಿ ಬಾಳುತ್ತೀರಿ. ನಿಮ್ಮ ಹೆಂಡತಿಗೆ ...ತ್ತೈದೆ ಸಾವು. ವ್ಯವಹಾರದಲ್ಲಿ ನಿಮಗೆ ಪ್ರಾಮಾಣಿ... ನಂಬಿಗಸ್ಥ ಸಹೋದ್ಯೋಗಿಗಳೇ ಸಿಕ್ಕಿದ್ದಾರೆ ಹಾಗೂ ಅವರಿಂದಾಗಿ ನೀವು ಕೋಟ್ಯಾಧೀಶರಾಗುತ್ತೀರಿ. ಸರಕಾರಿ ಅಧಿಕಾರಿಗಳು- ಪೊಲೀಸರು ನಿಮ್ಮ ಇಚ್ಛೆಗನುಸಾರವಾಗಿಯೇ ವರ್ತಿಸುತ್ತಾರೆ."

ಇದಾಗಿ ಒಂದೇ ವಾರದಲ್ಲಿ ಆ ಶೆಟ್ಟಿಯನ್ನು ಅತಿ ನಂಬಿಗಸ್ಥರೆನ್ನಲಾದ ಅವನ ಸಹೋದ್ಯೋಗಿಗಳೇ ಕೊಲೆ ಮಾಡಿ ಇದ್ದ ಹಣವನ್ನೆಲ್ಲಾ ದೋಚಿ ಪರಾರಿಯಾದರು. ಮುತ್ತೈದೆ ಸಾವು ಪಡೆಯುತ್ತಾಳೆ ಎಂದಿದ್ದ ಆತನ ಹೆಂಡತಿಯೇ ವಿಧವೆಯಾದಳು. ಆಜ್ಞಾಧಾರಕರಾಗಿರುತ್ತಾರೆ ಎನ್ನಲಾಗಿದ್ದ ಸರಕಾರಿ ಅಧಿಕಾರಿಗಳು- ಅರ್ಥಾತ್ ಪೊಲೀಸರು ಅಪರಾಧಿಗಳನ್ನು ರಕ್ಷಿಸಲೋಸುಗ ಆ ಕೊಲೆಯನ್ನು ಆತ್ಮಹತ್ಯೆಯೆಂದು ಬರೆದು ಇನ್ಷೂರೆನ್ಸ್ ಹಣ ಸಹ ಅವನ ಕುಟುಂಬಕ್ಕೆ ಸಿಗದಂತೆ ಮಾಡಿ ಅವರನ್ನೆಲ್ಲ ನಿರ್ಗತಿಕರನ್ನಾಗಿಸಿದರು.



ಆಗ ಒಮ್ಮೆ ನಾನೇ ಈ ಜ್ಯೋತಿಷಿ ಶರ್ಮನ ಟಿವಿ ಕಾರ್ಯಕ್ರಮಕ್ಕೆ ನೇರ ಫೋನ್ ಮಾಡಿ "ನೀವು ಹೇಳಿದಂತೆ ತಮಿಳುನಾಡಿನ ದೇವಸ್ಥಾನಗಳನ್ನು ಸುತ್ತಿ ಲಕ್ಷಾಂತರ ಖರ್ಚು ಮಾಡಿ ನುಣ್ಣಗೆ ಬೋಳಿಸಿಕೊಂಡು, ಬೂದಿ ಹಿಡಿದುಕೊಂಡು ಬಂದಿದ್ದ ನನ್ನ ಮಿತ್ರನ ಬಗ್ಗೆ ನೀವು ಹೇಳಿದ್ದ ಭವಿಷ್ಯವೆಲ್ಲಾ ಸಾರಾಸಗಟು ಸುಳ್ಳಾಯಿತಲ್ಲಾ, ಇದಕ್ಕೆ ನೀವೇನು ಹೇಳುತ್ತಿರಿ ಶರ್ಮಾರೇ?" ಎಂದು ನಾನು ಕೇಳಿದ್ದಕ್ಕೆ ಆ ಶರಮ್ ಇಲ್ಲದ ಶರ್ಮ ಉತ್ತರ ಕೊಡಲಾಗದೇ ನನ್ನ ಕರೆಯನ್ನೇ ಕಟ್ ಮಾಡಿದ!

-ಸತೀಶ್.ಕೆ.ಸರವ್ವಗೋಳ್, ಗೋಕಾಕ್

ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯ ಕಾರಣಕ್ಕೆ ಉತ್ತರ ಕರ್ನಾಟಕವೆಂದರೆ ಎಲ್ಲರಿಂದ ಕಡೆಗಣಿಸಲ್ಪಟ್ಟ ಬಡವರ ನಾಡೆಂದೇ ಕುಖ್ಯಾತ. ಮಂಗಳೂರು, ಬೆಂಗಳೂರು ಮತ್ತು ಗೋವಾಗಳಿಗೆ ಹೆಂಗಸರು-ವೃದ್ಧರೆನ್ನದೇ ಕೂಲಿಗೆ ಹೋಗುವಂತ ಪರಿಸ್ಥಿತಿ ಅಲ್ಲಿನ ಜನರದ್ದು. ಇಂತಹ ಬಡವರ ಮನೆಗಳು ಹಾಗು ಅವರ ಇನ್ನಿತರ ವ್ಯವಸ್ಥೆಗಳು ಹೇಗಿರಬಲ್ಲದು ಎಂಬುದನ್ನು ಊಹಿಸುವುದು ಕಷ್ಟವೇನಲ್ಲ. ಸದಾ ಮಳೆ ಕಣ್ಣಾಮುಚ್ಚಾಲೆಯಾಡುವ ಇಂತಹ ಪ್ರದೇಶಕ್ಕೆ ಏಕಾಏಕಿ ಪ್ರವಾಹ ನುಗ್ಗಿದರೆ ಅವರ ಪರಿಸ್ಥಿತಿ ಹೇಗಿರಬೇಡ? ಅಮೆರಿಕಾ ಮತ್ತು ಜಪಾನ್‌ನಂಥ ಬಲಾಢ್ಯ ದೇಶಗಳೇ ಪ್ರಕೃತಿ ಎದುರು ತೃಣಸಮಾನ ಎಂದು ಸಾಬೀತಾಗಿರುವಾಗ ಈ ದಟ್ಟ ದರಿದ್ರರ ಪಾಡು ಇನ್ನೆಂಥದ್ದಿರಬಹುದು?

ಪ್ರಶ್ನೆ ಇರುವುದು ಪ್ರಕೃತಿ ತೋರಿದ ರುದ್ರನರ್ತನದ ಬಗ್ಗೆ ಅಲ್ಲ. ಪ್ರಶ್ನೆ ಇರುವುದು ಆ ಸಮಯದಲ್ಲಿ ಜನಪ್ರತಿನಿಧಿಗಳೆನಿಸಿಕೊಂಡವರು ವರ್ತಿಸಿದ ರೀತಿಯ ಬಗ್ಗೆ. ಅದು ಧನಂಜಯ ಕುಮಾರನಂಥ ಉಂಡಾಡಿಯ ಬಿಟ್ಟಿ ಉಪದೇಶವಾಗಿರಬಹುದು ಅಥವಾ ತಮ್ಮ ರಾಜ್ಯದಲ್ಲಿ ಸಾವಿರಾರು ಜನ ನಿಜವಾದ ಸಂಕಷ್ಟದಲ್ಲಿ ಒದ್ದಾಡುತ್ತಿರುವಾಗ ಅವರ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಳ್ಳದೇ ನೆರೆ ರಾಜ್ಯದಲ್ಲಿ ಗೂರಲುರೋಗಿಯಂತೆ ತೋರುವ ಸ್ವಾಮಿಯನ್ನು ರಕ್ಷಿಸಲು ಸ್ವತಃ ಮಂತ್ರಿಯೇ ಖುದ್ದಾಗಿ ಹೆಲಿಕಾಪ್ಟರ್‌ನಲ್ಲಿ ಹೋಗಿ ರಕ್ಷಿಸಿ ಬಂದಿದ್ದೂ ಆಗಿರಬಹುದು. ಇವೆಲ್ಲ ಈ ಸರ್ಕಾರದ ಧೋರಣೆಯನ್ನು ಸ್ಪಷ್ಟವಾಗಿ ತೋರಿಸುತ್ತವೆ.



ಈಗ ಯಡಿಯೂರಪ್ಪನ ಸರ್ಕಾರ ನೆರೆ ಪರಿಹಾರದ ಬಗ್ಗೆ ಅದೆಷ್ಟೇ ಪೋಸು ಕೊಟ್ಟರೇನು ಪ್ರಯೋಜನ? ಪ್ರವಾಹ ಕಾಲದಲ್ಲಿ ಅವರ ಸರ್ಕಾರ ಸರಿಯಾದ ಕಾರ್ಯಾಚರಣೆ ನಡೆಸಿದ್ದರೆ ಕನಿಷ್ಠ ಪಕ್ಷ 25% ಹಾನಿ (ಪ್ರಾಣ ಇತ್ಯಾದಿ)ಯನ್ನಾದರೂ ತಪ್ಪಿಸಬಹುದಿತ್ತು. ಆದರೆ ಯಡ್ಡಿ ಪಟಾಲಂನ ಪಾಲಿಗೆ ಆ ಬಡ ದರಿದ್ರರೆಲ್ಲ ಮಂತ್ರಾಲಯದ ಸ್ವಾಮಿಗಳಲ್ಲವಲ್ಲಾ? ಜನರ ಸಂಕಷ್ಟದ ಕಾಲದಲ್ಲೂ ಯಡ್ಡಿ ಸರ್ಕಾರದ ಬ್ರಾಹ್ಮಣ್ಯದ ಚಾಕರಿಯ ಗೀಳಿಗೆ ಏನೆನ್ನಬೇಕು.

ತಲೆ ಹಿಂದೆ Halo (ಬೆಳಕಿನ ಪ್ರಭಾವಳಿ ಮತ್ತು ತಲೆ ಒಳಗೆ ಹೇ....?) ಇಟ್ಟುಕೊಂಡು, ಆಶೀರ್ವಾದದ ಭಂಗಿಯಲ್ಲಿ ಕೂತು ಕೈಯ ನಡುವಿನಿಂದ ಸುಂ ಅಂತ ಟಾರ್ಚ್‌ಲೈಟ್ ಮಾದರಿಯ ಬೆಳಕಿನಿಂದ ಶೋ ರಾಗಿರುವ ಈ ಸ್ವಾಮಿಗಳು ಪವಾಡ ಪುರುಷರ ಅವರು ನಿಜವಾಗಲೂ ಪವಾಡ ಪುರುಷರಾಗಿ ಅವರಲ್ಲಿ ಪವಾಡಗಳನ್ನು ಮಾಡುವ ತಾಕತ್ತು ಇರುವ ನಿಜವೇ ಆಗಿದ್ದರೆ ಪ್ರವಾಹವೇ ಬಾರದಂತೆ ಅ ನೋಡಿಕೊಳ್ಳಬಹುದಿತ್ತಲ್ಲ? ಹೋಗಲಿ, ಅ ಸಾಧ್ಯವಾಗದಿದ್ದರೆ, ಈ ತ್ರಿಕಾಲಜ್ಞಾನಿ ಮೊದಲೇ ಪ್ರವಾಹದ ಬಗ್ಗೆ ಜನರಿಗೆ ಸೂ ಕೊಡಬಹುದಿತ್ತಲ್ಲ? (ಹಾಗೊಮ್ಮೆ ಅವ ಮೊದಲೇ ಗೊತ್ತಿದ್ದರೆ ಸೂಚನೆ ಕೊಡುವ ಬದ ಅವರೇ ಮೊದಲು ಜಾಗ ಖಾಲಿ ಮಾ ತ್ತಿದ್ದರೋ ಏನೋ?!) ಅದೂ ಬೇಡ, ಸಂಕಷ್ಟ ಸಿಕ್ಕಿಕೊಂಡಿದ್ದ ಜನರನ್ನಾದರೂ ರಕ್ಷಿಸಿ ತ ಶಕ್ತಿಯನ್ನು ತೋರಬಹುದಿತ್ತಲ್ಲಾ? ಆ ವಾಸ್ತವವಾಗಿ ತಮ್ಮನ್ನೇ ರಕ್ಷಿಸಿಕೊಳ್ಳಲಾಗದ ಜನರಿ ಇತರರ ರಕ್ಷಣೆ ಹೇಗೆ ಸಾಧ್ಯ?

ಹಿಂದೊಮ್ಮೆ ತನ್ನ ಬೆಡ್‌ರೂಂನಲ್ಲಿ ನಡೆದ ಗುಂ ಹಾರಾಟಕ್ಕೆ ಹೆದರಿ ಇದೇ ಆಂಧ್ರದ ಮತ್ತೊಬ್ಬ ಪವ ಪುರುಷ ('Why are you fear I am h ಎನ್ನುವುದು ಈತನ ಪ್ರಸಿದ್ಧ ಮಾತು) ತನ್ನ ಲ ಎತ್ತಿಕೊಂಡು ಓಡಿದ್ದರೆ ಇವತ್ತು ಈ ಗೂರಲು ಸ್ವಾ ಮತ್ತೊಂದು 'ಲಂಗ'ದ ಜೊತೆ ಸುರಕ್ಷಿತ ಜಾ ಹಾರಿಬಿಟ್ಟಿತು.

ಈ ಎರಡು ಲಂಗಗಳ ಮಧ್ಯೆ ಜನಗಳು ಮ 'ಮಂಗ'ನಂತಾದದ್ದು ಮಾತ್ರ ದಿಟ!

-ರವಿ ಪುತ್ತೂರ್, ದಕ್ಷಿಣ ಕ

ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.com ಗೆ ಕಳಿಸಬಹುದು

ಅರುಣ್ ಸಿನಿ Bits

...ವ'ಯ ಪರಿಚಯ

...ಸ್.ಎಂ. ಸುರೇಶ್ ನಿರ್ಮಾಣದ 'ಚೆಲುವೆಯೇ ನಿನ್ನ ...ಲು' ಚಿತ್ರದ ನಿರ್ದೇಶಕ ರಘುರಾಮ್ ಮತ್ತೊಂದು ... ಪ್ರಯತ್ನಕ್ಕೆ ಕೈ ಹಾಕಿದ್ದಾರೆ. ಅದೇನೆಂದರೆ, ಸಿನಿಮಾ



ಆರಂಭದಲ್ಲಿ ಬರುವ ಟೈಟಲ್ ಕಾರ್ಡ್‌ನಲ್ಲಿ ನಟ ರಮೇಶ್ ಅರವಿಂದ್ ಬಂದು ಪ್ರತಿಯೊಂದು ಪಾತ್ರದ ಪರಿಚಯ ಮಾಡಿ ಕೊಡುತ್ತಾರಂತೆ. ಮತ್ತೆ ಇಂಟರ್‌ವಲ್‌ನಲ್ಲಿ ಬಂದು ಎರಡನೇ ಭಾಗದ ಬಗ್ಗೆ ಮಾತಾಡಿ ಹೋಗುತ್ತಾರಂತೆ.

ಇದಕ್ಕಾಗಿ ಸುಮಾರು ಎಂಟು ಲಕ್ಷ ರೂಪಾಯಿ ಖರ್ಚು ಮಾಡಿ 10 ಅಡಿ ಎತ್ತರದ ಕ್ಲಾಪ್ ಬೋರ್ಡ್ ಆಕಾರದ ಸೆಟ್ ಹಾಕಿ, ಅದರ ...ಗ್ ನಡೆಸಿದ್ದಾರೆ.

...ರ್ಧ ದಿನಕ್ಕೂ ಹೆಚ್ಚು ಕಾಲ ನಡೆದ ಈ ಚಿತ್ರೀಕರಣಕ್ಕೆ ನಟ ರಮೇಶ್ ಅರವಿಂದ ಯಾವುದೇ ...ನನೆ ಪಡೆಯದೇ ಸ್ನೇಹಪೂರ್ವಕವಾಗಿ ಅಭಿನಯಿಸಿದ್ದಾರೆ.

...ಥವರೂ ಚಿತ್ರರಂಗದಲ್ಲಿ ಇದಾರಾ?

...ವಿದ್ಯಾ ಬಾಲನ್ ಮತ್ತು ಮುತ್ತು ಕೊಡುವ ಹೊತ್ತು!



ದಕ್ಷಿಣದ ಸಹಜ ಸುಂದರಿ ವಿದ್ಯಾ ಬಾಲನ್‌ಳ 'ಕಿಸ್ಮತ್' ಬದಲಾಗುತ್ತಿದೆ. ಸುದೀರ್ಘ ಚುಂಬನ ದೃಶ್ಯಗಳಲ್ಲಿ 'ಮನಸಾರೆ' ನಟಿಸುತ್ತಿರುವ ಈ ಹುಡುಗಿಯೀಗ ಪಡ್ಡೆಗಳ ಮೈ-ಮನಗಳನ್ನು ಬೆಚ್ಚಗೆ ಮಾಡಲು ತಯಾರಾಗಿದ್ದಾಳೆ.

ವಿಶಾಲ್ ಭಾರದ್ವಾಜ್ ನಿರ್ದೇಶನದಲ್ಲಿ ತಯಾರಾಗುತ್ತಿರುವ 'ಇಷ್ಕಿಯಾ' ಚಿತ್ರದ ಸ್ಟಿಲ್‌ಗಳನ್ನು ನೋಡಿದ ಪಡ್ಡೆ-ಪೋಲಿಗಳಿಗೆ ಪುಳಕವಾಗುತ್ತಿದೆ. ಈ ಚಿತ್ರದಲ್ಲಿ ವಿದ್ಯಾ ಹಳ್ಳಿಯ ಮುಗ್ಧ ಹುಡುಗಿಯಂತೆ. 'ಮುನ್ನಾಭಾಯಿ ...ಎಸ್' ಮತ್ತು 'ಲಗೇ ರಹೋ ಮುನ್ನಾಭಾಯ್' ಚಿತ್ರಗಳಲ್ಲಿ ಸಂಜಯ್‌ದತ್‌ಗೆ ಪೈಪೋಟಿ ...ರಂತೆ ನಟಿಸಿದ್ದ ಅರ್ಷದ್ ವಾರ್ಸಿ ಜೊತೆ 'ಇಷ್ಕಿಯಾ' ಚಿತ್ರದಲ್ಲಿ ವಿದ್ಯಾ ಸುದೀರ್ಘ ...ಶ್‌ಗಳಲ್ಲಿ, ಮದ-ಮುದ ನೀಡುವ ದೃಶ್ಯಗಳಲ್ಲಿ ಮಿಂಚಿದ್ದಾಳೆ.

...ದಹಾಗೆ, ಮಣಿರತ್ನಂ ನಿರ್ದೇಶನದ 'ಗುರು' ಚಿತ್ರದಲ್ಲೂ ಈ ಹುಡುಗಿ ಮಾಧವನ್ ತುಟಿಗಳನ್ನು ಒದ್ದೆ ಮಾಡಿ ಯುವಕರನ್ನು ಮುದ್ದೆ ಮಾಡಿದ್ದಳು!




ಶ್ರೀವತ್ಸನಿಗೆ ಗೇಟ್‌ಪಾಸ್ ಎಗೇನ್!

ಕನ್ನಡ ಚಿತ್ರರಂಗ ಕಂಡ ಅತ್ಯಂತ ಘೋರ ನಿರ್ದೇಶಕ ರವಿ ಶ್ರೀವತ್ಸನಿಗೆ ಡಾ. ರಾಜ್ ಫ್ಯಾಮಿಲಿ ಅಮೋಘ ಎರಡನೇ ಬಾರಿಗೆ ಕೈಕೊಟ್ಟಿದೆ.

ಎಲ್ಲ ಅಂದುಕೊಂಡಂತೇ ಆಗಿದ್ದಿದ್ದರೆ ಶ್ರೀವತ್ಸನ ನಿರ್ದೇಶನದಲ್ಲಿ ಶಿವಣ್ಣ ಅಭಿನಯಿಸಲಿರುವ 'ಮುತ್ತು ನಮ್ಮಪ್ಪ' ಚಿತ್ರ ಸದ್ಯದಲ್ಲೇ ಸೆಟ್ಟೇರಬೇಕಿತ್ತು, ಆದರೆ ಇತ್ತೀಚೆಗೆ 18 ದಿನಗಳಲ್ಲಿ ಚಿತ್ರೀಕರಣಗೊಂಡ ...' ಚಿತ್ರದ ಕಥೆಗೂ ಶ್ರೀವತ್ಸನ ಕಥೆಗೂ ಸಾಮ್ಯತೆಯಿದ್ದರಿಂದ ಸದಾಶಿವನಗರದ ಹೆಡ್ ...ನವರು ಶ್ರೀವತ್ಸನ ಸಿನಿಮಾವನ್ನು ನಿರಾಕರಿಸಿದ್ದಾರೆ.

...ದೆ ಕೂಡಾ ಪಿರಮಿಡ್ ಸಾಯಿಮಿರಾ ನಿರ್ಮಾಣದಲ್ಲಿ ಶ್ರೀವತ್ಸ ನಿರ್ದೇಶಿಸಬೇಕಿದ್ದ, ರಾಜ್‌ರ ಮೂವರು ಪುತ್ರರೂ ಪ್ರಥಮ ಬಾರಿಗೆ ಜೊತೆಯಾಗಿ ನಟಿಸಬೇಕಿದ್ದ 'ಓಂ' ಚಿತ್ರವನ್ನೂ ಹೆಡ್ ಆಫೀಸ್ ರಿಜೆಕ್ಟ್ ಮಾಡಿತ್ತು.



ಮಗಳ ಶುಶ್ರೂಷೆ!

ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ತಮ್ಮ 49ನೇ ವರ್ಷದಲ್ಲೂ ಇಷ್ಟೊಂದು ಲವಲವಿಕೆಯಿಂದಿರಲು ಕಾರಣವೇನು?

ಶಿವಣ್ಣನೇ ಹೇಳುವ ಪ್ರಕಾರ ಅವರ ಮನೆ ವಾತಾವರಣವೇ ಅದಕ್ಕೆ ಕಾರಣ.

...ನ್ನೆ ದಿನ 'ಸುಗ್ರೀವ' ಚಿತ್ರೀಕರಣದ ಹಿಂದಿನ ದಿನ ಶಿವಣ್ಣ ಟೆನ್ಷನ್‌ನಿಂದ ಸ್ವಲ್ಪ ವಿಚಲಿತರಾಗಿದ್ದರಂತೆ. ... ಗಮನಿಸಿದ ಅವರ ಹಿರಿಯ ಮಗಳು ನಿರುಪಮಾ ತಕ್ಷಣ ತನ್ನ ತಂದೆಯ ನಾಡಿ ಮತ್ತು ...ರೀಕ್ಷಿಸಿ, ಲೋ ಬಿಪಿ ಇರುವುದನ್ನು ತಿಳಿಸಿದಳಂತೆ.

...ದಲೇ ಅದಕ್ಕೆ ಬೇಕಿರುವ ಔಷಧಗಳನ್ನು ನೀಡಿ ಮಲಗಿಸಿದಳಂತೆ. ಇದನ್ನು ಸ್ವತಃ ಶಿವರಾಜ್‌ಕುಮಾರ್ ... "ಶಿ ಇಸ್ ಎ ಡಾಕ್ಟರ್. ಅವಳೇ ನನ್ನ ಆರೋಗ್ಯ ನೋಡಿಕೊಳ್ಳೋದು" ಎಂದು ...ಾಗ, ಅವರ ಮುಖದಲ್ಲಿ ಮಗಳ ಬಗೆಗಿರುವ ಹೆಮ್ಮೆ ಎದ್ದುಕಾಣುತ್ತಿತ್ತು.

...ದಹಾಗೆ ಶಿವಣ್ಣನಂಥ ಚಿರ ಯುವಕನನ್ನು ನೋಡಿದರೆ ಎಂಬಿಬಿಎಸ್ ಓದಿರುವ ಮಗಳಿದ್ದಾಳೆ ... ಸಾಧ್ಯವೇ?

ನೆನೆಗುದಿಗೆ ಬಿದ್ದ ನಿಧಿ ಸಂಗ್ರಹಣೆ




ಚಲನಚಿತ್ರ ವಾಣಿಜ್ಯ ಮಂಡಳಿಯ ನೆರೆ ಪರಿಹಾರ ನಿಧಿ ಸಂಗ್ರಹಣೆ ಕಾರ್ಯ ಈಗ ನೆನೆಗುದಿಗೆ ಬಿದ್ದಿದೆ.

ಉತ್ತರ ಕರ್ನಾಟಕ ಪ್ರಕೃತಿ ವಿಕೋಪದಿಂದ ತತ್ತರಿಸಿದಾಗ ಎಲ್ಲ ಸಂಘಸಂಸ್ಥೆಗಳಂತೆ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷೆ ಜಯಮಾಲ ಕೂಡಾ ಪತ್ರಿಕಾಗೋಷ್ಠಿ ಕರೆದು ಎರಡು ಗ್ರಾಮಗಳನ್ನು ದತ್ತು ತೆಗೆದುಕೊಳ್ಳುವ ಬಗ್ಗೆ ಘೋಷಿಸಿದ್ದರು. ಆ ಪತ್ರಿಕಾಗೋಷ್ಠಿಯಲ್ಲಿ ಅಂಬರೀಶ್, ರಾಕ್‌ಲೈನ್ ವೆಂಕಟೇಶ್, ಶಿವರಾಜ್‌ಕುಮಾರ್, ಬಿ.ಸರೋಜಾದೇವಿ ಮೊದಲಾದವರೆಲ್ಲ ಹಾಜರಿದ್ದುದ್ದರಿಂದ ಈ ಕಾರ್ಯಕ್ರಮ ಅನುಷ್ಠಾನಕ್ಕೆ ಬರಬಹುದೆಂದು ಎಲ್ಲರೂ ಭಾವಿಸಿದ್ದರು.

ಆದರೆ ಉದ್ಯಮದ ಒಳಜಗಳದಿಂದಾಗಿ ಮತ್ತು ತಾರೆಯರ ಸಣ್ಣತನದಿಂದಾಗಿ ಮಾನವೀಯವಾಗಿ ಸ್ಪಂದಿಸುವ ಈ ಕಾರ್ಯ ಈಗ ಕುಂಟುತ್ತಾ ಸಾಗುತ್ತಿದೆ.

ಸದ್ಯಕ್ಕೆ ಚಲನಚಿತ್ರ ಪ್ರದರ್ಶಕರಿಂದ ವಾಣಿಜ್ಯ ಮಂಡಳಿ ವಸೂಲಿ ಮಾಡಿರುವ 25 ಲಕ್ಷ ರೂ.ಗಳ ಹೊರತಾಗಿ ಬೇರೆ ಯಾವುದೇ ಹಣ ಸಂಗ್ರಹವಾಗಿಲ್ಲ. ಕೋಟ್ಯಂತರ ರೂ. ಸಂಭಾವನೆ ಪಡೆಯುವ ನಾಯಕ ನಟರು ಜಯಮಾಲ ಜೊತೆಗೆ ಹೆಗಲಿಗೆ ಹೆಗಲು ಕೊಟ್ಟು ಸಹಕರಿಸುತ್ತಿಲ್ಲ. ನಿಧಿ ಸಂಗ್ರಹದ ನೆಪದಲ್ಲಿ ಜಯಮಾಲ ಸರ್ಕಾರಕ್ಕೆ ತುಂಬಾ ಹತ್ತಿರವಾಗಿ ಎಮ್ಮೆಲ್ಸಿ ಸ್ಥಾನವನ್ನು ಪಡೆಯಬಹುದೆಂಬುದು ಕೆಲವರ ಸಣ್ಣತನದ ಲೆಕ್ಕಾಚಾರವೇ ಇದಕ್ಕೆಲ್ಲ ಮುಖ್ಯ ಕಾರಣ. ಈ ಮಧ್ಯೆ ಲಕ್ಷಾಂತರ ರೂಪಾಯಿಯ ಸಂಭಾವನೆ ಪಡೆಯುವ, ಚಿತ್ರವೊಂದಕ್ಕೆ ಕೋಟ್ಯಾಂತರ ರೂಪಾಯಿ ಚೆಲ್ಲುವ ಚಿತ್ರೋದ್ಯಮದ ಕೆಲವರು "ಎರಡು ಗ್ರಾಮಗಳನ್ನು ದತ್ತು ಪಡೆಯುವಷ್ಟು ಹಣ ಸಂಗ್ರಹಿಸಲು ನಮ್ಮಿಂದ ಸಾಧ್ಯವಿಲ್ಲ; ಹೀಗಾಗಿ ಅಂತಹ ದೊಡ್ಡ ಭರವಸೆಯನ್ನು ಜಯಮಾಲ ನೀಡಬಾರದಿತ್ತು" ಎಂಬ ಅಪಸ್ವರ ತೆಗೆದಿರುವುದು ಹಾಸ್ಯಾಸ್ಪದವಾಗಿದೆ.



ಇದೆಲ್ಲದರ ನಡುವೆ ದಾನಶೂರ ಕರ್ಣ ಎನಿಸಿಕೊಂಡಿರುವ ಅಂಬರೀಶ್ ಕೂಡಾ ಸಣ್ಣ ರಾಜಕೀಯ ಮಾಡುತ್ತಿದ್ದಾರೆ. "ನಾವೆಲ್ಲ ಹಣವನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಕೊಡುವ ಬದಲಿಗೆ ಸ್ವತಃ ನಾವೇ ಹೋಗಿ ನಿರಾಶ್ರಿತರಿಗೆ ಹಂಚಬೇಕು" ಎಂಬುದು ಅವರ ಒತ್ತಾಯ. ಅದರರ್ಥ ಬಿಜೆಪಿ ನೇತೃತ್ವದ ಯಡಿಯೂರಪ್ಪ ಸರ್ಕಾರಕ್ಕೆ ಪರಿಹಾರ ನಿಧಿ ಕೊಡಲು ಕಾಂಗ್ರೆಸ್ ನಾಯಕರಾಗಿರುವ ಅಂಬರೀಶ್‌ಗೆ ಇಷ್ಟವಿಲ್ಲ ಎಂಬುದೇ ಉದ್ಯಮದವರ ವ್ಯಾಖ್ಯಾನ.

ಚಿತ್ರರಂಗದ ಹಲವಾರು ಬಣಗಳು ತಮ್ಮತಮ್ಮ ಮೂಗಿನ ನೇರಕ್ಕೆ ವರ್ತಿಸುತ್ತಿವೆ. ಒಂದೆಡೆ ವಿಷ್ಣುವರ್ಧನ್ ತಾನೇ ಬೇರೆ, ತನ್ನ ಸ್ಟೈಲೇ ಬೇರೆ ಎಂಬಂತೆ ತನ್ನ ನಾಯಕತ್ವದ ಸ್ನೇಹಲೋಕ ಕ್ರಿಕೆಟ್ ತಂಡದ ಸದಸ್ಯರೊಡಗೂಡಿ ಜಯನಗರದಲ್ಲಿ ಪಾದಯಾತ್ರೆ ಮಾಡಿ, ಹಣ ಸಂಗ್ರಹಿಸಿ ಅದನ್ನು ಶಾಸಕರಿಗೆ ಒಪ್ಪಿಸಿದ್ದಾರೆ. ಇನ್ನೊಂದೆಡೆ ಬಿಜೆಪಿಯೊಂದಿಗೆ ಗುರುತಿಸಿಕೊಂಡಿರುವ ನಾಯಕಿ ತಾರಾ ಕೂಡಾ ಹಲವಾರು ಸಂಘಸಂಸ್ಥೆಗಳೊಂದಿಗೆ ಕೈ ಜೋಡಿಸಿ ನೆರೆ ಪರಿಹಾರವನ್ನು ಸಂಗ್ರಹಿಸುತ್ತಿದ್ದಾರೆಯೇ ವಿನಃ ಉದ್ಯಮದ ನಾಯಕರುಗಳ ಕಡೆಗೆ ತಿರುಗಿಯೂ ನೋಡುತ್ತಿಲ್ಲ. ಮತ್ತೊಂದೆಡೆ ಬಿಜೆಪಿಯ ಚಡ್ಡಿ ಶೂರರಾದ ಮುಖ್ಯಮಂತ್ರಿ ಚಂದ್ರು, ಜಗ್ಗೇಶ್ ಮತ್ತು ಯೋಗೇಶ್ವರ್ ತಾವು ಏನಾದರೂ ಮಾಡಿ ದೊಡ್ಡ ಮೊತ್ತವನ್ನು ಉದ್ಯಮದ ಪರವಾಗಿ ಮುಖ್ಯಮಂತ್ರಿಗೆ ನೀಡಬೇಕೆಂದು ಪಟ್ಟು ಹಿಡಿದು ಕುಳಿತುಕೊಂಡಿದ್ದಾರೆ.



ಉದ್ಯಮದಲ್ಲಿ ಅತ್ಯಂತ ಪ್ರಬಲ ಎನಿಸಿಕೊಂಡಿರುವ ನಿರ್ಮಾಪಕರ ಸಂಘ ಈತನಕ ಬಿಡಿಗಾಸು ಕೂಡಾ ನೀಡಿಲ್ಲ. ತಮಾಷೆಯೆಂದರೆ ನೆರೆಪರಿಹಾರ ನಿಧಿ ಸಂಗ್ರಹಿಸುವ ಬಗ್ಗೆ ತುರ್ತು ಸಭೆಯನ್ನು ನಿರ್ಮಾಪಕ ಸಂಘದ ಅಧ್ಯಕ್ಷ ಕೆ.ಸಿ.ಎನ್.ಚಂದ್ರು ಎರಡೆರಡು ಬಾರಿ ಕರೆದಿದ್ದಾರೆ. ಈ ಎರಡೂ ಸಭೆಯ ಖರ್ಚು ತಲಾ ಮೂವತ್ತೈದು ಸಾವಿರ ರೂ.ಗಳು ದಾಟಿವೆಯಂತೆ! ಈ ವೆಚ್ಚವನ್ನು ಯಾವುದಾದರು ಹೊಸ ನಿರ್ಮಾಪಕರ ತಲೆಗೆ ಕಟ್ಟಲಿದ್ದಾರಂತೆ. ಈ ಕಾರಣಕ್ಕಾಗಿಯೇ ಚಂದ್ರು ಮೀಟಿಂಗ್ ಕರೆದಿದ್ದಾರೆ ಎಂದರೆ ಇತ್ತೀಚೆಗೆ ಹೊಸ ನಿರ್ಮಾಪಕರಿಗೆ ಚಳಿ-ಜ್ವರ ಹಿಡಿಯುತ್ತಿದೆಯಂತೆ.

ಇಷ್ಟೆಲ್ಲ ಅಪಸ್ವರಗಳ ನಡುವೆ ಸಂಗೀತ ನಿರ್ದೇಶಕ ಮತ್ತು ಗೀತ ರಚನಕಾರರಾದ ಕಲ್ಯಾಣ್, ನಾಗೇಂದ್ರ ಪ್ರಸಾದ್, ಕವಿರಾಜ್, ಸಂಭಾಷಣಕಾರ ಮಳವಳ್ಳಿ ಸಾಯಿಕೃಷ್ಣ... ಮೊದಲಾದವರ ಸಣ್ಣದೊಂದು ಗುಂಪು ಸುಮಾರು ಹತ್ತು ಲಕ್ಷ ರೂ. ನಗದು, 10ಸಾವಿರ ಕೆ.ಜಿ. ಅಕ್ಕಿ, 50 ಸಾವಿರ ಲೀಟರ್ ನೀರು ಇತ್ಯಾದಿಗಳನ್ನು ಸದ್ದುಗದ್ದಲ, ಪ್ರಚಾರವಿಲ್ಲದೆ ನಿರಾಶ್ರಿತರ ಕೈಗೆ ನೀಡಿ ಬಂದಿದೆ.

ಮೊನ್ನೆಮೊನ್ನೆಯಷ್ಟೇ ಅಮೃತಮಹೋತ್ಸವಕ್ಕೆಂದು ಸರ್ಕಾರದ ಖಜಾನೆಯಿಂದ ಸಾಮಾನ್ಯ ಜನರ ಕೋಟ್ಯಂತರ ರೂ.ಗಳನ್ನು ಅನುದಾನವಾಗಿ ಪಡೆದ ಸಿನಿಮಾದವರ ಈ ವರ್ತನೆ ನಿಜಕ್ಕೂ ಆಚ್ಚರಿಮೂಡಿಸುತ್ತದೆ. ಕನ್ನಡಿಗರಿಂದ ಅಪಾರ ಗೌರವ, ಜನಪ್ರಿಯತೆ ಮತ್ತು ಹಣವನ್ನು ಪಡೆದಿರುವ; ಮಾತೆತ್ತಿದರೆ "ನಾವು ಕನ್ನಡ ನೆಲ-ಜಲ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಪ್ರಾಣ ನೀಡಲೂ ಸಿದ್ಧ" ಎಂದು ಘೋಷಿಸುವ ಈ ಬಣ್ಣದ ಲೋಕದ ಜನರ ನಿಜವಾದ ಬಣ್ಣ ಈಗ ಬಯಲಾಗುತ್ತಿದೆ. ●



...ಟರ್‌ನೆಟ್ ...ಮೆಂಟ್!



ನಿರ್ದೇಶಕ, ನಟ, ನಿರ್ಮಾಪಕ ಎಸ್.ನಾರಾಯಣ್ ಎಂಬ 'ಕಲಾ ಸಾಮ್ರಾಟ್' ಇತ್ತೀಚೆಗೆ 'ಚೆಲುವಿನ ಚಿಲಿಪಿಲಿ' ಎಂಬ ಚಿತ್ರದಲ್ಲಿ ತಮ್ಮ ಪುತ್ರ ಪಂಕಜ್‌ನನ್ನು ಹಾಕಿಕೊಂಡು ಆತನನ್ನು ಹೀರೋ ಮಾಡಲು ನೋಡಿದ್ದರು. ಅವರ ಪುತ್ರನ ಬಗ್ಗೆ ಇಂಟರ್‌ನೆಟ್ ಲೋಕದಲ್ಲಿ ಕೆಲವರು ಮಾಡಿರುವ ಕಾಮೆಂಟ್‌ಗಳು ಹೀಗಿವೆ:

* ಇವನಿಗಿಂತ ಸಾಧು ಕೋಕಿಲ ಚೆನ್ನಾಗಿದ್ದಾನೆ...
* ಈತ ಎಷ್ಟು ಮುದ್ದಾಗಿದ್ದಾನೆ.. ಇದು ಕಾಮಿಡಿ ಚಿತ್ರವೇ?
* ತಂದೆ ಮಗನ ಮುಂದಿನ ಚಿತ್ರ 'ಚೆಲುವಿನ ಚಕ್ಕಾಗಳು' ಅಂತ ತಗೆದರೆ 99 ದಿನ ಪಕ್ಕಾ ಓಡುತ್ತೆ.
* ಅಪ್ಪ ಸರಿಯಾಗಿ ಮಾತಾಡಿದ್ರೆ, ತಾನೆ ಮಗ ಮಾತಾಡೋದು.. ಇಬ್ರು ಸೇರಿ 'ಚೆಲುವಿನ ಚಿತ್ರಿಗಳು' ಅಂತ ಸಿನೆಮಾ ಮಾಡ್ದ್ರೆ ಚಿಂದಿ ಹಿಟ್ ಆಗ್ತೋದು.
* ಛೆ, ನಾರಾಯಣ, ನೀನು ತುಂಬಾ ತಪ್ಪು ಮಾಡ್ತಾ ಇದ್ದೀಯಾ. ಏಕೆಂದರೆ ಗಣೇಶನನ್ನು ಹಾಕೊಂಡು ಫಿಲ್ಮ್ ಮಾಡಿದೆ, ಹಿಟ್ ಆಯ್ತು ಆದರೆ ಗಣೇಶ್ ತರಹ ಮಾತು ಮತ್ತು ಮುದ್ದಾದ ಮುಖ ಇವೆರಡು ನಿನ್ನ ಮಗನಲ್ಲಿ ಇಲ್ಲ. ಆದ್ರಿಂದ ನೀನು ತೆಗೆಯುವ ಸಿನೆಮಾದಲ್ಲಿ ನೀನು ನಿನ್ನ ಮಗನನ್ನು ಬಿಟ್ಟು ಬೇರೆ ಹೊಸ ಕಲಾವಿದನನ್ನು ಹಾಕು. ಮೊದಲು, ನಿನ್ನ ಮಗನಿಗೆ ಮಾತಾಡುವ ಸ್ಟೈಲ್ ಕಲಿಸು.
* ಯಾಕ್ ನೀವೆಲ್ಲ ಹೀಗೆ ಬೈತಿದ್ದೀರಾ?? ಕನ್ನಡ ಫಿಲ್ಮ್ ಇಂಡಸ್ಟ್ರಿಯ ಹೃತಿಕ್ ರೋಶನ್ ಇವನು, ಗೊತ್ತಾ?!
* ಮುಖಕ್ಕಿಂತ ಹಲ್ಲೇ ಕಾಣ್ತಾ ಇದೆ.. ಛೀ ಕಳ್ಳ..
* ನೆಕ್ಸ್ಟ್ ಸಿನೆಮಾ 'ಬಿಗುರಿದ ಚಪ್ಪರ್' ಅಂತೆ, ಹೌದಾ?!
* ಈ ಚಿ-ತ್ರದ ಬಗ್ಗೆ, ಚಿ-ಕಾರ ಎತ್ತಿದರೆ, ಚಿ-ಪ್ಪಲಿಯಲ್ಲಿ 'ಹೊಡಿ ಮಗ'! ಚಿ-ಮಚಾ ಸಂಘದ ಅಧ್ಯಕ್ಷನಿಗೆ ಸಿನೆಮಾ ಅನ್ನೋದು ಒಂದು ಕಲೆ ಎಂಬುದೇ ಮರೆತು ಬರೀ ವ್ಯಾಪಾರ ಮಾಡ್ತಾ ಇರೋದು ಆತನ ದುರಂತ. ಪೋಸ್ಟರುಗಳಲ್ಲಿ ತನ್ನನ್ನು ತಾನೇ 'ಕಲಾ ಸಾಮ್ರಾಟ್' ಎಂಬ ಬಿರುದು ಕೊಟ್ಟುಕೊಳ್ಳೋದು, ಹುಟ್ಟಿಸಿದವರಿಗೆ ಹೆಗ್ಗಣವೂ ಮುದ್ದು ಎನ್ನುವ ಗಾದೆಯನ್ನು ಸತ್ಯ ಮಾಡಲು ಮಗನ ತಾಕತ್ತು ಗಮನಿಸದೇ ಅವನನ್ನು ಹಾಕಿ ಚಿತ್ರ ಮಾಡಿ ಅವನಿಗೂ, ಚಿತ್ರವೀಕ್ಷಕರಿಗೂ ಅವಮಾನ ಮಾಡೋದು.. ಇದೆಲ್ಲಾ ಇಂದಿನ ಕನ್ನಡ ಸಿನೆಮಾರಂಗದ ದುರಂತ! ●

ವಿಷ್ಣುಗೆ ನೆನಪಾದ ದ್ವಾರ್ಕಿ



ದ್ವಾರಕೀಶ್ ಮತ್ತು ವಿಷ್ಣುವರ್ಧನ್ ಸಂಬಂಧ 'ಆಪ್ತಮಿತ್ರ' ಚಿತ್ರದ ನಂತರ ಹಳಸಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಉದ್ಯಮದ ಮೂಲಗಳ ಪ್ರಕಾರ ವಿಷ್ಣು-ದ್ವಾರಕೀಶ್ ಜೋಡಿಯ ಸ್ನೇಹದ 4ನೇ ಅಧ್ಯಾಯ ಸದ್ಯದಲ್ಲೇ ಆರಂಭಗೊಳ್ಳುವ ಸೂಚನೆಗಳು ಕಾಣಿಸಿಕೊಳ್ಳುತ್ತಿವೆಯಂತೆ. ಅದಕ್ಕೆ ಪೂರಕ ಎಂಬಂತೆ ಇತ್ತೀಚೆಗೆ ವಿಷ್ಣುವರ್ಧನ್ "ಸಂಪೂರ್ಣವಾಗಿ ತಮ್ಮನ್ನು ತಾವೇ ಚಿತ್ರ ನಿರ್ಮಾಣದಲ್ಲಿ ತೊಡಗಿಸಿಕೊಳ್ಳುವ, ನಾನು ಮೆಚ್ಚಿರುವ ಇಬ್ಬರು ನಿರ್ದೇಶಕರುಗಳೆಂದರೆ ಎಸ್.ನಾರಾಯಣ್ ಮತ್ತು ದ್ವಾರಕೀಶ್" ಎಂದು ಹೇಳಿದರು.

ಅಂದರೆ ವಿಷ್ಣು-ದ್ವಾರಕಿ ಜೋಡಿಯ ಚಿತ್ರ ಮುಂದಿನ ವರ್ಷ ಸೆಟ್ಟೇರಬಹುದೆಂಬುದು ಎಲ್ಲರ ಅನಿಸಿಕೆ.

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 28-10-2009 RNI No. KARKAN2005

ಬಳ್ಳಾರಿ ನಾಗ ಭರ್ಜರಿ ಲಾಗ



ಕಣ್ಣುಕುಕ್ಕುವ ಕಲರ್ ಕಲರ್ ಲುಂಗಿ, ಅದಕ್ಕೆ ಹೊಂದಿಕೆಯೇ ಆಗದ ಥಳಥಳ ಬಣ್ಣದ ನೈಲಾನ್ ಜುಬ್ಬ ಕಣ್ಣಿಗೆ ಬಗೆಬಗೆಯ ಕೂಲಿಂಗ್ ಗ್ಲಾಸು, ಕಪ್ಪು ಕೈಗಳ ತುಂಬಾ ಹಳದೀ ಲೋಹ, ಬಾಯಿತುಂಬಾ ಎಲೆ ಅದಿಕೆ, ತಲೆಗೊಂದು ಕೆಂಬಣ್ಣದ ವಿಗ್ಗು... ಇದು ಯಾವುದೋ ಫ್ಯಾನ್ಸಿ ಡ್ರೆಸ್ ಶೋನ ವಿವರವಲ್ಲ, 'ಬಳ್ಳಾರಿ ನಾಗ' ಎಂಬ ಚಿತ್ರದಲ್ಲಿ ಸಾಹಸಸಿಂಹ ಡಾ. ವಿಷ್ಣುವರ್ಧನ್‌ರವರು ಕಾಣಿಸಿಕೊಂಡಿರುವ ಪರಿ ಇದು!

"ಜಾಗೋರೆ ಜಾಗೋರೆ ಜಾಗ ... ಬಂದಾನೋ ಬಳ್ಳಾರಿ ನಾಗ!'' ಎಂಬ ಬ್ಯಾಕ್‌ಗ್ರೌಂಡ್ ಸಾಂಗಿನ ಜೊತೆ ಮಿರಮಿರ ಮಿಂಚುವ ಬಟ್ಟೆ ತೊಟ್ಟು, ಮೀಸೆ ತಿರುವುತ್ತಾ ವಿಷ್ಣುವರ್ಧನ್ ತೆರೆಯ ಮೇಲೆ ಪ್ರತ್ಯಕ್ಷರಾದ ಕೂಡಲೇ ಪ್ರೇಕ್ಷಕ ಮಹಾಪ್ರಭುವಿಗೆ ಅನ್ನಿಸುವುದು ಒಂದೇ: ಇದೆಲ್ಲಾ ವಿಷ್ಣುವರ್ಧನ್‌ಗೆ ಬೇಕಿತ್ತಾ? ಎಂಬುದು. ಅಷ್ಟೇ ಅಲ್ಲ, ಈ ಚಿತ್ರವನ್ನು ಮಲೆಯಾಳಂನಿಂದ ಕಡ ತರುವ ಆಗತ್ಯವಿತ್ತೇ? ಎಂದೂ ಅನ್ನಿಸದೇ ಇರಲು ಸಾಧ್ಯವಿಲ್ಲ.


ಮಲೆಯಾಳಂನಲ್ಲಿ ಈ ಚಿತ್ರ 'ರಾಜಮಾಣಿಕ್ಯಂ' ಹೆಸರಿನಲ್ಲಿ 2005ರಲ್ಲೇ ಬಿಡುಗಡೆಯಾಗಿತ್ತು. ಖ್ಯಾತ ನಟ ಮಮ್ಮುಟಿ ಇಲ್ಲಿ ವಿಷ್ಣು ವಹಿಸಿರುವ ಪಾತ್ರವನ್ನು ನಿಭಾಯಿಸಿದ್ದರು. ಅಲ್ಲಿನ ನೇಟಿವಿಟಿಗೆ ತಕ್ಕಂತೆ ಕತೆ, ಮಮ್ಮುಟಿಯ ನಟನೆ ಇದ್ದು ಆ ಚಿತ್ರ ಅಲ್ಲಿ ಅದ್ಭುತ ಯಶಸ್ಸು ಕಂಡಿತ್ತು. ಆದರೆ ಕನ್ನಡದಲ್ಲಿ ಚಿತ್ರದ ಮೂಲಕಥೆಯನ್ನು ಬದಲಿಸಲು ಹೋಗಿ ಸಾಕಷ್ಟು ಎಡವಟ್ಟುಗಳನ್ನು ಮಾಡಿಕೊಂಡಿದ್ದಾರೆ ನಿರ್ದೇಶಕ ದಿನೇಶ್ ಬಾಬು. ಮೂಲ ಚಿತ್ರದಲ್ಲಿ ಮಮ್ಮುಟಿ ತಿರುವನಂತಪುರದ ಟಿಪಿಕಲ್ ಮಲೆಯಾಳಂ ಭಾಷೆಯಲ್ಲಿ ಮಾತಾಡುತ್ತಾರೆ; ಇಲ್ಲಿ ವಿಷ್ಣು ಬಾಯಿಂದ ಬಳ್ಳಾರಿ ಭಾಷೆಯನ್ನು ಉದುರಿಸಲು ನಿರ್ದೇಶಕ ಹೊರಟು ಎಡವಿದ್ದಾರೆ. ವಿಷ್ಣು ವಕ್ರವಕ್ರವಾಗಿ ಮೂತಿ ತಿರುವುತ್ತಾ ಗಳಿಗೆಗೊಮ್ಮೆ 'ಬಾರಿ ಭೇಸ್ ಆತಲೇ' ಎಂದು ಹೇಳುವುದನ್ನು ನೋಡಿದರೆ ನಗಬೇಕೋ, ಅಳಬೇಕೋ ಗೊತ್ತಾಗುವುದಿಲ್ಲ.

ಹಾಗೆ ನೋಡಿದರೆ ಕನ್ನಡದಲ್ಲಿ 'ಬಳ್ಳಾರಿ ನಾಗ'ದಂಥ ಚಿತ್ರಗಳು ಯಾವುದೋ ಕಾಲಕ್ಕೇ ಬಂದುಹೋಗಿವೆ. ನಟ ಭಯಂಕರ ಕೆ.ಶಿವರಾಮುಗೋ, ರೂರಲ್ ಸ್ಟಾರ್ ಬಿ.ಸಿ. ಪಾಟೀಲರಿಗೋ, ಕೊನೆ ಪಕ್ಷ ಜಗ್ಗೇಶ್ ಚಿತ್ರಕ್ಕೋ ಈ ಕಥೆ ನಿಜಕ್ಕೂ ಹೊಂದುತ್ತಿತ್ತು. ಆದರೆ ಸರಿ ಸುಮಾರು ಇನ್ನೂರು ಚಿತ್ರಗಳಲ್ಲಿ ನಟಿಸಿರುವ ವಿಷ್ಣುವರ್ಧನ್‌ರ ಇಮೇಜ್‌ಗಾಗಲಿ, ಅವರ ಅನುಭವಕ್ಕಾಗಲಿ ಈ ಚಿತ್ರ ಮತ್ತದರ ಟೈಟಲ್ ಮ್ಯಾಚ್ ಆಗುವುದಿಲ್ಲ.

ಅರವತ್ತರ ಇಳಿವಯಸ್ಸಿನಲ್ಲಿರುವ ವಿಷ್ಣುವರ್ಧನ್ ಈ ಚಿತ್ರದಲ್ಲಿ ನಲವತ್ತರ ಆಸುಪಾಸಿನ ನಾಯಕನಂತೆ ಕಾಣಿಸಿಕೊಂಡಿದ್ದಾರೆ. ಅಲ್ಲದೇ ರಾಜೇಶ್, ಲಕ್ಷ್ಮಿ ಹೆಗಡೆಯಂಥ ಯುವ ಕಲಾವಿದರನ್ನು ವಿಷ್ಣುವರ್ಧನ್‌ರ ತಂಗಿ, ತಮ್ಮಂದಿರ ಪಾತ್ರದಲ್ಲಿ ತೋರಿಸಿದ್ದಾರೆ.

ಚೂರಿ ಚಿಕ್ಕಣ್ಣ ಎಲ್ಲಿ–ಬಳ್ಳಾರಿ ನಾಗನೆಲ್ಲಿ?

ಇತ್ತೀಚೆಗೆ 'ಬಳ್ಳಾರಿ ನಾಗ' ಚಿತ್ರದ ಆಡಿಯೋ ಬಿಡುಗಡೆಯಂದು ಪತ್ರಕರ್ತರ ಮೇಲೆ ಕೆಂಡ ಕಾರುತ್ತ ವಿಷ್ಣು ಅವರು "ನನ್ನ ಚಿತ್ರಕ್ಕೆ 'ಬಳ್ಳಾರಿ ನಾಗ' ಅಂತಾ ಹೆಸರಿಟ್ಟರೆ ಬೈದು ಬರೀತೀರಾ? ಹಿಂದೆ 'ಚೂರಿ ಚಿಕ್ಕಣ್ಣ' ಎಂಬ ಚಿತ್ರ ಬಂದಿರಲಿಲ್ಲವೇ?'' ಎಂದು ಗುಡುಗಿದರು. ಆದರೆ ವಾಸ್ತವವಾಗಿ ಕನ್ನಡಚಿತ್ರರಂಗವನ್ನು ದಶಕಗಟ್ಟಲೇ ಆಳಿದ, ಸದ್ಯಕ್ಕೆ ಚಿತ್ರರಂಗದ ಹಿರಿಯಣ್ಣನಂತಿರುವ ವಿಷ್ಣು ಅವರ ಚಿತ್ರಕ್ಕೆ 'ಬಳ್ಳಾರಿ ನಾಗ' ಎಂಬ ಶೀರ್ಷಿಕೆಯನ್ನು ಯಾರೆಂದರೆ ಯಾರೂ ಸಹಿಸಿಕೊಳ್ಳಲೂ ಸಾಧ್ಯವಿಲ್ಲ, ಇನ್ನು ಥಿಯೇಟರಿಗೆ ಹೋಗಿ ಈ ಸಿನಿಮಾವನ್ನು ನೋಡುವುದಾದರೂ ಹೇಗೆ?




'ಬಳ್ಳಾರಿ ನಾಗ' ಚಿತ್ರ ಬಳ್ಳಾರಿ, ಬೆಳಗಾಂ ಸೇರಿದಂತೆ ಉತ್ತರ ಕನ್ನಡದಲ್ಲಿ ಉತ್ತಮ ಲಾಭ ಮಾಡುತ್ತದೆ ಎಂಬ ಅಂದಾಜಿನಲ್ಲೇ ನಿರ್ಮಾಪಕ ಕೊಬ್ರಿ ಮಂಜು ಅದನ್ನು ಮೊನ್ನೆ ಬಿಡುಗಡೆ ಮಾಡಿದರು. ಆದರೆ ಅವರ ದುರದೃಷ್ಟಕ್ಕೆ ಅಲ್ಲೆಲ್ಲ ನೆರೆ ಬಂದು ಜನ ನರಳುತ್ತಿರುವುದರಿಂದ 'ಬಳ್ಳಾರಿ ನಾಗ'ನನ್ನು ನೋಡುವ ಮಾತೇ ಇಲ್ಲದಂತಾಗಿದೆ. ದಾವಣಗೆರೆಯಂಥ ಏರಿಯಾದಲ್ಲೇ ದಿನಕ್ಕೆ 40 ರಿಂದ 50 ಪರ್ಸೆಂಟ್ ಮಾತ್ರ ಚಿತ್ರಮಂದಿರ ಭರ್ತಿಯಾದರೆ ಹೆಚ್ಚು ಎಂಬಂತಾಗಿದೆ. ಬೆಂಗಳೂರಿನಲ್ಲಂತೂ 'ನಾಗ'ನಿಗೆ ಕಲೆಕ್ಷನ್ನೇ ಇಲ್ಲ.

ಒಂದು ವೇಳೆ ವಿಷ್ಣುವರ್ಧನ್ ತನ್ನ ವಯಸ್ಸಿಗೆ, ಘನತೆಗೆ ಒಪ್ಪುವಂಥ ಚಿತ್ರದಲ್ಲಿ ನಟಿಸಿದ್ದೇ ಆಗಿದ್ದಲ್ಲಿ ಈ ಮಟ್ಟದ ಅಪಹಾಸ್ಯಕ್ಕೆ ಈಡಾಗುವುದರಿಂದ ತಪ್ಪಿಸಿಕೊಳ್ಳಬಹುದಿತ್ತು.

● ಅರುಣ್

ಬಾಬೂ ನಂಬಿ ಕೆಟ್ಟವರು!



ದಿನೇಶ್ ಬಾಬು ಎಂಬ ಮಲೆಯಾಳಿಯನ್ನು ನಂಬಿ ಅದಿನ್ನೆಷ್ಟು ಕನ್ನಡದ ನಿರ್ಮಾಪಕರು ಹಾಳು ಬಾವಿಗೆ ಬೀಳುತ್ತಾರೋ ಗೊತ್ತಿಲ್ಲ. ಕಡಿಮೆ ಬಜೆಟ್‌ನಲ್ಲಿ ನಿರ್ಮಾಣವಾಗಿದ್ದ 'ಮಿ. ಗರಗಸ' ಚಿತ್ರ ಸುಮಾರಾದ ಲಾಭ ಮಾಡಿಕೊಟ್ಟಿದ್ದು ಬಿಟ್ಟರೆ ದಿನೇಶ್ ಬಾಬು ನಿರ್ದೇಶನದ ಇತ್ತೀಚಿನ ಚಿತ್ರಗಳು ಒಂದು ವಾರವೂ ಥಿಯೇಟರಿನಲ್ಲಿ ನಿಲ್ಲುತ್ತಿಲ್ಲ. ಗೋತಾ ಹೊಡೆದ 'ಜನುಮದ ಗೆಳತಿ', 'ಆಕಾಶಗಂಗೆ' ಮುಂತಾದ ಚಿತ್ರಗಳೇ ಇದಕ್ಕೆ ಉದಾಹರಣೆ.

ಆದರೂ ಇತ್ತೀಚೆಗೆ ಹನ್ನೆರಡೇ ದಿನಗಳಲ್ಲಿ ಸಿನಿಮಾ ಮುಗಿಸಿಕೊಡುತ್ತೀನಿ ಎಂದು ಹೇಳಿ 'ಮಿ. ಪೇಂಟರ್' ಎಂಬ ಚಿತ್ರವನ್ನು ನಿರ್ದೇಶಿಸಿಕೊಟ್ಟಿದ್ದ ಈ ಬಾಬು. ಚಿತ್ರೀಕರಣಗೊಂಡಿದ್ದು ಹನ್ನೆರಡೇ ದಿನವಾದರೂ ನಿರ್ಮಾಪಕ ಉಮೇಶ್ ಬಣಕಾರ್ ಮತ್ತು ಗಣೇಶ್ ಅವರುಗಳಿಗೆ ವೆಚ್ಚವಾಗಿದ್ದು ಎರಡು ಕೋಟಿ ರೂಪಾಯಿ! ಇಷ್ಟು ಹಣ ಖರ್ಚು ಮಾಡಿದರೂ ನಿರ್ಮಾಪಕರಿಗೆ ಈವರೆಗೆ ನಯಾಪೈಸೆ ಲಾಭ ಬಂದಿಲ್ಲ. ಇನ್ನು ಶ್ರೀನಗರ ಕಿಟ್ಟಿ ಅಭಿನಯದ 'ಜನುಮದ ಗೆಳತಿ' ಚಿತ್ರದಿಂದ ಅದರ ನಿರ್ಮಾಪಕ ಮನೋಹರ್‌ಗೆ ಏನಿಲ್ಲವೆಂದರೂ ಒಂದೂವರೆ ಕೋಟಿ ರೂಪಾಯಿಗಳ ದೊಡ್ಡ ನಷ್ಟವಾಗಿದೆ.

60ರ ಮುದುಕನಿಗೆ ಯುವಕನಾಗುವ ಆಸೆ!

ಅರವತ್ತು ವರ್ಷ ವಯಸ್ಸಾಗಿರುವ ವಿಷ್ಣುವರ್ಧನ್ ಅವರಿಗೆ ತಾನಿನ್ನೂ ಹೀರೋ ಆಗಿಯೇ ಕಾಣಿಸಿಕೊಳ್ಳಬೇಕೆಂಬ ತವಕ ಇನ್ನೂ ಇಂಗಿದಂತಿಲ್ಲ. 'ಅಂದು ರಾಮಾಚಾರಿ, ಇಂದು ಬಳ್ಳಾರಿ ನಾಗ' ಎಂದು ವಿಷ್ಣು ನಂಬಿದ್ದರೂ ಅವರ ದೇಹ ವಯಸ್ಸಿನ ಭಾರಕ್ಕೆ ಕುಸಿಯುತ್ತಿದೆ. ಅವರ ತೋಳುಗಳಲ್ಲಿನ ಮಾಂಸಖಂಡ ಲೊಳಲೊಳನೆ ಜೋತುಬಿದ್ದಿವೆ. ಕುತ್ತಿಗೆಯ ತುಂಬ ನೆರಿಗೆಗಳು. ಮುಖದಲ್ಲೂ ವಯಸ್ಸಾಗಿರುವ ಗುರುತುಗಳು. ಆದರೂ "ನಾನಿನ್ನೂ ಹೀರೋ ಆಗೇ ಇರಬೇಕು'' ಎಂಬ ಮಹದಾಸೆ. ಮಾತ್ರವಲ್ಲ, ತನ್ನ ವಯಸ್ಸಿಗೆ ಸೂಕ್ತವಾದ ಮುದುಕನ ಪಾತ್ರಗಳಲ್ಲಿ ಕಾಣಿಸಿಕೊಳ್ಳದಿರುವ ಹಠ ಬೇರೆ.

ಇದಕ್ಕೆ ಎಸ್. ನಾರಾಯಣ್ ನಿರ್ದೇಶಿಸಬೇಕಿದ್ದ 'ದೊಡ್ಡ ಮನುಷ್ಯ' ಎಂಬ ಚಿತ್ರವೇ ಉತ್ತಮ ಉದಾಹರಣೆ. 'ದೊಡ್ಡ ಮನುಷ್ಯ' ಚಿತ್ರ ವಿಷ್ಣು ಅವರ ಮುಂದಿನ ಚಿತ್ರ ಎಂಬ ಜಾಹಿರಾತುಗಳೂ ಪ್ರಕಟಗೊಂಡಿದ್ದವು. ತಮಿಳಿನ 'ಮರ್ಯಾದೈ' ಚಿತ್ರದ ರೀಮೇಕದು. ಅಲ್ಲಿ ನಟ ವಿಜಯಕಾಂತ್ ಕೂದಲು ನೆರೆತ ಮುದುಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. 'ದೊಡ್ಡ ಮನುಷ್ಯ'ನ ಚಿತ್ರೀಕರಣಕ್ಕೆ ಎಲ್ಲ ಸಿದ್ಧತೆಗಳು ನಡೆಯುತ್ತಿದ್ದ ಸಂದರ್ಭದಲ್ಲೇ ಇದ್ದಕ್ಕಿದ್ದಂತೆ ತಮಿಳಿನ ಮೂಲ ಚಿತ್ರದ ಸೀಡಿ ತರಿಸಿಕೊಂಡು ನೋಡಿದ ವಿಷ್ಣುಗೆ "ನಾನ್ಯಾಕೆ ಮುದುಕನ ಪಾತ್ರದಲ್ಲಿ ನಟಿಸಬೇಕು'' ಎಂಬ ಫೀಲಿಂಗ್ ಕಾಡಿತೋ ಏನೋ. ಅವರು "ಏನೇ ಆದರೂ ನಾನು ಈ ಚಿತ್ರದಲ್ಲಿ ನಟಿಸುವುದಿಲ್ಲ'' ಎಂದುಬಿಟ್ಟರು. ಹೀಗಾಗಿ 'ಯಜಮಾನ' ಚಿತ್ರದ ನಿರ್ಮಾಪಕ ರೆಹಮಾನ್ ನಿರ್ಮಿಸಬೇಕಿದ್ದ 'ದೊಡ್ಡ ಮನುಷ್ಯ' ಡ್ರಾಪ್ ಆಯಿತು.

ನಾಗಾಭರಣರಂತಹ ನಿರ್ದೇಶಕರು ಕೂಡಾ ವಿಷ್ಣುರನ್ನು ಹಾಕಿಕೊಂಡು 'ನಂ ಯಜಮಾನ್ರು' ಮಾಡುತ್ತಾರೆ! ಆದರೆ ಪ್ರೇಕ್ಷಕ ಮಾತ್ರ ಭರಣರಿಗೆ 'ಯಜಮಾನ್ರಿದ್ರೆ ನಿಂಗೆ ಇರಬಹುದಯ್ಯ, ನಮಗ್ಯಾವ ಯಜಮಾನ?' ಅಂತಾ ಮೂರೇ ದಿನಕ್ಕೆ ಓಡಿಸಿಬಿಟ್ಟರು.

ಒಂದೆಡೆ, ತನ್ನ ವಯಸ್ಸಿಗೆ ತರವಲ್ಲದ ಪಾತ್ರಗಳಲ್ಲಿ ವಿಷ್ಣು ವಿಜೃಂಭಿಸಬೇಕೆಂದುಕೊಂಡಿದ್ದರೆ, ಇನ್ನೊಂದೆಡೆ ಅಂಥ ಸಿನೆಮಾಗಳನ್ನು ನೋಡಿ ನೋಡಿ ಅವರ ಅಭಿಮಾನಿಗಳೇ ರೋಸಿಹೋಗಿದ್ದಾರೆ. ಇದನ್ನು ಅವರ ಪರ್ಮನೆಂಟ್ ನಿರ್ಮಾಪಕರಂತಿದ್ದ ಸೂರಪ್ಪ ಬಾಬು, ವಿಜಯ್ ಕುಮಾರ್, ತ್ಯಾಗುರಂತಹವರು ಅರಿತು ಈಗ 'ಸಿಂಹದ ಸಹವಾಸ ಬೇಡ' ಎಂದು ದೂರ ಸರಿದಿದ್ದಾರೆ. ಆದರೆ ಅದ್ಯಾಕೋ ಅದು ಸ್ವತಃ ವಿಷ್ಣು ಸಾಹೇಬರಿಗೆ ಅರ್ಥವಾಗುತ್ತಿಲ್ಲ. ●

"ದಿನೇಶ್‌ಬಾಬು ಈಗ ಮೆಂಟಲ್ಲು..."

"ನಿರ್ದೇಶಕ ದಿನೇಶ್ ಬಾಬುಗೆ ಮತಿಭ್ರಮಣೆಯಾಗಿದೆ. ಅವರಿಗೆ ಉತ್ತಮ ಚಿಕಿತ್ಸೆ ನೀಡುವ ಅಗತ್ಯವಿದೆ.''

ಹೀಗೆಂದು ಹೇಳಿದವರು ಬೇರೆ ಯಾರೂ ಅಲ್ಲ, ಮೊನ್ನೆಯಷ್ಟೇ ಬಿಡುಗಡೆಯಾದ ದಿನೇಶ್ ಬಾಬು ನಿರ್ದೇಶನದ 'ಬಳ್ಳಾರಿ ನಾಗ' ಚಿತ್ರದ ನಿರ್ಮಾಪಕ ಕೆ.ಮಂಜು. ಅದೂ ಚಿತ್ರದ ನಾಯಕ ವಿಷ್ಣುವರ್ಧನ್ ಅವರ ಸಮ್ಮುಖದಲ್ಲೇ, ವಿಷ್ಣು ಮನೆಯಲ್ಲೇ ಕರೆದ ಪತ್ರಿಕಾಗೋಷ್ಠಿಯಲ್ಲಿ! ತನ್ನ ಪಟ್ಟದ ಶಿಷ್ಯ ಮಂಜು, ಈ ರೀತಿ ತನ್ನ ಅಚ್ಚುಮೆಚ್ಚಿನ ನಿರ್ದೇಶಕ ಬಾಬು ಮೇಲೆ ಆರೋಪ ಹೊರಿಸಿದಾಗ ವಿಷ್ಣು ಏನು ಮಾಡಿದರು ಗೊತ್ತೆ? ಮಂಜು ಹೇಳಿದ್ದೇ ಸರಿ ಎಂಬ ರೀತಿಯಲ್ಲಿ ಹೌದೆಂದು ತಲೆಯಲ್ಲಾಡಿಸಿದರು.



"ದಿನೇಶ್ ಬಾಬು ನನ್ನ ಹೃದಯಕ್ಕೆ ಹತ್ತಿರವಾದವರು, ಅವರೊಬ್ಬ ಉತ್ತಮ ತಂತ್ರಜ್ಞ, ಆದರೆ ಇತ್ತೀಚಿನ ದಿನಗಳಲ್ಲಿ ಅವರ ವರ್ತನೆ ಸಂಪೂರ್ಣವಾಗಿ ಬದಲಾಗಿದೆ. ಇತ್ತೀಚೆಗೆ ಅವರು ಚಿತ್ರದ ಡಬ್ಬಿಂಗ್, ರಿ-ರೇಕಾರ್ಡಿಂಗ್, ಸಂಗೀತ ಸಂಯೋಜನೆ ಇದ್ಯಾವುದಕ್ಕೂ ಬರುವುದೇ ಇಲ್ಲ, ಮೊದಲೆಲ್ಲ ಅವರು ಹಾಗಿರಲಿಲ್ಲ. ಅವರು ಆದಷ್ಟು ಬೇಗ ತಮ್ಮ ವರ್ತನೆಯನ್ನು ಬದಲಾಯಿಸಿ ಮೊದಲಿನಂತಾಗಬೇಕು ಎಂಬುದಷ್ಟೇ ನನ್ನ ಕಳಕಳಿ'' ಎಂದು ಹೇಳುವ ಮೂಲಕ ವಿಷ್ಣು ನಿರ್ಮಾಪಕ ಮಂಜು ಅವರಿಗೆ ಸಂಪೂರ್ಣ ಬೆಂಬಲ ಘೋಷಿಸಿದರು.

ಮಂಜು ಕೆಂಡಾಮಂಡಲವಾಗಿ ದಿನೇಶ್ ಬಾಬು ಮೇಲೆ ಆರೋಪಗಳ ಸುರಿಮಳೆಯನ್ನೇ ಸುರಿಸಿದರು. "ಈ ಮನುಷ್ಯನಿಗೆ ನಾನು ಒಂದೇ ಕಂತಿನಲ್ಲಿ ಸಂಪೂರ್ಣವಾದ ಸಂಭಾವನೆಯನ್ನು ನೀಡಿದ್ದೇನೆ. ಕೊನೆಗೆ ನಿಗದಿತ ಸಂಭಾವನೆಗಿಂತಲೂ ಹೆಚ್ಚು ಹಣವನ್ನು ಸಹ ಕೊಟ್ಟಿದ್ದೇನೆ. ಆದರೂ ಈ ಮನುಷ್ಯ ಚಿತ್ರದ ರಿ-ರೇಕಾರ್ಡಿಂಗ್, ಗ್ರೇಡಿಂಗ್, ಎಡಿಟಿಂಗ್ ಕೆಲಸಗಳಿಗೆ ಹಾಜರಾಗದೆ ತನ್ನ ಜವಾಬ್ದಾರಿಗಳಿಂದ ನುಣುಚಿಕೊಂಡಿದ್ದಾರೆ. ಅಲ್ಲದೇ ಪತ್ರಿಕಾಗೋಷ್ಠಿಯನ್ನು ಕರೆದರೆ ಚಿತ್ರದ ಬಗ್ಗೆ ಪತ್ರಕರ್ತರೊಂದಿಗೆ ಏನೂ ಮಾತನಾಡದೇ ಅಲ್ಲೂ ಕೆಲಸದಿಂದ ತಪ್ಪಿಸಿಕೊಳ್ಳುತ್ತಾರೆ. ಕೊನೆಕೊನೆಗೆ ಈ ಮನುಷ್ಯ ಫೋನ್‌ಗೂ ಸಿಗಲ್ಲ. ಇಂತಹವರ ಜೊತೆ ಯಾರು ತಾನೇ ಕೆಲಸ ಮಾಡಲು ಸಾಧ್ಯ? ಏನೇ ಆದರೂ ಮುಂಬರುವ ದಿನಗಳಲ್ಲಿ ನನ್ನ ನಿರ್ಮಾಣದ ಚಿತ್ರಕ್ಕೆ ನಾನು ದಿನೇಶ್‌ಬಾಬುವನ್ನು ಹಾಕಿಕೊಳ್ಳುವುದಿಲ್ಲ'' ಎಂದು ಮಂಜು ಘೋಷಿಸಿದರು.

"ಈ ಮನುಷ್ಯ ಕನ್ನಡ ಚಿತ್ರರಂಗಕ್ಕೆ ಬಂದು 10-15 ವರ್ಷಗಳಾಗುತ್ತಾ ಬಂದವು. ಆದರೂ ಇನ್ನೂ ಒಂದೇ ಒಂದು ಅಕ್ಷರ ಕನ್ನಡ ಮಾತನಾಡುವುದಿಲ್ಲ, ಮೊನ್ನೆ ಮೊನ್ನೆ ಬಂದ ನಾಯಕಿಯರಾದ ಪೂಜಾ ಗಾಂಧಿ, ಪಾರ್ವತಿ ಮೆನನ್... ಮೊದಲಾದವರು ಸ್ಪಷ್ಟವಾಗಿ ಕನ್ನಡ ಮಾತನಾಡಲು ಸಾಧ್ಯವಾಗುವುದಾದರೆ ಈ ಮನುಷ್ಯನಿಂದ ಯಾಕೆ ಸಾಧ್ಯವಾಗುವುದಿಲ್ಲ ಎಂದು ನನಗೆ ಆಶ್ಚರ್ಯವಾಗುತ್ತಿದೆ. ಹಿಂದೊಮ್ಮೆ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಜೊತೆ ಕೂಡ ಈ ಬಾಬು ಜಗಳವಾಡಿದಾಗ ವಾಣಿಜ್ಯ ಮಂಡಳಿ ಈತನಿಗೆ ಒಂದು ವರ್ಷದ ಬಹಿಷ್ಕಾರ ಹಾಕಿತ್ತು, ಆದರೆ ಈ ಬಾರಿ ನಾನು ವಾಣಿಜ್ಯ ಮಂಡಳಿಯ ಮೊರೆ ಹೋಗುವುದಿಲ್ಲ. ಈ ಬುದ್ಧಿಭ್ರಮಣೆಯಾದ ಮನುಷ್ಯನಿಗೆ ಬುದ್ಧಿ ಕಲಿಸುತ್ತೇನೆ'' ಎಂದು ಕೆಂಡಕಾರಿದರು.

ಅದೇ ಸಂದರ್ಭದಲ್ಲಿ ದಿನೇಶ್‌ಬಾಬು ಮೇಲೆ ಮಂಜು ಮತ್ತೊಂದು ದೊಡ್ಡ ಆರೋಪವನ್ನು ಹೊರಿಸಿದರು. "ಈತನಿಗೆ ಹಣದ ಹುಚ್ಚು ಹಿಡಿದಿದೆ. ಚಿತ್ರದಲ್ಲಿ ಕಲಾವಿದರಿಗೆ ಅವಕಾಶಕೊಟ್ಟು ಅವರಿಂದ ಹಣವನ್ನು ಕೂಡಾ ವಸೂಲಿ ಮಾಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ'' ಎಂದು ಮಂಜು ಹೇಳಿದರು.



ಅಂತೂಇಂತೂ ಹಿಂದೊಮ್ಮೆ ಕನ್ನಡ ಚಿತ್ರ ನಿರ್ಮಾಪಕರ ಡಾರ್ಲಿಂಗ್ ಎನಿಸಿಕೊಂಡಿದ್ದ ದಿನೇಶ್‌ಬಾಬು ಸದ್ಯದಲ್ಲೇ ಗಂಟುಮೂಟೆ ಕಟ್ಟಿಕೊಂಡು ಕೇರಳಕ್ಕೆ ವಾಪಸ್ ಹೋಗುವ ಪರಿಸ್ಥಿತಿ ಸೃಷ್ಟಿಯಾಗಿದೆ.

ಯಾಕೆಂದರೆ ದಿನೇಶ್‌ಬಾಬು ಅವರ ಗಾಡ್‌ಫಾದರ್ ಎನಿಸಿಕೊಂಡಿದ್ದ ಸ್ವತಃ ವಿಷ್ಣು ಕೂಡಾ ಈಗ ಅವರ ಕೈಬಿಟ್ಟಿದ್ದಾರೆ. ಹೀಗಾಗಿ ದಿನೇಶ್ ಬಾಬುನನ್ನು ವಿರೋಧಿಸುವ ನಿರ್ದೇಶಕರೆಲ್ಲ ಇದೇ ಸಮಯವನ್ನು ಸದುಪಯೋಗಪಡಿಸಿಕೊಂಡು ಆತನನ್ನು ಮೂಲೆಗುಂಪು ಮಾಡುವ ಸಾಧ್ಯತೆ ಇದೆ.

ಇತ್ತೀಚಿನ ದಿನಗಳಲ್ಲಿ ದಿನೇಶ್ ಬಾಬು ಕಾರ್ಯವೈಖರಿಯ ಬಗ್ಗೆಯೂ ಉದ್ಯಮದ ಅನೇಕ ಹಿರಿಯರು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಉದಾಹರಣೆಗೆ 10-12 ದಿನಗಳಲ್ಲಿ ಸಿನಿಮಾವನ್ನು ಮಾಡಿ ಮುಗಿಸುವ ಅವಸರದ ಅಡುಗೆಗೆ ಈ ಬಾಬು ಪ್ರ(ಕು)ಖ್ಯಾತಿ ಗಳಿಸಿದ್ದರು. ಇದರಿಂದಾಗಿ ಚಿತ್ರದ ಗುಣಮಟ್ಟ ಕುಸಿಯುತ್ತಿದ್ದ ಮಾತ್ರವಲ್ಲ, ಗಾಂಧಿನಗರದ ಒಟ್ಟಾರೆ ಆರ್ಥಿಕ ಪರಿ ಯನ್ನು ಈ ತರಹದ ಚಿತ್ರಗಳು ಬುಡಮೇಲು ಮಾ ತ್ತಿದ್ದವು. ಕೋಮಲ್ ನಟಿಸಿದ್ದ 'ಮಿ.ಗರಗಸ' ವ ಯೋಗೇಶ್ ನಟಿಸಿದ 'ಮಿ.ಪೇಂಟರ್' ಎಂಬ ಚಿತ್ರಗಳೇ ಇದಕ್ಕೆ ಉದಾಹರಣೆ. ಬೇರೆ ನಿರ್ಮಾ ನಿರ್ದೇಶಕರುಗಳು ವರ್ಷಾನುಗಟ್ಟಲೆ ಚಿತ್ರವನ್ನು ಚಿತ್ರಿ ಈತ ಹತ್ತೇ ದಿನಗಳಲ್ಲಿ ಶಾರ್ಟ್‌ಕಟ್ ವಿಧಾನ ಚಿತ್ರಮಾಡಿ ದಿಢೀರನೇ ಹಣ ಗಳಿಸುತ್ತಿದ್ದರು. ವಿ ವೆಂದರೆ ಯಾವುದೋ ಇಂಗ್ಲಿಷ್ ಚಿತ್ರವನ್ನು ಕನ್ನ ಭಟ್ಟಿ ಇಳಿಸುತ್ತಿದ್ದ ಈ ಮಲೆಯಾಳಿ ನಿರ್ದೇಶಕ ಇಂ ಚಿತ್ರಗಳಿಗೆ ದುಪ್ಪಟ್ಟು ಪಾಲು ಸಂಭಾವನೆ ಪಡೆ ತ್ತಿದ್ದರು. ಇಂತಹ ಚಿತ್ರಗಳ ನಿರ್ಮಾ ತಪ್ಪೇನಲ್ಲದಿದ್ದರೂ ಅದನ್ನೇ ಮಾಡು ಬರುವ ಚಾಳಿಯನ್ನು ಆರಂಭಿಸಿದ ಬಾ ಬಗ್ಗೆ ಅನೇಕರಿಗೆ ಬೇಸರ ಬಂದಿದ್ದಂ ನಿಜ.

'ಬಳ್ಳಾರಿ ನಾಗ' ಚಿತ್ರಕ್ಕಿಂತ ಮೊದ ಪ್ರಾರಂಭವಾದ ಮನೋಹರ್ ನಿರ್ಮಾ ಣದ 'ಮಾಸ್ಟರ್' ಚಿತ್ರದ ಕಥೆಯೂ ಅ ಆಗಿದೆಯೆಂಬುದು ಇನ್ನೊಂದು ಬೇಸ ವಿಷಯ. ಆ ಚಿತ್ರದ ನಾಯಕ ಕೂಡಾ ವಿ ಎಂಬುದನ್ನಿಲ್ಲಿ ಸ್ಮರಿಸಬಹುದು. ಸ್ವತಃ ವಿಷ್ಣು ಹೇಳ ಪ್ರಕಾರ ದಿನೇಶ್ ಬಾಬು ಆ ಚಿತ್ರದ ಅನೇಕ ಭಾಗಗ ರಿ-ಶೂಟ್ ಮಾಡಬೇಕೆಂದು ಪುನಃ ಅವರ ಬಂದಿದ್ದರಂತೆ. ಹೀಗೆ ರಿ-ಶೂಟ್ ಮಾಡುತ್ತಾ ಹೋ ನಿರ್ಮಾಪಕನ ಗತಿಯೇನಾಗಬಹುದು? ಎಂದು ವಿ ಖೇದ ವ್ಯಕ್ತಪಡಿಸಿದರು.

● ಶ್ರೀ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44